TIGHT BINDING BOOK

UNIVERSAL
LIBRARY
OU_198504
UNIVERSAL
LIBRARY

K 84. K. 5280
ಐ12 M ನಜನರ್ಸ್ N.S.
ಮರೆಯಾಬ್ಬನ ವಾ ಕ್ರಿ 1957

ಕರ್ನಾಟಕ ಸಾಹಿತ್ಯ ಮಂದಿರ,
ಧಾರವಾಡ.

# ಮರೆಯಲಾಗದ ಯಾತ್ರೆ

( ಲಲಿತ ಪ್ರಬಂಧ ಸಂಕಲನ )

**ಎನ್. ಎಸ್. ಗದಗಕರ**

ಬೆಲೆ : **ಹದಿನೈದು ಆಣೆ**

ಪ್ರಕಾಶಕರು:
ಎನ್. ಎಸ್. ಗದಗಕರ
ಶುಕ್ರವಾರ ಪೇಟಿ, ನವಿಲೂರ ಅಗಸಿ
ಧಾರವಾಡ

*All Rights reserved by the author.*

ಮುದ್ರಕರು:
ಶೇ. ಗೋ. ಕುಲಕರ್ಣಿ
ಸಾಧನ ಮುದ್ರಣಾಲಯ,
ಧಾರವಾಡ

# ನನ್ನ ನುಡಿ

ಎರಡು ಮೂರು ವರುಷಗಳ ಕಾಲಾವಧಿಯಲ್ಲಿ ಬರೆದ ಹನ್ನೊಂದು ಲಲಿತ ಪ್ರಬಂಧಗಳ ಈ 'ಮರೆಯಲಾಗದ ಯಾತ್ರೆ' ಎಂಬ ಹೊತ್ತಿಗೆಯನ್ನು—ಶ್ರೀಮಾನ್ ಲಕ್ಷ್ಮಣರಾವ ಬೇಂದ್ರೆಯವರ ವಿಸ್ತೃತವಾದ ಹಾಗೂ ಮಾರ್ಮಿಕ ಮುನ್ನುಡಿಯೊಡನೆ ಕನ್ನಡ ರಸಿಕ ಓದುಗರೆದುರು ಇಟ್ಟಿರುವೆ. ತಮ್ಮ ಕಾರ್ಯದಲ್ಲಿಯೂ ನನ್ನ ತೊಂದರೆ ಸಹಿಸಿಕೊಂಡು ಇಂತಹ ಆತ್ಮೀಯತೆಯ ಮುನ್ನುಡಿಯನ್ನು ಒದಗಿಸಿ ಪ್ರಸ್ತುತ ಸಂಕಲನೆಗೆ ವಿಶೇಷವಾಗಿ ಕಳೆಕಟ್ಟಿಸಿದ ಗಣ್ಯ ಸಾಹಿತಿಗಳಾದ ಶ್ರೀಯುತ ಎಲ್. ಜೆ. ಬೇಂದ್ರೆಯವರಿಗೆ ನಾನು ಚಿರಋಣಿ

ಇಲ್ಲಿಯ ಹಲವು ಪ್ರಬಂಧಗಳು ಈ ಮೊದಲೇ ಜಯಂತಿ, ಜಯಕರ್ನಾಟಕ, ಜೀವನ, ಕರ್ಮವೀರ— ಮೊದಲಾದ ಪತ್ರಿಕೆಗಳ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಆದಕ್ಕಾಗಿ ಆ ಪತ್ರಿಕೆಗಳ ಮಾನ್ಯ ಸಂಪಾದಕರಿಗೂ, ನನ್ನ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಎಂದಿನಿಂದಲೂ ಆಸ್ಥೆ ತಳೆದ ಸರ್ವಶ್ರೀ ಸಿ ಡಿ. ಹಳಪೇಟೆ, ಆರ್. ಕೆ. ಕೊಟ್ಟಲಗಿ, ಬಿ. ಆರ್. ವಾಡಪ್ಪಿ, ದತ್ತಾತ್ರೇಯ ಕುಲಕರ್ಣಿ, ಅವರಿಗೂ, ಕೊನೆಗೆ ಸಾಧನ ಮುದ್ರಣಾಲಯದ ಒಡೆಯರಿಗೂ ನನ್ನ ಹಾರ್ದಿಕ ವಂದನೆಗಳು ಸಲ್ಲುತ್ತವೆ.

ಧಾರವಾಡ

೨೭–೯–೫೭

**ಎನ್. ಎಸ್. ಗದಗಕರ**

# ಮುನ್ನುಡಿಯ ಹೆಸರಿನಲ್ಲಿ ಎರಡು ಮಾತು

ಶ್ರೀಮಾನ್ ಗದಗಕರರವರು ತಮ್ಮ ಈ ಲಲಿತಪ್ರಬಂಧ ಸಂಕಲನಕ್ಕೆ ಮುನ್ನುಡಿ ರೂಪವಾಗಿ ಏನಾದರೂ ಬರೆಯಲು ನನ್ನನ್ನು ಕೇಳಿಕೊಂಡರು. ನಾನು ಹಿಂದೆಮುಂದೆ ನೋಡದೆ ಒಪ್ಪಿಕೊಂಡೆ. ಅದು, ಲಲಿತ ಪ್ರಬಂಧ ಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತನು ನಾನು ಎಂಬ ಹೆಮ್ಮೆಯಿಂದಲ್ಲ. ಹಾಗೆ ನೋಡಿದರೆ, ನಾನು ಇದುವರೆಗೆ ಬರೆದುದು ಸಣ್ಣಕತೆ, ನಾಟಕ, ಏಕಾಂಕ– ಇವುಗಳೇ ಆಗಲಿ, ಲಲಿತ ಪ್ರಬಂಧದ ಕೈದೋಟದಲ್ಲಿ ಕೈಹಾಕಿ ದವನೆ ಅಲ್ಲ. ಹಾಗಾದರೆ ನಾನು ಒಪ್ಪಿಕೊಂಡುದು ಏಕೆ ? ಅದಕ್ಕೆ ಸಾಕಷ್ಟು ಸಬಲ ಕಾರಣಗಳಿವೆ. ನನ್ನ ಹಾಗು ಶ್ರೀ ಗದಗಕರರ ಸ್ವಭಾವದಲ್ಲಿ ಸಾಧರ್ಮ್ಯ ಬಹಳಿದೆ. ಅವರು ಮುಗದಯ್ಯ, ನಾನೂ ಅಷ್ಟೆ. ಯಾವುದನ್ನೂ ದೂರ ನಿಂತು ನೋಡುವ ಅಪೇಕ್ಷೆ ಅವರಿಗೆ; ನನಗೂ ಹಾಗೆಯೆ. ಸಭೆಯಲ್ಲಿ ಕೂಡ ಅವರು ಒತ್ತಾಯಕ್ಕಾಗಿಯೇ ಮಾತನಾಡುತ್ತಾರೆ; ನಾನು ಅದಕ್ಕೂ ಹಿಂಜರಿಯುತ್ತೇನೆ. ಮಾತಿನಿಂದ ಕೂಡ ಯಾರನ್ನೂ ನೋಯಿಸಲು ಅವರು ಮನಸ್ಸು ಮಾಡರು; ನನಗೂ ಅದೇ ಇಷ್ಟ. ಆತ್ಮಪ್ರಸಿದ್ಧಿಯ ಹವ್ಯಾಸ, ಯಥೋಚಿತ ಟೀಕೆಗೂ ಮಣಿಯದ ಮುಠ್ಠಾಳತನ, ಅವರಲ್ಲಿಯೂ ಇಲ್ಲ, ನನ್ನಲ್ಲಿಯೂ ಇಲ್ಲ. (ಇದರ ಮೇಲಿಂದ ನಮ್ಮೀರ್ವರಲ್ಲಿ ಆತ್ಮಪ್ರಶಂಸೆ ಸಾಕಷ್ಟಿದೆ ಎಂದು ನಮ್ಮನ್ನು ಸೇರದವರು ದೂರಬಹುದು!) ಒಂದೇ ಮಾತಿನಲ್ಲಿ ಹೇಳುವುದಾದರೆ ನನ್ನದು, ಶ್ರೀ ಗದಗಕರರದು ಮುಟ್ಟಲು ಮುರಕ ಸ್ವಭಾವ ಮೇಲಾಗಿ ಅವರೂ ನಾನೂ ಒಂದೇ ಊರಿನವರು. "ಏಕ ಗ್ರಾಮ ಸದಾ ಪ್ರೀತಿ." ಈ ಸಂಕಲನಕ್ಕೆ ಮುನ್ನುಡಿ ಬರೆಯಲು ನಾನು ಮನಸ್ಸು ಮಾಡಿದುದಕ್ಕೆ ಇಷ್ಟು ಕಾರಣಗಳು ಸಾಕಲ್ಲವೆ ?

ಶ್ರೀ ಗದಗಕರರು ಈ ಮೊದಲು ಲಲಿತ ಪ್ರಬಂಧಗಳ ನಾಲ್ಕು ಸಂಗ್ರಹ ಗಳನ್ನು ಹೊರಗೆಡಹಿದ್ದಾರೆ. ಈಗ ಬರುತ್ತಿರುವುದು ಅವರ ಐದನೆಯ ಸಂತಾನ. ಅವರ ಹೊಟ್ಟೆ ದೊಡ್ಡದೆಂದೇ ಕಾಣುತ್ತದೆ. ಇಂತಹ ಲಲಿತ

ರತ್ನಗಳು ಇನ್ನೂ ಆ ಹೊಟ್ಟೆಯಲ್ಲಿ ಎಷ್ಟು ಕಾಯ್ದು ಕುಳಿತಿವೆಯೋ ಯಾರು ಬಲ್ಲರು ?

ಮಧುರ, ಮುಗ್ಧ ಸ್ವಭಾವ ಲಲಿತ ಪ್ರಬಂಧಕ್ಕೆ ಹುಲುಸಾದ ಭೂಮಿ. ಸ್ವಭಾವದ ಒರಟುತನವಾಗಲಿ, ಬುದ್ಧಿಯ ಅತಿತಾರ್ಕಿಕತೆಯಾಗಲಿ ಅದಕ್ಕೆ ಸಲ್ಲದು. ಲಲಿತ ಪ್ರಬಂಧಕಾರನಿಗೆ ವಿಶ್ವದ ಯಾವ ವಸ್ತುವೂ ವಿಷಯವಾಗಬಹುದು. ಅವನು ಕಡ್ಡಿಯಲ್ಲಿ ಗುಡ್ಡದಂಥ ಅರ್ಥ ತೆಗೆಯುತ್ತಾನೆ. ಗುಡಿಸಲಲ್ಲಿ ಗುಡಿಯ ಪಾವಿತ್ರ್ಯದ ದರ್ಶನ ಕಾಣುತ್ತಾನೆ. ಅವನಿಗೆ ವಿಷಯವೆಂಬುದು ನಿಮಿತ್ತ ಮಾತ್ರ ಕೈಗೆ ಸಿಕ್ಕ ವಸ್ತುವನ್ನೆತ್ತಿ ಆತ ಪ್ರಕಟೀಕರಣದ ಎರಕದಲ್ಲಿ ರೂಪಿಸುತ್ತಾನೆ. ಕಿರಿದರಲ್ಲಿ ಹಿರಿದರ ಸಾಂಕೇತಿಕತೆಯನ್ನು ಕಂಡು, ಅದನ್ನು ಹೃದ್ಯವಾಗಿ, ಮನೋಜ್ಞವಾಗಿ, ಲಲಿತವಾಗಿ, ಮಧುರವಾಗಿ, ಮುದ್ದಾಗಿ ಹೇಳುತ್ತಾನೆ ತನ್ನದೇ ಆದ ಶೈಲಿಯ ಶಬ್ದರೂಪಕ್ಕೆ ನಾದ, ರಸ, ಗಂಧದ ಪರಿಮಳವನ್ನು ಬೀರಿ, ಅದನ್ನು ತನ್ನ ವ್ಯಕ್ತಿವೈಶಿಷ್ಟ್ಯದ ಉಸಿರಾಗಿ ಮಾಡುತ್ತಾನೆ ಲಲಿತ ಪ್ರಬಂಧದಲ್ಲಿ ನಾವು ಕಾಣುವುದು ಅವನ ಆತ್ಮಾವಿಷ್ಕಾರದ ರಮ್ಯ–ರುಚಿರ ಸ್ವರೂಪ. ತನ್ನ ಕಲ್ಪನೆ, ವಿಚಾರ, ಸವಿನೆನಪುಗಳ ತ್ರಿವೇಣಿಸಂಗಮದಲ್ಲಿ ಮಿಂದು ಮೈಗೊಂಡು ಬಂದ ಸುರಮ್ಯ ಪ್ರಬಂಧದೇವತೆಗೆ ಡಾಕಾದ ಮಲ್‌ಮಲ್ಲಿನಂತಹ ಶಾಬ್ದಿಕ ಆವರಣವನ್ನು ಹೊದಿಸಿ, ಅವಳ ಸೌಂದರ್ಯಕ್ಕೆ ಕುತೂಹಲ ಬೆರಸುತ್ತಾನೆ. ಅದನ್ನು ಹೃದ್ಯವಾಗಿ ಮಾಡುತ್ತಾನೆ. ಔಚಿತ್ಯದ ಅತಿಕ್ರಮಣ ಲಲಿತ ಪ್ರಬಂಧಕ್ಕೆ ಬರಷಣ. ಪಂಡಿತರ ಶಾಸ್ತ್ರೀಯ ಚರ್ಚೆ, ಪಾರಮಾರ್ಥಿಕರ ತತ್ತ್ವಾನುಸಂಧಾನ, ಹರಟೆಗಾರರ ಅತಿರಂಜಕತೆ ಇದಕ್ಕೆ ಒಗ್ಗುವದಿಲ್ಲ. ಬರೆಹಗಾರ ಕಥೆ-ಕಾದಂಬರಿಯಲ್ಲಿ ಪೂರ ಹಿನ್ನೆಲೆಯಲ್ಲಿ ಉಳಿದು ಬಿಡುತ್ತಾನೆ. ಆತ್ಮಚರಿತ್ರೆಯಲ್ಲಿ ತಾನೇತಾನಾಗಿ ಕಾಣಿಸಿ ಕೊಳ್ಳುತ್ತಾನೆ ಆದರೆ ಲಲಿತ ಪ್ರಬಂಧದಲ್ಲಿ ಮಾತ್ರ ಅವನ ಆತ್ಮಾವಿಷ್ಕಾರ ಸ್ಫುಟವಾಗಿ ಕಂಡರೂ, ಸ್ಫೋಟದಂತೆ ಕೆರಳಿಸುವದಿಲ್ಲ. ಅವನ ತುಂಟ ಕ್ರೀಡಾವೃತ್ತಿ, ಮೋಜಿನ ಕಲ್ಪನೆಗಳು, ಸೂಕ್ಷ್ಮ ತತ್ತ್ವಚಿಂತನ, ಹಿತಮಿತವಾಗಿ ಚಿಕ್ಕಳಗುಳಿಯಾಡಿಸಿದಂತೆ, ನಮ್ಮಲ್ಲಿ ಸದ್ಭಾವನೆಯ ನವಿರನ್ನುಂಟುಮಾಡುತ್ತವೆ. ಬರೆಹಗಾರನಲ್ಲಿ

ವೈಚಿತ್ರ್ಯಪೂರ್ಣವಾದ ವ್ಯಕ್ತಿತ್ವ, ವಿಕಸಿತವಾದ ರಸಿಕತೆ, ಅನುಭವ ಸಂಪನ್ನವಾದ ಆತ್ಮಾವಿಷ್ಕಾರ ಯಾವ ಪ್ರಮಾಣದಲ್ಲಿರಬಹುದೊ ಆ ಮಟ್ಟದ ಲಲಿತ ಪ್ರಬಂಧ ಅವನು ನಿರ್ಮಿಸಬಲ್ಲ.

ಶ್ರೀ ಗದಗಕರರ ಈ ಪ್ರಬಂಧೋದ್ಯಾನದಲ್ಲಿ ಒಂದೇ ಬಗೆಯ ಹೂವುಗಳಿಲ್ಲ. ಅತಿ ಸುವಾಸನೆಯ ಸಂಪಿಗೆಯೂ ಇದೆ. ನಿರ್ಗಂಧವಿದ್ದರೂ ತನ್ನ ಸುಭಗ ಸೌಂದರ್ಯದಿಂದ ಮನಸ್ಸನ್ನು ಸೆಳೆಯುವ ಡೇರೇದ ಹೂವೂ ಇದೆ. ಒಂದು ಹರಟೆಯಂತೆ, ಒಂದು ಪ್ರಬಂಧದಂತೆ, ಒಂದು ಪ್ರವಾಸ ವೃತ್ತದ ಮಾದರಿಯಂತೆ ವೈವಿಧ್ಯದ ಅನುಭವವನ್ನು ತಂದು ಕೊಡುತ್ತಿದ್ದರೂ ಅದರ ಲೇಖನ ಸೌಂದರ್ಯ ಎಲ್ಲಿಯೂ ಹಿಮ್ಮೆಟ್ಟಿಲ್ಲ. ಸುಲಲಿತವಾದ ರುಚಿರ ಶೈಲಿಯಿಂದ ಯಾವ ವಿಷಯವನ್ನೂ ಅವರು ತುಟಿಮೀರದ ನಗೆ ಬೆರಸಿ ಹೇಳುತ್ತಾರೆ. ಉದ್ಧೃತ ವಾಕ್ಯಗಳು, ಗಾದೆ ಮಾತುಗಳು, ಕಾವ್ಯ ಪಂಕ್ತಿಗಳು— ಇವುಗಳ ಬೆರಕೆ ತುಸು ಹೆಚ್ಚಾಗಿ ಕಂಡರೂ, ಅವು ವಿಷಯಕ್ಕೆ ಅಸಂಬದ್ಧವಾಗಿಲ್ಲ. ಈ ಎಲ್ಲ ಪ್ರಬಂಧಗಳು ಅವರ ವೈವಿಧ್ಯಪೂರ್ಣ ವಾಚನ-ಮನನದ ಸಾಕ್ಷಿಯಾಗಿ ನಿಂತಿವೆ. ಅವರಿಗೆ ನನ್ನದೊಂದೇ ಸೂಚನೆ. ಅವರ ಬರೆವಣಿಗೆ ಷೋಡಶ ಕಲೆಗಳಿಂದ ಬೆಳಗಬೇಕಿದ್ದರೆ— ತಮ್ಮ ಸ್ವಭಾವದ ಆಮೆಯ ರೀತಿಯನ್ನು ಪೂರ್ಣ ತೊರೆದು ಬಿಡಬೇಕು. ನನ್ನ ಈ ಸುಹೃದ್ಭಾವದ ಸೂಚನೆಯನ್ನು ಅವರು ಸಹಭಾವದಿಂದಲೆ ಸ್ವೀಕರಿಸಬಹುದು ಎಂದು ನಂಬಿದ್ದೇನೆ.

ಧಾರವಾಡ
೨೪-೯-೧೯೫೭

ದ. ರಾ. ಬೇಂದ್ರೆ

# ಪ ರಿ ವಿ ಡಿ


| | | |
|---|---|---|
| ೧. | ಮರೆಯಲಾಗದ ಯಾತ್ರೆ .. .. .. .. | ೧ |
| ೨. | ರೈಲು ನಿಲ್ದಾಣ .. .. .. .. .. | ೧೧ |
| ೩. | ಮೋಡ .. .. .. .. .. .. | ೧೬ |
| ೪. | ಕೊಡೆಗಳು .. .. .. .. .. | ೨೧ |
| ೫. | ಜೋಡು .. .. .. .. .. .. | ೨[illegible] |
| ೬. | ನಾಚಿಕೆ .. .. .. .. .. .. | ೩೨ |
| ೭. | ಸಿಟ್ಟಾಗಲೂ ಬೇಕು .. .. .. .. .. | ೩೮ |
| ೮. | ತಾಯಿ .. .. .. .. . .. | ೪೪ |
| ೯. | ವಿಶ್ರಾಂತಿ ಗೃಹ .. .. .. .. .. | ೪೯ |
| ೧೦. | ನಾನು .. .. .. .. .. .. | ೫೫ |
| ೧೧. | ನನ್ನ ದೀಪಾವಳಿಯ ರಸನಿಮಿಷಗಳು .. .. . | ೫೯ |

## ಇದೇ ಲೇಖಕರ ಇತರ ಕೃತಿಗಳು

| | | |
|---|---|---|
| ಜೇನು | .... | ( ಸಣ್ಣ ಕತೆಗಳು ) |
| ಒಡೆದ ಕನ್ನಡಿ | .... | ( ಲಘುಪ್ರಬಂಧ ಸಂಗ್ರಹ ) |
| ಗೋವಾ ಯಾತ್ರೆ | .... | ( ,, ) |
| ಸಪ್ತರಂಗ | .... | ( ವ್ಯಕ್ತಿಚಿತ್ರಗಳು ) |
| ನಗೀನವಿಲು | .... | ( ಲಲಿತ ಪ್ರಬಂಧಗಳು ) |
| ಕೊನೆಯ ಕಾಣಿಕೆ | .... | ( ಸಣ್ಣ ಕತೆಗಳು ) |
| ಕುಡಿಮಿಂಚು | .... | ( ದೃಶ್ಯಸಂಕಲನ ) |
| *ವಾಗ್ಲಹರಿ | .... | ( ನಾಟ್ಯಘಟಗಳು ) |
| ಶಾರದೆಯ ಅಪರಾವತಾರ | .... | ( ಹರಟೆಗಳು ) |
| ಕ್ರೀಡಾಂಗಣ | .... | ( ಕವನ ಸಂಕಲನ ) |
| ಇನ್ನೊಂದು ಹೆಜ್ಜೆ | .... | ( ,, ) |

***ಮೈಸೂರ ಸರಕಾರದಿಂದ ಬಹುಮಾನ ಪಡೆದ ಪುಸ್ತಕ.**

---

ಮುಖ್ಯ ಮಾರಾಟಗಾರರು :

**ಮನೋಹರ ಗ್ರಂಥಭಾಂಡಾರ**

**ಧಾರವಾಡ**

# ಮರೆಯಲಾಗದ ಯಾತ್ರೆ

'ಇದೇನು ಮಹಾಯಾತ್ರೆಗೆ ಈ ಮಹನೀಯರು ಹೊರಟದ್ದು, ಏನು ಕಾಶಿಯೋ ರಾಮೇಶ್ವರವೆ!' ಎಂದು ಸಂಶಯ ತಳೆದು ಮೂಗು ಏರಿಸುವವರಿಗೆ, ನನ್ನದೇನೂ ಪ್ರವಾಸವೇ ಎನಿಸಲಿಕ್ಕಿಲ್ಲ. ಮಹಾಪ್ರವಾಸವಂತೂ ಮೊದಲಲ್ಲ. ಇನ್ನು ಮರೆಯಲಾಗದ್ದೆ? ನೆನಪಿಡುವ ಸಂಗತಿ ಇದ್ದರೆ ಆದರ ಪ್ರಸ್ತಾಪ! ಸರಿ. ಹೊರಡುವ ಮುನ್ನಾದಿನ ಸಹ, ಹಲವಾರು ವಾರ ಪತ್ರಿಕೆಗಳಲ್ಲಿ ನನ್ನ ಪ್ರವಾಸದ ಯೋಗಾಯೋಗವಿದ್ದಿಲ್ಲವೆಂದ ಮೇಲೆ, ನನ್ನ ಪ್ರವಾಸವು ಕಾರ್ಯರಂಗಕ್ಕಿಳಿದೀತೇ ಇಲ್ಲವೆ — ಎಂದು ಸಂಶಯ ಬರುವಂತಿತ್ತು. ಇರಲಿ. ನನ್ನದಷ್ಟೆ ಅಲ್ಲದೆ ೩೦ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಹಾಗೂ ನಾಲ್ವರು ಶಿಕ್ಷಕರ ತಂಡವೇ ಅಂದಿನ ಸುಪ್ರಭಾತದಲ್ಲಿ ಹೊರಟಿತೆಂದ ಮೇಲೆ, ಯಾರ ಭವಿಷ್ಯ-ವರ್ತಮಾನವನ್ನೂ ನೋಡುವ ಔಚಿತ್ಯ ಕಾಣಲಿಲ್ಲ.

ಅಂದು ರವಿವಾರ. ಗಾಡಿ ಎಂಟು ಇಪ್ಪತ್ತಕ್ಕೆ ಹೊರಡುವುದಿದ್ದರೂ, ಎಂಟಕ್ಕೆ ಸಹ ನನ್ನ ಇತಿಹಾಸಕಾರ ಮಿತ್ರ ಬಾರದ್ದಕ್ಕೆ— ಅವನ ಸುಳಿವೂ ಹತ್ತದ್ದಕ್ಕೆ— ಮೊವಮೊದಲು ನಿರಾಶೆಯ ಕಾರ್ಮೋಡವೇ ನನ್ನ ಮನವನ್ನಾವರಿಸಿತ್ತು. ಏನೇ ಆಗಲಿ, ಹತ್ತು ನಿಮಿಷ ಗಾಡಿ ತಡವಾಗಿ ಬಿಡುವುದಕ್ಕೂ ಗೆಳೆಯ ಅರ್ಧಮರ್ಧ ಆಂಗ್ಲ ಉಡುಪಿನಲ್ಲಿ ಬಂದು ಹತ್ತುವುದಕ್ಕೂ ಸರಿಹೋಯಿತು. ಅಂತೂ ಬಹಳ ಗುದ್ದಾಡದೆ, ಒಂದೇ ಡಬ್ಬಿಯಲ್ಲಿ ವಿದ್ಯಾರ್ಥಿ-ಶಿಕ್ಷಕ ವೃಂದವು ಹತ್ತಿತು; ಬೇರೆಯವರು ಪ್ರತಿನಿಲ್ದಾಣದಲ್ಲಿ

ಹತ್ತ್ರವಂತೆ ವ್ಯವಸ್ಥಿತವಾಗಿ ಪರೋಪಕಾರ ಕೈಕೊಂಡಿತು! ವಯಸ್ಸಿನಲ್ಲಿ ಚಿಕ್ಕವರಿದ್ದು ಬುದ್ಧಿಯಲ್ಲಿ ಉಡಾಳರಿದ್ದ ಕಲಾಪ್ರೇಮಿಗಳು, ಎಷ್ಟು ಹೊತ್ತು ಹಾಗೇ ಸುಮ್ಮನೆ ಕುಳಿತಾರು? ಅದು ಹೇಳಿ ಕೇಳಿ ಶಾಲೆಯ ಪ್ರಾಂಗಣ ವಂತೂ ಆಗಿರಲಿಲ್ಲ. ಅಂತೇ ಪರೆಬಿಚ್ಚಿದ ಹಾವಿನಂತೆನಿಸಿ ಅವರು ತಮ್ಮ ಲೀಲಾಲಹರಿಗೆ ಅವಕಾಶವಿತ್ತರು. ಅವರ ಅವಿಚ್ಛಿನ್ನ ತಲೆಹರಟೆ, ಸಂಗೀತ(?) ಸಾಗಿತ್ತು ನಮ್ಮ ಮಿತ್ರಮಂಡಳಿಯ ರಸಿಕ ಮಾತುಗಳೂ ಇತ್ತ ನಡೆದಿದ್ದುವು. ನಮ್ಮಲ್ಲಿ ಒಬ್ಬನಂತೂ ಜಾತ್ಯಾ ಕಲಾವಿದ; ಮೇಲಾಗಿ ಫ್ಯಾಶನ್ನಿನ ಪುರಸ್ಕರ್ತ. ವೃಷಭರಾಶಿಯೊಂದೂ ಅವನದಿದ್ದ ಮೇಲೆ ಆರ್ಭಟಿಗೆ, ಉಪಟಳಕ್ಕೆ, ಯೋಜನೆಯ ತಿರುಗಣಿ ಮಡುವಿಗೆ ಕೊನೆ ಎಲ್ಲಿ? ಗಾಡಿ ತನ್ನದೇ ಆದ ದೈವೀವೇಗದಿಂದ ನಾಗಿದಾಗಲೇ, ಅವನು ತನ್ನ ಕ್ಯಾಮರಾ ಸಜ್ಜುಗೊಳಿಸುತ್ತಿದ್ದ ಪುಣ್ಯಕ್ಕೆ ಗಾಡಿಯು ನಿಂತ ನಿಲ್ದಾಣಕ್ಕೆಲ್ಲ ಇಳಿದು, ಹೊಸಪೇಟೆ-ಹಂಪಿ-ವಿಜಯನಗರಗಳ ಸೆರಗಿಗೆ ಬರುವ ಮೊದಲೇ ತನ್ನ ಎಲ್ಲ ಫಿಲ್ಮರೋಲ್ ಹಾಳುಮಾಡಿಕೊಳ್ಳಲಿಲ್ಲ! ಇತಿಹಾಸಕಾರ ಮಿತ್ರ, ಈ ರಿಂಗ ಲೀಡರರನ್ನು ಹೊರತುಪಡಿಸಿ ಉಳಿದ ಬೇರೊಬ್ಬನೆಂದರೆ ತಾಳ್ಮೆಯ ಅವರಾವತಾರ. ಅಲ್ಲದೆ ಹೈಸ್ಕೂಲಿನ ಘಟ್ಟದಿಂದಲೂ ನನ್ನೊಡನಿದ್ದು ನನ್ನ ರಸ-ವಿಷನಿಮಿಷಗಳಲ್ಲಿ ಪಾಲುಗಾರನಾದವ ಆಕಾರಮಾನದಿಂದ ನೆಟ್ಟ ಗಿದ್ದಂತೆ, ಸ್ವಭಾವ ದೃಷ್ಟಿಯಿಂದಲೂ ಅತಿಸೌಮ್ಯ, ಸದ್ಗುಣಿ— ಹೆಚ್ಚು ಬಣ್ಣಿಸಹೋದಲ್ಲಿ ವಿಡಂಬನೆಗೆ ಎಡೆ ದೊರೆತೀತೆಂದು ಬಿಡಬೇಕಷ್ಟೆ!

ನಮ್ಮೂರನ್ನು ಬಿಡುವಾಗಲೇ ಉಪಹಾರದ ಸಿದ್ಧತೆ ತಾಳಗೆಟ್ಟಿದ್ದ ರಿಂದ, ಹುಬ್ಬಳ್ಳಿಯಲ್ಲಿ ಅವಸರದಲ್ಲಿಯೇ ಮತ್ತೊಂದು ಚಹದ ಮಜಲು ಆಯಿತು. ಎಲ್ಲರ ಅಂತಃಸ್ಫೂರ್ತಿಗೆ ಸಹಜವಾಗಿ ಕಳೆಯು ಕಟ್ಟಿತು. ಗಾಡಿ ಸಾಗಿ ೨-೩ ತಾಸಾಗಿ ಸೂರ್ಯ ನೆತ್ತಿಯ ಮೇಲೆ ಬಂದಿದ್ದನಿಲ್ಲವೋ ಎನ್ನು ವಷ್ಟರಲ್ಲಿ, ಎಲ್ಲರೂ ಹಸಿದು ಕಕ್ರಾಂತರಾದವರಂತೆ ಬುತ್ತಿ-ಚಪಾತಿಯ ಗಂಟಿಗೆ ಕೈ ಇಕ್ಕಿದರು. ಇಂತಹ ಕಾರ್ಯಕ್ರಮಕ್ಕೆ— ಅದರಲ್ಲಿಯೂ ಪ್ರವಾಸದಲ್ಲಿ — ಅಡೆತಡೆ ಉಂಟುಮಾಡುವವರಾರು? ನಾನಾರೀತಿಯ ಪರಿಹಾಸದ ಮಾತಿನ ಮಾಲೆಯಲ್ಲಿ ಊಟಕ್ಕೂ ವಿಶೇಷ ಕಳೆಕಟ್ಟಿತು. ತದನಂತರ ವಾಮಕುಕ್ಷಿಯಾಗಲು ಅಲ್ಲಿ ಅಸಾಧ್ಯವಿದ್ದುದರಿಂದ ಬೇಕು

ಬೇಕಾದವರು ತಮ್ಮತಮ್ಮಲ್ಲಿ ಇಸ್ಪೀಟಿನ ಆಟಕ್ಕೆ ಮೊದಲು ಮಾಡಿದರು. ಗಂಭೀರವೃತ್ತಿಯವರು ಲೋಕಾರೂಢಿಯ ಮಾತಿನತ್ತ ತಿರುಗಿದರು.

ಇಷ್ಟಾಗಿ ಎಲ್ಲರೂ ವೈಯಕ್ತಿಕ ಚಟುವಟಿಕೆಯಲ್ಲಿ ತನ್ಮಯರಾಗಿರುವಾಗಲೇ ಎದುರಿಗೆ ಹೊಸಪೇಟೆ! ಬೇರೆಯವರ ವಸ್ತುಗಳಿಂದ ಪ್ರಾಮಾಣಿಕವಾಗಿ ತಮ್ಮವಷ್ಟನ್ನೇ ಸರಿಪಡಿಸಿಕೊಳ್ಳಲು ಒಂದು ಪಂಗಡವು ತೊಡಗಿದಾಗ, ಮೇಲ್ವಿಚಾರಕ ಮಂಡಲವು ಟಿಕೀಟಿನ ಲೆಕ್ಕ ಮಾಡುವುದರಲ್ಲಿತ್ತು. ಅಂತೂ ಪ್ಲ್ಯಾಟ್‌ಫಾರ್ಮ ಬಿಟ್ಟು ಜಟಕಾ ಸ್ಟ್ಯಾಂಡಿಗೆ ಎಲ್ಲರೂ ಒಟ್ಟುಗೂಡುವದು ಕಪ್ಪೆಯ ತೂಕವೇ ಆಯಿತು. ವಿದ್ಯಾರ್ಥಿ ವೃಂದದ ರಸಿಕತೆ, ಉತ್ಸಾಹ, ಮೋಜಿನ ಗುಣಕ್ಕೆ ಅನರೂಪವೆನಿಸುವಂತೆ ಜಟಕಾವಾಲಾಗಳು ದೊರೆತರು. ಅವರ ಜಟಕಾಗಳೊ? ದೇವರೇ ಕಾಪಾಡಬೇಕು! ಕುದುರೆ ಪರವಾ ಇಲ್ಲವೆನ್ನುವಾಗ ಅವು ವಿರೂಪವಾದುವು; ತದ್ವಿರುದ್ಧ— ನೋಡಲು ಅಂದವಿದ್ದ ಜಟಕಾಗಳಿಗೆ ಕುದುರೆಗಳು ಮಂಡವಾಗಿದ್ದು, ಕಂಡಲ್ಲಿ ಧಕ್ ಎಂದು ನಿಲ್ಲುತ್ತಿದ್ದುವು; ಇಲ್ಲವೆ ಮನಬಂದಂತೆ ಮುಂದೊ ಹಿಂದೊ, ಎಡಕ್ಕೊ ಬಲಕ್ಕೊ ಕ್ರಮಿಸುತ್ತಿದ್ದುವು. ಒಂದು ಗಿಡ್ಡ ಕೆಂಪು ಕುದುರೆಯಂತೂ ಹದಿನೈದು ನಿಮಿಷ ಜಪ್ಪೆಂದರೂ ಕದಲಲಿಲ್ಲ. ಮಳೆ "ಧೋ ಧೋ" ಎಂದು ಸುರಿಯುತ್ತಿದೆ ಎಂದು ಹೀಗಿದ್ದೀತು— ಎಂದು ನಾವು ಸಮಾಧಾನ ತಳೆದಾಗ ಅದರ ಬುದ್ಧಿವಂತ(?) ಒಡೆಯನು, ಅದರ ಮನೆಯೇ ಅಲ್ಲಿ ಎಂದು ರಹಸ್ಯವನ್ನು ಬಯಲಿಗೆಳೆದನು. ಇಂತು ಒಂದುವರೆ ತಾಸಿನಲ್ಲಿ ಎಲ್ಲ ಕುದುರೆ, ಜಟಕಾ ಅದರೊಡೆಯರು, ಒಳಗಿನವರು ಡ್ಯಾಮ್ ಸೈಟ್ ಮುಟ್ಟಿದರು. ಉಸ್ಸೆಂದು ಉಸುರುಗರೆದರು. ನಮ್ಮ ಮೇಲ್ವಿಚಾರಕ ಗೆಳೆಯನೊಬ್ಬ ಪ್ರಾಜೆಕ್ಟ್ ರೆಸ್ಟೋರೆಂಟಿನಲ್ಲಿ ಉಪಹಾರದ ವ್ಯವಸ್ಥೆಯನ್ನು ಕ್ಷಿಪ್ರದಲ್ಲಿಯೇ ಮಾಡಿರದಿದ್ದರೆ, ಹಿಂದಕ್ಕೇ ಹಲವರು ಕಾಲ್ತೆಗೆಯುತ್ತಿದ್ದರೇನೋ! ಸುದೈವದಿಂದ ಯಾರಿಗೂ ಹಾಗಾಗದೆ, ತದ್ವಿರುದ್ಧ ನಮ್ಮಲ್ಲಿಯ ಬಾಯಿ ಮುಂದಿದ್ದ ಇತಿಹಾಸಕಾರ ಗೆಳೆಯನ (ಕೋಲಂಬಸನನ್ನು ನೆನಪಿಗೆ ತರುವ) ಸಾಹಸದ ಮೂಲಕ, ಸಂಸ್ಥಾನಿಕರಿಗೇ ಉಚಿತವಾದ– ಈಗ ದುರ್ದೈವದಿಂದ ಅವೂ ನಿರ್ನಾಮವಾಗಿದ್ದರೂ– ಭವ್ಯ ದಿವ್ಯ ಕಟ್ಟಡವೊಂದು ನಮ್ಮ ಪಾಲಿಗೆ ದೊರಕಿತು. ಸರಿ, ಎರಡು ದಿನ ನಮ್ಮದೇ ಅದರ ಮೇಲೆ ಸ್ವಾಮಿತ್ವ!

ಸಂಜೆ ಮತ್ತು ಮರುದಿನ ಮುಂಜಾವು ತುಂಗಭದ್ರೆಯ ಅಣೆಕಟ್ಟು ನೋಡುವುದರಲ್ಲಿ ಕಳೆಯಿತು. ಸಂಜೆಗೆ ಇಡೀ ಅಣೆಕಟ್ಟನ್ನೂ ಗುಡ್ಡದ ಮೇಲಿನ ಅತ್ಯುನ್ನತ ಗೋಪುರವನ್ನೂ ಸೋಪಾನಗಳ ಸೀಳುದಾರಿಯ ಮುಖಾಂತರವಾಗಿ ಹತ್ತಿ ಹೋಗುವುದೆಂದರೆ ಹಲವರಿಗೆ ಸಾಕುಸಾಕಾಯಿತು. ಏರಿದಂತೆಲ್ಲ ಸುತ್ತಲೂ ವಿಸ್ತೃತವಾಗಿ ಕಾಣುವ ನಯನಮನೋಹರ ದೃಶ್ಯವನ್ನು ಕಂಡು ತಣಿದೆವು ಗೋಪುರದ ತುಟ್ಟ ತುದಿಗೇರಿ ಹತ್ತಿ ನಿಂತಾಗಂತೂ ಹಿಂದಿನ ಶ್ರಮವೆಲ್ಲ ಪರಿಹಾರವಾಯಿತು ನನ್ನ ಗೆಳೆಯ ಎಲೆಯಡಕೆಯ ಬಾರನ್ನು, ಹತ್ತುವಾಗಲೆಲ್ಲ ಇಬ್ಬರಿಗೂ ಮಾಡಿಸುತ್ತಿದ್ದ ನೆಂದು, ಆಗೀಗ ಶ್ರಮವಾದರೂ ಮರುಕ್ಷಣ ಮಾಯವಾಗುತ್ತಿತ್ತು. ಪಾಪ! ಕೈಲಾಸ ಪರ್ವತದ ದಿಕ್ಕಿನ ನಿರ್ಮಾನುಷ ಅಡವಿಯಲ್ಲಿ ಅಲೆದಾಡಿ ಕಿನ್ನರ ಮಿಥುನಗಳನ್ನು ಬೆಂಬತ್ತಿ ನಿರಾಸೆಹೊಂದಿ, ಕೊನೆಗೆ ಅಂದವಾದ ಅಚ್ಛೋದ ಸರಸ್ಸನ್ನು ಕಂಡಾಗ ಆ ಚಂದ್ರಾಪೀಡನಿಗೆ ಅಷ್ಟು ಆನಂದವಾಗಿತ್ತೋ ಇಲ್ಲವೋ! ನೈಸರ್ಗಿಕ ಐಸಿರಿ ಈಂಟುತ್ತ ಕುಳಿತೆ; ಹಾಗೇ ಕುಳಿತೆ. ಇತಿಹಾಸಕಾರಮಿತ್ರ ಕೊಂಚ ಎಚ್ಚರಿಸಿದಾಗ ವಾಸ್ತವಲೋಕದ ಪ್ರಜ್ಞೆಯುಂಟಾಯಿತು.

ಮರುದಿನ ಮುಂಜಾವಿನ ಕಾರ್ಯಕ್ರಮವೆಲ್ಲ ಅಣೆಕಟ್ಟಿನ ಮೇಲಿರದಿದ್ದರೂ, ಕೆಳಗಿನ ವಲಯದಲ್ಲೆಲ್ಲ ಹರಿದು ಹಂಚಿಹೋಯಿತು. ಬಣ್ಣಬಣ್ಣದ ಕಾರಂಜಿ, ಹಚ್ಚಹಸಿರು ಮುರಿಯುವ ಭೂದೇವಿಯ ದುಕೂಲದ ಬಳಿ ಅಲೆದಾಡುವಾಗ ತೆಗೆದ ಛಾಯಾಚಿತ್ರ ಎಷ್ಟೆಂಬುದು ಆ ಮೇಲ್ವಿಚಾರಕರಿಗೇ ಗೊತ್ತು. ಅಣೆಕಟ್ಟಿನಿಂದ ಜಲಪಾತವಾಗಿ ಧುಮುಕುವ ನೀರಿನ ರಾಶಿಯನ್ನು ನೋಡಲು ಕಣ್ಣು ಸಾಲವು. ಏನು ಅದರ ರಭಸ? ಹಾಲಿನ ವರ್ಣ! ನೋಡಿಯೇ ತಣಿಯುವುದು; ಬಣ್ಣಿಸುವುದದಲ್ಲ. ರಾತ್ರಿ ವಿದ್ಯುದ್ದೀಪಗಳಿಂದ ಅಲಂಕೃತವಾದಾಗ ಅಲ್ಲಿಯ ಸೊಬಗನ್ನು ಸವಿಯುವುದು ಸ್ವರ್ಗೀಯ ಸುಖವೇ ಸರಿ!

ಮಧ್ಯಾಹ್ನದ ಊಟ ವಿಶ್ರಾಂತಿ ಮುಗಿದು ಹಾಯಾಗಿ ಕುಳಿತಾಗ, ಹಂಪೆಗೆ ನಮ್ಮನ್ನು ಕರೆದೊಯ್ಯುವ ಬಸ್ಸು ಸಿದ್ಧವಾಗಿ ಬಂದಿತ್ತು— ತಾನಾಗಿಯೇ ಅಲ್ಲ; ಗುದುಮುರಿಗೆ ಹಾಕಿ ಗೊತ್ತು ಮಾಡಿದುದಕ್ಕೆಂದು!

ಬಸ್ಸಿನ ಹನ್ನೆರಡು ಮೈಲು ಪ್ರವಾಸ ಅಷ್ಟೊಂದು ರುಚಿಕರವಾಗದಿದ್ದರೂ, ಆಗೀಗ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಹಾಡಿನ (ಚಲಚ್ಚಿತ್ರದುವು. ತೀರ ಇತ್ತೀಚಿನವೇ ಹೆಚ್ಚು— ನಾಗಿನ್ ಗೀತಗಳ ಪದ್ಯಾವಲಿಗುಂಟೆ!) ಸ್ಪರ್ಧೆ ಉತ್ಸಾಹಕರವಾಗಿ ಸಾಗಿತೆಂದು, ನಿಂತು ನಿಂತು ಹೋಗುವ ಮೋಟರಿನ ಅಲೌಕಿಕ ವೇಗದಡೆಗೆ ವಿಶೇಷವಾಗಿ ಎಲ್ಲರ ಲಕ್ಷ್ಯ ಹೋಗಲಿಲ್ಲ. ಗಂಡು ಹುಡುಗರಂತೂ ಕಂಠಪಾಠ ಮಾಡಿದ್ದೊಂದನ್ನೇ ಉಳಿದ ವಿದ್ಯಾರ್ಥಿನಿಯ ರೊಡನೆ ಒಪ್ಪಿಸುತ್ತಿದ್ದರೇ ವಿನಾ ರಾಗವಿಲ್ಲ ತಾಳವಿಲ್ಲ. ಒಬ್ಬಿಬ್ಬರ ಧ್ವನಿ ಮಧುರವೇನೊ ಇದ್ದಿತು. ಆದರೂ ಸುಮ್ಮನಿರುವುದುಚಿತವಲ್ಲವೆಂದು ತಮ್ಮ ವೆರಡು ಅಕ್ಕಿಯ ಕಾಳನ್ನು ಮುಂದು ಮಾಡುತ್ತಿದ್ದರು. ಮಧ್ಯವಯಸ್ಕರಾದ ನಮ್ಮ ಶಿಕ್ಷಕಮಿತ್ರರು ಹಾಗೂ ನಾನು, ಇದರಲ್ಲಿ ಶ್ರೋತೃಗಳಾದದ್ದೇ ಕ್ಷೇಮವೆನಿಸಿತು. ಇಲ್ಲದಿದ್ದರೆ ಸಣ್ಣ ಸಣ್ಣ ಹಳ್ಳಿಗಳಲ್ಲಿ ಬಸ್ಸು ನಿಂತಾಗ, ಸಮ್ಮಿಶ್ರ ವಿಲಕ್ಷಣ ಧ್ವನಿಯನ್ನು ಕೇಳಿದ ಗಂಡಸರು ಹೆಂಗಸರು— ಇವರೆಲ್ಲ ಆಸ್ಪತ್ರೆಗೆ (ಯಾವದು?) ದಾಖಲು ಆಗುವುದು ಯೋಗ್ಯವೇ ಎಂದೆನ್ನು ತ್ತಿದ್ದರೇನೊ ' ಸರಿ ! ಹಂಪೆ ಬಂದಿತು ಮುನ್ ಸೂಚನೆ ಕಂಡುವು; ಕಲ್ಲಿನ ಬೃಹದ್ರಾಶಿ, ಛಿನ್ನವಿಚ್ಛಿನ್ನ ಗುಡಿ, ಕಲ್ಲಿನ ಭವ್ಯ ಕಂಬಗಳು,— ಭಕ್ತರಾದ ನಮ್ಮನ್ನು ಕೈಮಾಡಿ ಕರೆದುವು; ಸ್ವಾಗತಿಸಿದುವು.

ಎಲ್ಲರೂ ಕಾಫೀಪಾನ ಮುಗಿಸಿಕೊಂಡು, ವಿರೂಪಾಕ್ಷ ದರ್ಶನದ ನಂತರ ವಿಜಯ ವಿಠ್ಠಲನ ಗುಡಿಯ ದಿಸೆಯಲ್ಲಿ ಹೊರಟಾಗ ಸಂಜೆಯ ಐದಾಗಿರಬಹುದು. ಭಗ್ನಾವಶೇಷಗಳ ನಡುವೆ ನಡೆಯುತ್ತ ಸಾಗಿದೆವು. ತುಂಗಭದ್ರೆಯ ಸುಲಲಿತ ಸಲಿಲಪ್ರವಾಹವನ್ನು ನೋಡುವಷ್ಟು ವೇಳೆ ಇರಲಿಲ್ಲ. ಹಾಗೇ ಕಣ್ಣು ಹಾಯಿಸಿ, ನೈಸರ್ಗಿಕ ನೋಟಕ್ಕೆ ಮನಸೋತರೂ ಮುಂದೆ ಸಾಗಿದೆವು. ಎಲ್ಲಿ ಕತ್ತಲಾದೀತೋ ಎಂದು ಯಂತ್ರೋದ್ಧಾರ ಪ್ರಾಣದೇವರನ್ನು ಕಿಟಕಿಯಲ್ಲಿ ನೋಡಿ ಮಣಿದು ಸಾಗಿದೆವು. ಆ ತುಲಾ ಭಾರದ ಮಂಟಪವು ಈಗ ಕೇವಲ ಕಲ್ಲಿನ ಕಟ್ಟಡ. ಆದರೆ ಆ ಕಾಲಕ್ಕೆ ರಾಯರ ಐಸಿರಿ ಎಷ್ಟಿತ್ತು, ವಿಜಯನಗರದ ರಾಯರು ಎಂತಹ ಕೊಡುಗೈ ದೊರೆಗಳು— ಎಂದು ಭಾವಪರವಶನಾಗಿ, ನನ್ನ ಇತಿಹಾಸಮಿತ್ರ ತನ್ನ ಹಳೆಯ ಬುದ್ಧಿಯನ್ನು ಪಾಲಿಶ್ ಮಾಡಿ ಉಸುರಿದ. ಕೇವಲ ಕಲ್ಲಿನ

ಕುಸುರಿನ ಮೂರು ಭವ್ಯ ಕಂಬದಿಂದ, ಹಿಂದಿನ ಐತಿಹಾಸಿಕ ಪ್ರಪಂಚವನ್ನೇ ಕಣ್ಣೆದುರು ಕಲ್ಪಿಸಬೇಕಾಯಿತೆಂದು ಕೆಡುಕೆನಿಸಿದರೂ, ರಾಯರ ತ್ಯಾಗ, ಅಪಾರ ಸಂಪತ್ತಿಗೆ ನಮ್ಮ ಮನಸ್ಸು ಮಾರುಹೋಗಿ ಹೃದಯ ಪುಲಕಿತ ವಾಯಿತು. ಮರುಕ್ಷಣ "ಹೇಗಿದ್ದ ಎಂಥ ಅವಸ್ಥೆ ಆಯಿತು ಆ ಮಹಾ ಮಹಿಮರದು!" ಎಂದು ಕಣ್ಣೀರಿಡುವಂತಾಯಿತು— ಮನಸ್ಸಿನಲ್ಲಿಯೆ! ಆದರೆ ಎಷ್ಟು ಹೊತ್ತು ನಿಂತೇವು ಒಂದೆಡೆಗೆ? ಏನಾದರೂ ನೋಡಲು ಬಂದವರ– ಇತರರ– ಒತ್ತಾಯಕ್ಕೆ ಸಾಗಿದೆವು. ಕಾಲು ಎಳೆಯುತ್ತ ಜುಕ್ಕುಜುಲುಮೆಯಿಂದ. ಅನತಿದೂರದಲ್ಲಿಯೇ ಅದೋ ವಿಜಯ ವಿಠ್ಠಲನ ಮಂದಿರ! ಏನು ಕುಸುರಿನ ಕೆಲಸ, ಮೂರ್ತಿ, ಮಂಟಪ, ಪೌರಾಣಿಕ ದೃಶ್ಯಗಳ ನಿರ್ಮಿತಿ! ಒಂದೊಂದು ಕಂಬ, ಗೋಡೆ, ಗೋಪುರದ ವಿಭಾಗ ವೆಂದರೆ ಜೀವಂತ ಸೃಷ್ಟಿಯೆ! ೧ ಚಚ್ಚೌಕು ಫೂಟಿನಲ್ಲಿ ಎಂತಹ ಅಂದವಾದ ಆನೆ, ಪುರುಷವಿಗ್ರಹ, ಸ್ತ್ರೀವಿಗ್ರಹ, ಮಂಟಪ! ಮಹಾಕಾವ್ಯದ ಸಮಗ್ರ ಪಾತ್ರ ಸನ್ನಿವೇಶಗಳ ಸುಂದರ ಸರಪಳಿಯೇ ಅಲ್ಲಿ! ಕೃಷ್ಣನ ಕಾಲಿಯಾ ಮರ್ದನ, ಗೋಪಿಯರ ವಸನ ಬಚ್ಚಿಟ್ಟದ್ದು, ರಾಮ-ರಾವಣರ ಯುದ್ಧ ಪ್ರಸಂಗ, ಅಶೋಕವನದಲ್ಲಿಯ ಸೀತಾದೇವಿ, ಹತ್ತವತಾರಗಳು— ಎಲ್ಲ ಮನಸೆಳೆದುವು. ಕಲೆಯ ಬಲೆಯಿಂದ, ಪವಿತ್ರ ಭಕ್ತಿ ಸಾನ್ನಿಧ್ಯದಿಂದ ನಮ್ಮನ್ನೆಲ್ಲ ಪುಲಕಿತರನ್ನಾಗಿಸಿದುವು.

ಮರುಳಿ ಹೋಗುವುದಿದೆ— ಎಂಬ ಕಲ್ಪನೆ ಮಿಂಚಿ, ಅವಸರ ಮಾಡಿ ಹಿಂತಿರುಗಲಾರಂಭಿಸಿದೆವು. ಆ ರಭಸದಲ್ಲಿಯೇ ನಮ್ಮ ಮೇಲ್ವಿಚಾರಕ ಕಲಾವಿದ ಗೆಳೆಯ, ಕಟ್ಟಡಗಳ ಹಾಗೂ ನೋಡಲು ಬಂದವರ ಛಾಯಾ ಚಿತ್ರ ತೆಗೆದ—ಕೈ ಕ್ಯಾಮರಾದಿಂದ! ಗಾಡಿ ಸಾಗಿತು. ಸುತ್ತಲೂ ಹುಚ್ಚು ಹಿಡಿಸುವ ಬೆಳ್ದಿಂಗಳು. ಕಾನನದ ಬೆಳ್ದಿಂಗಳೇ ಅಹುದು! ಅದರಲ್ಲಿಯೂ ಭಗ್ನಾವಶೇಷಗಳ ಮಧ್ಯದಲ್ಲಿ! ಪ್ರತಿಯೊಂದು ಅಲ್ಲಿಯ ಕಲ್ಲು, ಕಂಬ, ಗೋಪುರ, ಮಂಟಪ— ಐತಿಹಾಸಿಕ ಹೆಬ್ಬೊತ್ತಿಗೆ— ಸುಂದರ ಸೃಷ್ಟಿ ಎಂದು ನನ್ನ ತಾಳ್ಮೆಯ ಗೆಳೆಯ ಉಸಿರಿಡುವಾಗ, ಇನ್ನಿತರ ಕ್ಷಣಿಕ ಮಾತಿನ ಮಲುಕಿನಲ್ಲಿ— ಆಗೀಗಿನ ನಗೆಯ ಲಹರಿಗಳಲ್ಲಿ— ತಗ್ಗುದಿನ್ನೆ ಇದ್ದರೂ ತಿಳಿಯದೆ ದಾರಿ ಕ್ರಮಿಸಿತು. ಮರಳಿ ವಿರೂಪಾಕ್ಷ ಮಂದಿರದ

ಛತ್ರದ ಬಳಿ ಬಂದಾಗ ಎಂಟಾಗಿದ್ದಿತ್ತೇನೊ! ಸರಿ ನನ್ನ ಸಹಪಾಠಿ ಮಿತ್ರನ ಕಾಟಕ್ಕೆಂದು ಹಂಪೆಯ ಆ ಕೋಂಪೆಯಲ್ಲಿಯೂ– "ಯಾರಿಗೂ ಹೇಳೋಣೂ ಬೇಡವೆಂದು–" ಒಂದು ಉಪಹಾರ ಮಂದಿರ ಸಂಶೋಧಿಸಿ, ಆ ಕೈಚಿಮಣಿಯ ದೇದಿಪ್ಯಮಾನ (ಮಂದವಿದ್ದರೂ ಆಗೀಗ) ಪ್ರಕಾಶದಲ್ಲಿ ದೃಷ್ಟಿಯಾಗುವ ಚಹ ಸೆಡ್ಡುವ ಹಟ ಪೂರಯಿಸಿದೆವು. ಅನಂತರ ತ್ರಯೋ ದಶವಲ್ಲದಿದ್ದರೂ ತ್ರಿತಾಂಬೂಲದ ಶಾಸ್ತ್ರ ಮುಗಿಸಿದೆವು.

ಇಷ್ಟು ವೈಯಕ್ತಿಕ ಚಟ ನಡೆಯಿತೆಂದು ಸಮಾಧಾನದ ನಿಟ್ಟುಸಿರು ಬಿಟ್ಟು, ಅಡಿಗೆಗೆ ಸಹಾಯ ಮಾಡಬೇಕೆಂದು ಮನೆಯೊಳಗೆ ಬರುತ್ತೇವೆ; ಅಲ್ಲಿ ಜ್ವಾಲಾಮುಖಿ ಭೂಕಂಪ ನಡೆದಂತೆನಿಸಿತು! ಏನು ಹೊಗೆ, ಏನು ಅಸ್ತವ್ಯಸ್ತ ಉರಿ! ಅಂತೂ ಇತಿಹಾಸಕಾರ ಗೆಳೆಯ, ಮೇಲ್ವಿಚಾರಕ ಕಲಾ ವಿದರ ಹಾಗೂ ನಮ್ಮಂತಹ (?) ಇತರರ ನೆರವಿನಿಂದ ಹಂಜಕ್ಕಿ ಅನ್ನ, ಉಪ್ಪು-ಖಾರ ಕಡಿಮೆಯಾದ ಝುಣಕ ಎಲ್ಲರಿಗೂ ದೊರೆತು, ಮಲಗ ಬೇಕಾದರೆ ಮಧ್ಯರಾತ್ರಿಗೆ ಕೇವಲ ಐದೋ ಹತ್ತೋ ನಿಮಿಷಗಳು! ಇಂತಹ ಅಡಿಗೆಯ ವಸ್ತುಗಳೇ ಸಿದ್ಧವಾಗುವುವೇನೊ — ಎಂಬ ಪೂರ್ವಸಂಶಯದಿಂದ ಎಲ್ಲರೂ ನಾಕಷ್ಟು (ಉಳಿಯುವಷ್ಟು ಸರಿ!) ತಿಂಡಿತಿನಿಸು ತಂದದ್ದರಿಂದ, ಅನ್ನ ಝುಣಕದ ಕೊರತೆ ನೀಗಿತು, ಪೂರ್ಣ ನೀಗಿತು ತದ್ವಿರುದ್ಧ ಸ್ವಾವ ಲಂಬನದ ಪ್ರಥಮ ಪಾಠದ ಜ್ಞಾನವನ್ನು ಪ್ರವಾಸದಲ್ಲಿ ಉಪಯೋಗಿಸಿದ್ದ ರಿಂದ, ಶಿಕ್ಷಕ ಲೋಕವೆಲ್ಲ ತಮ್ಮ ಬೆನ್ನು ತಟ್ಟಿಕೊಂಡಿತು. ಇಂತು ಈ ಎಲ್ಲ ಅಡಿಗೆಯ ಸಿದ್ಧತೆಯ ಗಲಾಟೆಯ ಮೂರು ತಾಸಿನ ಅವಧಿಯಲ್ಲಿ, ನಮ್ಮ ಸೋದರಿ ಶಿಕ್ಷಿಕೆಯೋರ್ವರು ತಮ್ಮ ಚಾಣಾಕ್ಷತನ, ರಸಿಕತೆ, ಹಾಡು ಗಾರಿಕೆ, ಆಟದ ಲಹರಿಯಿಂದ ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಒಟ್ಟಿಗೆ ಕಲೆಹಾಕಿ, ಉಪಯುಕ್ತ ವಿವಿಧ ವಿನೋದಾವಳಿ ಕಾರ್ಯಕ್ರಮದಲ್ಲಿ (Variety Entertainments) ತೊಡಗಿಸಿರದಿದ್ದರೆ — ದೊಡ್ಡ ಬಂಡಾಯ, ದಂಗೆ, ರಸಕಸಿ — ಎಲ್ಲಿ ಏಳುತ್ತಿತ್ತೊ!

ಇರಲಿ. ಅರುಣೋದಯಕ್ಕೂ ಮೊದಲೇ, ವಿರೂಪಾಕ್ಷ ಮಂದಿರದ ಚೌಘಡದ ಮಂಗಲರವವನ್ನಾಲಿಸುತ್ತ ನಮ್ಮೆಲ್ಲನೇಕರು ಎದ್ದೆವು ಪ್ರಾತ- ರ್ವಿಧಿಯ ನಂತರ ಚಹದ ವಿಧಿಗೆ ಅಣಿಯಾಗಿ ಮುಗಿಸಿದೆವು. ಅನಂತರ

ವಿರೂಪಾಕ್ಷದರ್ಶನ— ಪುಕ್ಕಟೆಯಾಗಿ ಸಿಗುವ ಕಾಲದಲ್ಲಿ! ಯಾಕೆಂದರೆ ಎಂಟರ ನಂತರ ದರ್ಶನಕ್ಕೆ ಹಣ! "ಇದೇನು ಅಸಹ್ಯ ಪದ್ಧತಿ, ದೇವರ ದರ್ಶನಕ್ಕೂ ಹಣವೇ?" ಎಂದು ನನ್ನ ಮುಂಗೋಪಿ ಇತಿಹಾಸಮಿತ್ರ (ಸ್ವಲ್ಪೇಕ ಬಹಳ) ಹೊಡೆದಾಟ (ಚಿಕ್ಕ ಪ್ರಮಾಣದಲ್ಲಿ ಮಾತಿನ, ಇಲ್ಲವೆ ವಾದದ)ಕ್ಕೇಳುವಷ್ಟರಲ್ಲಿ, ನಾನು ಮುಂದಾಗಿ ವಿಷಯಾಂತರನ್ಯಾಸ ಮಾಡಿಸಬೇಕಾದರೆ ಕುರಿ-ಕೋಣ ಬಿದ್ದುವು. ಸರಿ. ಈ ತುಮುಲಯುದ್ಧ ತಪ್ಪಿ ವಿಜಯನಗರದೆಡೆಗೆ ಹೊರಡಲು ಪಾರ್ಟಿ ಸಜ್ಜಾಯಿತು. "ಒಂಬತ್ತೇ ಹೊಡೆಯಿತಲ್ಲ ಎಷ್ಟು ತಡ!" ಎಂದು ನಮ್ಮ ಮೇಲ್ವಿಚಾರಕ ಮಿತ್ರ ಗುಡುಗಿದರೂ ವಿದ್ಯಾರ್ಥಿನಿಯರ ಬಳಗವು ಅವನ ಮಾತನ್ನು ಲೆಕ್ಕಿಸಲಿಲ್ಲ. ಪ್ರವಾಸದ ವೇಷ-ಭೂಷದಲ್ಲಿಯೇ ತೊಡಗಿದ್ದರು. ಮನುಷ್ಯ ಮಾತ್ರಕ್ಕೆ ಅಂದ-ಚೆಂದದ ರೀತಿ ಇರುವಾಗ ಒಬ್ಬರನ್ನು ದೂಷಿಸುವುದೇಕೆ?— ಎಂದು ನಾನು ಹಾಗೂ ನನ್ನ ಇತಿಹಾಸಕಾರ ಗೆಳೆಯ ನಡುವೆ ಬಾಯಿ ಹಾಕಿ (ಶಬ್ದಶಃ ಅಲ್ಲ) ಮೇಲ್ವಿಚಾರಕ ಕಲಾವಿದನ ಬಾಯಿಕಟ್ಟಿ, ಎಲ್ಲರೂ ಅಪರಿಮಿತ ಶ್ರದ್ಧೆ ಉತ್ಸಾಹ-ಸಂಭ್ರಮಗಳ ಮಧ್ಯೆ ಸಾಗಿದೆವು ರಥ ಬೀದಿಗುಂಟ!

ಮುಂಜಾವಿನ ಈ ನಮ್ಮ ಸಂಚಾರ, ಹಿಂದಿನ ದಿನದ ಸಾಯಂಕಾಲ ಕ್ಕಿಂತಲೂ ದೀರ್ಘದಾದದ್ದೇ ಎನ್ನಿರಿ. ಸುಮಾರು ೮–೧೦ ಮೈಲಾದರೂ ತಿರುಗಾಡಿದ್ದೇವು. ಮೊದಲಿನ ೨-೩ ತಾಸುತೂ ಒಂದು ಪಿಳ್ಳೆ ಸಹ ದಣಿಯಲಿಲ್ಲ; ನೀರು ಬೇಡಲಿಲ್ಲ. ಬಿಸಿಲು ಕ್ರಮೇಣ ಚುರುಕು ಎನಿಸುತ್ತ ನಡೆದರೂ ಯಾರಿಗೂ ಅದರ ಅರಿವಿರಲಿಲ್ಲ. ರಾಯರ ರಸಿಕತೆಯ ವೈಭವದ ವಿಜಯನಗರದಲ್ಲೆಲ್ಲ ಅತಿಶ್ರದ್ಧೆಯಿಂದ ಅಲ್ಲಲ್ಲಿ ನೋಡುತ್ತ ಛಾಯಾ ಚಿತ್ರದಲ್ಲಿ ಮೂಡುತ್ತ ನಡೆದುದರಿಂದ, ಸೂರ್ಯನು ಪೂರ್ಣ ನೆತ್ತಿಯ ಮೇಲೆ ಬಂದಮೇಲೆಯೇ ಒಬ್ಬಿಬ್ಬರಲ್ಲಿ "ಈಗ ಊಟಕ್ಕೆ ಮರಳಿದರೆ ಚೆನ್ನು ಅಲ್ಲವೇ" ಎಂಬ ಭಾವನೆ ಮೊಳಗಹತ್ತಿತು. ನಾನಂತೂ ನನ್ನ ಇತಿಹಾಸ ಕಾರ ಗೆಳೆಯನ ಕೈಬಿಟ್ಟಿರಲಿಲ್ಲ. ಅವನು ಕೇವಲ ಸಂದರ್ಶಕನಲ್ಲದೆ ನಾಲ್ಕಾರು ಸಲ ಇಲ್ಲಿಗೆ ಬಂದವನಂತೆ; ಮೇಲಾಗಿ ಸಾಹಿತಿ; ಇತಿಹಾಸದ ನೈಜ ವಿದ್ಯಾರ್ಥಿ. ಅಂತೇ ಏನು ನೋಡಿದರೂ ತನ್ನ ಐತಿಹಾಸಿಕ ಜ್ಞಾನದ

ಸರ್ಚ್‌ಲಾಯಿಟ ಕೆಡವದೆ ಮುಂದೆ ಹೋಗುತ್ತಿರಲಿಲ್ಲ. ಉದ್ಯಾನ ವೀರಭದ್ರನ ಭವ್ಯಮೂರ್ತಿ, ಕಡಲೆ-ಸಾಸಿವೆ ಗಣಪತಿಗಳು, ಕಮಲಮಹಲು, ಮಹಾನವಮಿಯ ದಿಬ್ಬ, ಗಜಶಾಲೆ, ಅರಸರ ಆಲೋಚನೆಯ ಗುಪ್ತಸಭಾ ಗುಹೆ,— ಎಲ್ಲದರ ಮೇಲೆ ಚಿಕ್ಕವರಿಗೆ ದೊಡ್ಡವರಿಗೆ ನಮ್ಮ ಬಳಿ ಬಂದ ಗೈಡ್‌ನಿಂದ ರುಚಿಕಟ್ಟಾದ ಸಂಗತಿ, ಸಮಗ್ರ ಇತಿಹಾಸ, ಸೂಕ್ಷ್ಮ ವಿವರಣೆ ದೊರೆತುವು. ಒಂದು ಕಂಬವೇ, ಒಂದು ಕಲ್ಲೇ, ಒಂದು ಭಗ್ನಮೂರ್ತಿಯೇ, ಆನೆಯೇ, ಕಟ್ಟಡವೇ— ಎಲ್ಲವೂ ನಾಮಶೇಷಾವಸ್ಥೆಗೆ ಬಂದಂತೆನಿಸಿದರೂ— ಹಿಂದಿನ ಇತಿಹಾಸದ ವೈಭವವನ್ನು ಮೂಕವಾಗಿದ್ದೇ ನಿವೇದಿಸಿದುವು. ಅಕ್ಕ-ತಂಗಿಯರ ಬಂಡೆಗಳು ನಮ್ಮ ಮನಸ್ಸು ಕರಗಿಸಿದಂತೆ ಒಂದೊಂದು ಸುರಂಗಮಾರ್ಗವೂ, ಕಾಲುವೆಯ ರೀತಿಯೂ ನಮ್ಮನ್ನು ಮುಗ್ಧರನ್ನಾಗಿಸಿದುವು. ರಾಯರ ಕಲಾಪ್ರೇಮಕ್ಕೆ, ವೈಭವಕ್ಕೆ, ಕಾರ್ಯನಿರ್ವಹಣೆಯ ಅಖಂಡ ಸಾಮರ್ಥ್ಯಕ್ಕೆ ಇಷ್ಟು ಅವಶೇಷಗಳೇ ಸಾಕಷ್ಟು ನಿದರ್ಶನವೆನಿಸಿದುವು. ಅಂದಿದ್ದು ಇಂದಿಲ್ಲದಾದ ನಾಡಿಗಾಗಿ ಕಣ್ಣೀರಿನ ಕಾಲುವೆ ಕರೆಯಿಸಹಚ್ಚಿದುವು. ಮಾತಂಗ ಬೆಟ್ಟವೇರುವುದು ದೊಡ್ಡವರಿಗೆ ಕೊಂಚ ಬಿಗಿ ಎನಿಸಿದಾಗ, ಚಿಕ್ಕವರು ಹಾಹಾ ಎನ್ನುವುದರಲ್ಲಿ ಮೇಲೆ ಹೋಗಿ ನಿಂತು ನಮ್ಮನ್ನು ಕೈಮಾಡಿ ಕರೆದು ನಾಚಿಸಿದರು. ಅಲ್ಲಿಂದ ಸುತ್ತಲಿನ ದಿವ್ಯ ನೋಟ ಕಂಡು ಮನಸ್ಸು ಒಂದು ಕ್ಷಣ ಆನಂದತುಂದಿಲವಾದರೂ, ಮರುಕ್ಷಣ ಮತ್ತೆ ವಿಜಯನಗರ, ಅಚ್ಯುತರಾಯನ ಗುಡಿ (ಅರ್ಧ ಮುಗಿದದ್ದು) ಕಂಡು ಹೃದಯವು ಕಂಪಿಸಿತು. ಕೋಡಿ ಒಡೆದು ಕಣ್ಣೀರು ಬರುವಂತೆ ಭಾಸವಾಯಿತು. ಭಗ್ನತೆಯಲ್ಲಿಯೇ ಕಲೆಯ ಸಾನ್ನಿಧ್ಯ, ಪಾವಿತ್ರ್ಯ, ಭಕ್ತಿಯ ಸೆಲೆ, ಚೆಲುವು ಕಂಡು ಆನಂದಿಸಿ ಇಳಿಯಹತ್ತಿದೆವು. ಮಾರ್ಗವು ಇಕ್ಕಟ್ಟಾಗಿದ್ದರೂ ಇಳಿಜಾರಾದುದರಿಂದ ಅತಿ ತೀವ್ರ ನಾವು ಇಳಿದುಕೊಂಡ ಛತ್ರಕ್ಕೆ ಬಂದೆವು; 'ಮನಸೋಕ್ತವಾಗಿ' ಊಟಹೊಡೆದು ವಿಶ್ರಾಂತಿಸಿದೆವು.

ಸರಿಯಾಗಿ ನಾಲ್ಕಕ್ಕೆ ಹೊಸಪೇಟೆಗೆ ಹೋಗುವ ನಮ್ಮ ಬಾಡಿಗೆಯ ಬಸ್ ವಾಹನವು ಬರಲು, ನಾ ಮುಂದು ನೀ ಮುಂದೆಂದು ಎಲ್ಲರೂ ಹತ್ತಿದರು. ಗಾಡಿಯ ವೇಳೆಯು ರಾತ್ರಿ ಹನ್ನೊಂದರವರೆಗೆ ಇದ್ದುದರಿಂದಲೊ

ಏನೊ, ನಡುವೆ ಹತ್ತಾರು ಸಲ ಮೋಟರು— ಕಂಡಕ್ಟರ್ ಡ್ರ್ಯಾಯ್‌ವ್ಹರರ ಮತಭೇದದಲ್ಲಿ ಸಿಕ್ಕು— ಯಾರ ಮಾತನ್ನೂ ಕೇಳದೆ ತಟಸ್ಥವೃತ್ತಿಯನ್ನವಲಂಬಿಸಿತು! ಸರಿ. ಒಳಗಿದ್ದವರು ನೂಕುವುದು, ಮತ್ತೆ ಆವೇಶ-ಕುತೂಹಲ ಭರದಲ್ಲಿ (ನೆಟ್ಟಗೆ ಸಾಗೀತೇನೊ ಎಂದು) ಹತ್ತುವುದು ನಡೆಯಿತು. ಸಾಮೂಹಿಕ ಗೀತ, ಭಾವಗೀತ, ಚಲಚ್ಚಿತ್ರದ ಹಾಡು, ಹಾಳುಹರಟೆ— ಎಷ್ಟಾದರೂ, ೬ ಮೈಲು ಸಹ ಮೋಟರು ಕ್ರಮಿಸಿರಲಿಲ್ಲ. ಡ್ರ್ಯಾಯ್‌ವ್ಹರನು ತನ್ನ ಅಧಿಕಾರ-ಬುದ್ಧಿಯ ಘಟ್ಟದಿಂದ ಕೆಳಗೆ ಇಳಿಯನು; ಕಂಡಕ್ಟರನು ತನಗೆ ಯೋಗ್ಯ ಟೀಪಾರ್ಟಿಯಾಗಲಿಲ್ಲವೆಂದು ಸೆಡವು ಮಾಡುವನು. ಹೀಗೆ ಸುವ್ಯವಸ್ಥಿತವಾದ ರೋಮಾಂಚಕಾರಿ ಹೋರಾಟ ಸಾಗಿತು. ಅದರಲ್ಲಿ ಬೇರೆ ಎಸ್. ಟಿ. ಗೆಳೆಯರು ಬಂದು— ನಮ್ಮೆಲ್ಲರ ಸುದೈವ— ಮೂಲ ಡ್ರ್ಯಾಯ್‌ವ್ಹರ್ ಕಂಡಕ್ಟರರ ದುರ್ದೈವವೆಂಬಂತೆ— ಮೋಟರನ್ನು ದಾರಿಗೆ ತಂದರು. ಹಟಮಾಡುವ ಮಗವನ್ನು ರಮಿಸಿದಂತೆ ಮತ್ತೆ ಮೋಟರು ಸಾಗಿತು. ಹೊಸಪೇಟೆ ಬಂದಿತು. ಗಾಡಿ ಹಿಡಿದೆವು. ರಾತ್ರಿಯಲ್ಲಾಗಲಿ, ಗಾಡಿಯಿಂದಿಳಿದ ಮರುದಿನವಾಗಲಿ, ನಮ್ಮೆಲ್ಲರ ಕಣ್ಣೆದುರು ಆ ಡ್ಯಾಮ್-ಸಾಯಿಟ್, ಆ ಹಂಪೆ, ಆ ವಿಜಯನಗರ, ಆ ನಮ್ಮ ರಸ-ವಿಷ ನಿಮಿಷಗಳು!

"A thing of beauty is a joy forever; its loveliness increases but never passes into nothingness and still will keep a bower quiet for us and a sleep full of sweet dreams." ಎಂಬ ಕೀಟ್ಸ್ ಕವಿಯ ಉಕ್ತಿಯಂತೆ ನಮ್ಮ ಮನದಾಗಸದಲ್ಲಿ ಎಂದೂ ಈ ನೋಟಗಳು ಉಳಿಯತಕ್ಕುವೆ. ಕಾಲ ಉರುಳಿದಂತೆ ಮಸುಕೆನಿಸುವ ಬದಲು ಅವರ್ಣನೀಯ ಅಪಾರ ಆನಂದವೇ ಇವುಗಳಿಂದ ಉದ್ಭವಿಸೀತೆಂಬ ಆತ್ಮವಿಶ್ವಾಸ ನಮಗಿದೆ.

# ರೈಲು ನಿಲ್ದಾಣ

ಒಂದು ಚಿಕ್ಕ ಹಳ್ಳಿಗಾಗಲಿ, ದೊಡ್ಡ ಊರಿಗಾಗಲಿ ಜಟಕಾ, ಟಾಂಗಾ, ಮೋಟರುಗಳ ಉಲಿವು ಎಷ್ಟಿದ್ದರೂ ಕಣ್ಣಿಗೆ ಹಬ್ಬವೆನಿಸಲಿಕ್ಕಿಲ್ಲ; ಮನದಲ್ಲಿ ಸಂತಸ ಉಕ್ಕಲಿಕ್ಕಿಲ್ಲ; ವಾತಾವರಣದ ವೈಭವದ ಆವಿರ್ಭಾವವೆನಿಸಲಿಕ್ಕಿಲ್ಲ. ಅದೇ ಮುಂಜಾವು ಇರುಳು ಜನರು ತುಂಬಿದ ಒಂದು ರೈಲುಗಾಡಿ ಬಂದು ಹೋಗುತ್ತಿದ್ದರೆ ಅದರ ಥಾಟೇ ಬೇರೆ. ದಿನದಲ್ಲಿ ಅದು ಒಂದು ಸಲ ಜನರಿಗಾಗಿ ನಿಂತರೂ ಏನೂ ಪ್ರಮಾದವಾಗದು. ಬರುವುದೇ ತಡವಾಗಿ ಮರುದಿನ ಬಂದರಾಗಲಿ, ಇಲ್ಲವೆ ಗೂಡ್ಸ್ ಗಾಡಿಯ ಆಗಮನವಾಗಲಿ, ಅಷ್ಟೇ ಉತ್ಸಾಹದ ಬುಗ್ಗೆ ಹೊರಹೊಮ್ಮೀತು. ನಾಗರಿಕತೆಯ ಸಂಕೇತವೆಂದರೆ ರೈಲುಗಾಡಿಯ ಸಂದರ್ಶನವೆಂದರೂ— ಇಂದಿನ ಇಪ್ಪತ್ತನೆಯ ಶತಮಾನದಲ್ಲಿ ಸರಿಹೋದೀತು.

"ಸರಿ. ಅಂತಹ ಐಸಿರಿ ಭಾಗ್ಯ ಇದರಿಂದೇನು ?" ಎಂದು ಥಟ್ಟನೆ ಚಿಕಿತ್ಸಕ ವಾಚಕರು ಪ್ರಶ್ನೆ ಹಾಕುವ ಸಂಭವವುಂಟು. ನಿಲ್ದಾಣವೆಂದರೆ ಬರಿ ನಿಲ್ದಾಣವಾದೀತೇ ಊರಿಗೆ ? ಹಳ್ಳಿಯ ಸ್ಥಳಕ್ಕೆ ರೈಲುನಿಲ್ದಾಣದಿಂದ ಹೊಸ ಪರಿಸರದ ನಿರ್ಮಿತಿಯಾಗುವುದಲ್ಲವೆ ? ಅತಿ ಕನಿಷ್ಟವೆಂದರೆ, ಸಿರಿವಂತ ನಿರುದ್ಯೋಗಿಗಳು ಅವರ ಪರಿವಾರವು ಒಂದಿಲ್ಲೊಂದು ನೆವ ಮುಂದುಮಾಡಿ ಅಲ್ಲಿಗೆ ಬಂದು ಹೋಗದಿದ್ದರೆ, ಅವರ ಮನಸಿಗೆ ಹುರುಹುರು ಎನಿಸುವುದುಂಟು ಲಗ್ನನಿಬ್ಬಣವಿದ್ದಾಗಂತೂ ಕಾಯಿದೆಯಿಂದ ರಭಸ ಹೆಚ್ಚುವುದು. ಒಂದೇ ಕೊಠಡಿಯ ಚಿಕ್ಕ ನಿಲ್ದಾಣದ ಸುತ್ತುಮುತ್ತು

ಕಾಣದ್ದೇನು? ಕಂಡೇ ಮನದ ಕಣ್ಣೆದುರು ಚಿತ್ರ ಮೂಡಿಸಿಕೊಂಡರೂ ಪರವಾ ಇಲ್ಲ. ಇತ್ತ ಪಟ್ಟಣವೂ ಅಲ್ಲ, ಅತ್ತ ಹಾಳುಹಳ್ಳಿಯೂ ಅಲ್ಲ— ಎಂಬಂತಹ ಊರಿಗೆ ರೈಲುನಿಲ್ದಾಣವಿದ್ದುದಾದರೆ, ಅದರ ಅಕ್ಕಪಕ್ಕದಲ್ಲಿ ಚಹಾದುಕಾನ್, ಬೀಡಿ ಅಂಗಡಿ, ವಾಶಿಂಗ್ ಕಂಪನಿ, ಸಲೂನ್, ಕಿರಾಣಿ ಕಾಳುಕೂಡಿದ ಅಂಗಡಿ, ಕೊನೆಗೆ ಕೋರ್ಟು ಕಚೇರಿ ನಗರಸಭೆಗಳ ತ್ರಿವೇಣೀ ಸಂಗಮವಾದ ಕಟ್ಟಡವಂತೂ ಕೂಗಳತೆಯ ಅಂತರದಲ್ಲಿ ಕಾಣಲೇಬೇಕು. ಹಳ್ಳಿಗಳ ರೈಲುನಿಲ್ದಾಣಗಳೇ ಇಂತಹ ಉತ್ಸುಕತೆಯ ಆಗರವಾದರೆ, ಪಟ್ಟಣಗಳ ರೈಲುಠಾಣಗಳ ಮಾತೆತ್ತುವುದೇ ಅನಾವಶ್ಯಕ; ಅವ್ಯವಹಾರ್ಯ!

ಅಹುದು. ನಿಲ್ದಾಣಗಳು ಚಿಕ್ಕವಿರಲಿ, ದೊಡ್ಡವಿರಲಿ, ಅವುಗಳ ಅಂಗ-ಉಪಾಂಗಗಳಿಗೆ ಕೊರತೆ ಬರುವುದೇ ಇಲ್ಲ. ಮೊತ್ತಮೊದಲು ಪರ ದೇಶಕ್ಕೆ ಹೊರಡುವವರಿಗೆ ಪ್ಯಾಸ್‌ಪೋರ್ಟ್ ಅವಶ್ಯವಿರುವಂತೆ, ಪ್ರಯಾಣಕ್ಕೆ ಯೋಗ್ಯತೆ ತರುವಂತೆ ಮಾಡಲು ಒಂದು ಬುಕಿಂಗ್ ಆಫೀಸು ಇದ್ದೇ ಇರುವುದು. ಅವಸರದಲ್ಲಿ ಅಲ್ಲಿ ಸವಕಳಿಯ ನಾಣ್ಯ ದಾಟಿಸುವುದು, ಕಡಿಮೆ ಹಣ-ಹೆಚ್ಚು ಹಣದ ಗಲಭೆಯಲ್ಲಿ ಬೀಳುವುದು ಅಥವಾ ವಿಚಾರದ ಕೋಲಾಹಲದಲ್ಲಿ ಅದೇ ಊರ ಟಿಕೀಟು ಬೇಡುವುದು— ತೀರ ಸಾಮಾನ್ಯ ಸಂಗತಿಗಳು. ಹೀಗೆ ಹೇಗೂ ಟಿಕೀಟು ಕೊಂಡು ಪ್ರವಾಸಿಯು ಒಳಗೆ ಹೋದಾಗ— ವೇಳೆ ಇದ್ದರೆ— ಅವನು ಚಹ-ತಿನಿಸಿಗೆ ಮನಸ್ಸು ಮಾಡು ವನು. ಅವುಗಳ ದರ ಗುಣಗಳೋ ಜಗತ್ತಿಗೇ ಹೊರತು! ಬಹಳ ಒಡವೆ ಗಳಿದ್ದು ವಿರಾಮದಿಂದ ಹೊರಡಬೇಕೆನ್ನುವವರಿಗೆ ಪಾರ್ಸಲ್ ಆಫೀಸ್, ಗೂಡ್ಸ್‌ಸೆಡ್ ಇವುಗಳ ಸಂಪರ್ಕ ತಪ್ಪದು. ಕೇವಲ ನಿರೀಕ್ಷಣೆ, ಕಾಲ ಹರಣಕ್ಕೆಂದು ಬಂದವರಿಗೆ ಪುಕ್ಕಟೆಯಾಗಿ ಓದಿ ಹೋಗಲು ಬುಕ್ ಸ್ಟಾಲ್ ವಿರಾಜಿಸುವುದು. ಆಗೀಗ ಅಲೆದಾಡುವ ನಮ್ಮ ರೈಲು ಅಧಿಕಾರಿ ವರ್ಗದ ಅಧಿಕಾರಿಗಳ ಭಾಷೆಯೋ? ಮೂಲ ಆಂಗ್ಲರು ಅದನ್ನು ಕೇಳಿ ಎದೆಯೊಡೆದುಕೊಳ್ಳುವಂತಾದರೂ, ಇವರು ಕಿರುಕುಳ ತಪ್ಪಾದಾಗ— "You may guard me; under guard me; but please do not porter me" ಎಂದು ಉದ್ಗಾರ ತೆಗೆಯುವದು ತೀರ ಸಾಮಾನ್ಯ ರಂಜಕ

ದೃಶ್ಯ ! ಅಲ್ಲಿಯ ಸಾರಸ್ವತ ಪ್ರಪಂಚವೋ ? ಕಂಡೇ ಸಂತಸಪಡಬೇಕು. ಸ್ವಭಾಷೆ-ಪರಭಾಷೆಗಳ ಲೋಕಪ್ರಿಯ (?) ಸಾಪ್ತಾಹಿಕ-ಮಾಸಿಕ-ದೈನಿಕಗಳು ಒಂದೆಡೆ ಒರಗಿದ್ದರೆ, ಸ್ಯಾಂಪಲ್ ಎಂದು ಒಂದೂ ಎರಡೂ ಇರುವ ಪತ್ತೇದಾರಿ ಕಾದಂಬರಿಗಳು, ಸಣ್ಣ ಕತೆಗಳು (ಕವನಗಳು ಔಷಧಕ್ಕೆ ಮಾತ್ರ!) ಬೇರೆಡೆಗೆ ಅವಿತು ಕುಳಿತು ರಸಿಕ ವಾಚಕರ ಕಣ್ಮನ ಸೆಳೆಯುವುವು. ಉಚ್ಚ ಪೀಠವನ್ನೇರಿದ ಇತರ ಹೊತ್ತಿಗೆಗಳನ್ನು ಮರೆತರೆ ರಸದೂಟಕ್ಕೆ ಎರವಾದಂತೆ ! ವಾತ್ಸಾಯನನ ಕಾಮಸೂತ್ರ, ಹಸ್ತಸಾಮುದ್ರಿಕ ಗ್ರಂಥ, ಚರಿತ್ರೆ ಮೊದಲ್ಗೊಂಡು Confessions of a London prostitute ಮತ್ತು How to make friends ವರೆಗೆ ಪುಸ್ತಕಗಳ ವಿಸ್ತಾರವೈವಿಧ್ಯವಿರುವುದುಂಟು. ಆಗೀಗಿನ ಕಡಮೆ ಬೆಲೆಯ ಭಗವದ್ಗೀತೆ, ಆರಾಣೆಯಿಂದ ಪ್ರಾರಂಭಿಸಿ ಒಂದುವರೆ ರೂಪಾಯಿವರೆಗಿನ ಆಕರ್ಷಕ (?) ಗದ್ಯವಾಙ್ಮಯ ಹೊತ್ತಿಗೆಗಳಿಗೆ ಲೆಕ್ಕವೇ ಇಲ್ಲ. ನಿಲ್ದಾಣದ ಸೀಮೆಗಳೊಳಗೆ ಗಾಡಿಯನ್ನು ಬಿಡುವ ಸಿಗ್ನಲ್ ಕೊಡುವವರ ತರಾತುರಿ, ಅದೇ ಗಾಡಿ ಬಂದಾಗಿನ ಕೂಲಿಯವರ ಉಪಟಳ ಹೊರತುಪಡಿಸಿದರೆ, ಉಳಿದ ದಿನದ ಕಾಲಾವಧಿಯಲ್ಲಿ ನಿಲ್ದಾಣವು ಸಂತೆ ಬಯಲಾದ ಪೇಟೆಯ ಸ್ಥಳದಂತೆ ಕೊಂಚ ಹಾಳು ಸುರಿಯುವುದೆಂದು ಹೇಳದೆ ವಿಧಿಯಿಲ್ಲ. ಆಂಗ್ಲ ನುಡಿಯಲ್ಲಿ ನುಡಿಯಬೇಕಾದರೆ 'Like a deserted banquet hall' ಎಂಬ ಉಪಮೆ ಉಸಿರಬಹುದು. ಬಂಧು-ಬಳಗದವರನ್ನು ಆಸ್ಥೆಯಿಂದ ಬೀಳ್ಕೊಡಲು ಬಂದವರ, ತೀರ ಸಂಬಂಧಿಕರ ಸಮ್ಮಿಶ್ರ ರಸವಿರಸಗಳ ಭಾವನೆಗಳನ್ನು ಮನೋಭೂಮಿಕೆಯನ್ನು ಮರೆತರೆ, ಗಾಡಿ ಹೋದೊಡನೆ ಉಳಿದದ್ದೇನು ?— ಎಂದು ಕೇಳಿದರೂ ತಪ್ಪಲ್ಲ.

ರೈಲುನಿಲ್ದಾಣದ ನೈಜ ವಿಶ್ವರೂಪ ಕಂಡು ರಸನಿಮಿಷಗಳನ್ನು ನಾವು ಅನುಭವಿಸುವುದು ಗಾಡಿ ಬಂದಾಗಲೆ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಬರುವಾಗಲಾದರೂ ಅದರ ಅಬ್ಬರವೆಷ್ಟು ! ಒಮ್ಮೊಮ್ಮೆ 'ಧಡ್ ಧಡ್' 'ಧಡ್ ಧಡ್' ಎಂಬ ನಿಸ್ವನದೊಡನೆ ಬಂದು ನಿಂತು, ರಾಕ್ಷಸರ ಯಕ್ಷಿಣಿಯರ ವೇಗ ನಾಚಿಸಿದರೆ, ಬೇರೊಂದು ಸಲ ನವವಧುವಿನ ನೂಪುರದ ಝಣತ್ಕಾರದ ಮಂಜುಳರವದಿಂದೇನೋ ಎನ್ನುವಂತೆ 'ಜಗ್ ಜಗ್' 'ಝುಕು ಝುಕು' 'ಜಗ್ ಜಗ್ ಝುಕು ಝುಕು' ಎಂಬ ದನಿ

ಯೊಡನೆ ಪ್ಲಾಟಫಾರ್ಮಿಗೆ ಬಂದು ತಲುಪುವುದು. ಇಂತಹ ಕಾಳಲಯ ಬದ್ಧತೆಗೆ ಮನಸೋತೇ ಹಿರಿಯರು ಕಿರಿಯರು ಇದಕ್ಕಾಗಿ ಮಾರುಹೋಗಿರುವರು. ಹೀಗೆ ಗಾಡಿ ಒಮ್ಮೆ ಒನಪಿನಿಂದ ಬಂದು ನಿಂತಿರುವುದೇ ತಡ; ಸಪ್ತಸ್ವರಗಳು ನಮ್ಮ ಕಿವಿ ಗಡಚಿಕ್ಕಿಸಿಬಿಡುವುವು. ಹತ್ತುವವರ ಗೋಳನ್ನಂತೂ— ಅತಿ ಗದ್ದಲವಿದ್ದು ಇರುವೆಗೂ ಇಂಬು ಇರದಾಗ— ದೇವರೇ ಬಲ್ಲ! ಈ ಮೊದಲೇ ಒಳಗಿದ್ದು ಸುಖಾಸೀನರಾದವರು, ತಮ್ಮ ಹಿಂದಿನ ತೊಂದರೆ ನೆನಿಸಿಕೊಂಡು ಬೇಕೆಂತಲೇ ಉಪಕಾರಬುದ್ಧಿಯನ್ನು ಮುಂದು ಮಾಡರು. ಹಲವರು ನೈಜ ಸಹಾನುಭೂತಿಯಿಂದ— ಹೇಗೊ, ಒಳನುಗ್ಗಿದವರಿಗೆ ಸಹಾಯ ಸಲ್ಲಿಸಲು ಮುಂದುವರಿದು ಹೋದರೆ, 'ಹಾ! ಕರ್ಣನ ತುಂಡು' ಎಂದು ಉಪಹಾಸದಿಂದ ಉದ್ಗಾರ ಹೊರಡುವದು ಏನೇ ಆಗಲಿ, ಹತ್ತುವವರಿಗಾಗಲಿ ಇಳಿಯುವವರಿಗಾಗಲಿ ಗಾಡಿಯು ಒಳಗಿದ್ದಷ್ಟು ವೇಳೆ ಜೀವನದ ವಿವಿಧ ರಂಗಗಳ ಅನುಭವ ಸಂಪರ್ಕ ಬಂದೇತೀರುವುದರಲ್ಲಿ ಸಂದೇಹವೇನು? ಅಂತೇ Travel as a part of education ಎಂದು ಬಲ್ಲವರು ಸಾರಿರಬಹುದೆ? ಈ ಮಾತಿನ ನಿದರ್ಶನ ಇನ್ನೂ ಕಾಣಬೇಕಾದವರು, ಗಾಡಿಯೊಳಗಿನ ಚಿಕ್ಕಪ್ರಪಂಚದ ಚಟುವಟಿಕೆ ನಿರೀಕ್ಷಿಸಲಿ. ಒಂದು ಚಿತ್ರಪಟದ ಕಥಾನಕವನ್ನಾಗಲಿ, ನಾಟಕ-ಕಾದಂಬರಿಯ ವಸ್ತುಗಳನ್ನಾಗಲಿ ಅಲ್ಲಿ ನಡೆಯುವ ಮಾತುಕತೆಯ ರಸವಂತಿಕೆಯ ಮುಂದೆ ನಿವಾಳಿಸಿ ಚೆಲ್ಲಬೇಕು. ಒಬ್ಬರು ಮದುವೆಗಾಗಿ ಪರಿವಾರದೊಡನೆ ಉನ್ಮಾದದಿಂದ ಹೊರಟಿದ್ದರೆ, ಬೇರೆಯವರು ಮನದ ಬೇಜಾರ ಕಳೆದುಕೊಳ್ಳಲು ಪ್ರವಾಸ ಕೈಕೊಂಡಿರುವರು. ನವದಂಪತಿಗಳು ಚಿಕ್ಕ ಮಗುವಿನೊಡನೆ ತಮ್ಮ ನೌಕರಿಯ ನಗರಕ್ಕೆ ಹೊರಟಿರುವರು. ಶಾಲೆ-ಕಾಲೇಜುಗಳ ಪರೀಕ್ಷೆಯ ಹಾವಳಿ ತೀರಿತೆಂದು ಹಾಯಾಗಿ ಹಲವು ತರುಣರು ತಮ್ಮೂರಿಗೆ ನಗುತ್ತ ಕೆಲೆಯುತ್ತ ಬೇರೊಂದು ಡಬ್ಬಿಯಲ್ಲಿ ಸಾಗಿದ್ದರೆ, ಅತ್ತೆಯ ಮನೆಗೆ ಗರತಿಯೊಬ್ಬಳು ಕಣ್ಣೀರಿನ ಕಾಲುವೆ ಹರಸುತ್ತ ಅಲ್ಲಿಯೇ ನಡೆದಿರುವಳು. ಅದೊ, ಅಲ್ಲಿ ಕಿಟಕಿಯ ಬಳಿ ನೇಗಿಲದೊಡೆಯನ ಪರಿವಾರವು ಕುಳಿತಿದೆ. ಎಲೆ, ಅಡಕೆ ತಂಬಾಕಿನ ವೈಭವದಲ್ಲಿ, ಹೊಲ ಮನೆ ಸಂಸಾರದ ಸಂಭಾಷಣೆಯ ಉತ್ಸಾಹದಲ್ಲಿ ಸುತ್ತುಮುತ್ತಲಿನ ಪರಿವೆಯೇ ಅದಕ್ಕಿಲ್ಲ. ಊಹಾ

ಲೋಕದಲ್ಲದರ ವಿಹಾರ. ಈ ರಂಗಭೂಮಿಯಲ್ಲಿಯೇ ಆಗೀಗ ಕುರುಡಕುಂಟ ಭಿಕ್ಷುಕ-ಭಿಕ್ಷುಕಿಯರು ಸಂಗೀತಲಹರಿಯಲ್ಲಿ ಜನಜಂಗುಳಿಯನ್ನು ಮುಳು ಗಿಸಿಬಿಡುವರು. ಯಾವಾಗಲೂ ಈ ಸ್ತ್ರೀ-ಪುರುಷರ ಸಂಗೀತ ಚೆನ್ನು ಎಂದು ಹೇಳಲಾಗದಿದ್ದರೂ, ಬ್ರಹ್ಮಸೃಷ್ಟಿಯ ಚಮತ್ಕಾರವೆಂದರೆ ಆಗೀಗ ದೇದಿಪ್ಯ ಮಾನ ತಾರೆಗಳು ಮಿನುಗಿ ಹೋಗುವುದು ಅಚ್ಚರಿಯ ಮಾತಲ್ಲ ! ಟೂಥ್-ಪಾವಡರ್, ಕಸ್ತೂರಿ ಮಾತ್ರೆ, ಪೆಪ್ಪರಮೆಂಟು, ಸೇಂಗಾ ಮಾರುವವರ ಉಪಟಳವನ್ನಂತೂ ಹೇಳಲಾಸಲ್ಲ. ಗಾಡಿಯು ವೇಗದಿಂದ ಸಾಗಿದಾಗಲೇ ಡಬ್ಬಿಯಿಂದ ಡಬ್ಬಿಗೆ ಧುಮುಕುವ ಅವರ ಆ ಲೀಲಾಪ್ರಸಂಗಗಳನ್ನು ಕಂಡವರು, ಸರ್ಕಸ್ಸಿನ ಕೆಲಸಗಾರರನ್ನು ತುಚ್ಛೀಕರಿಸಿದರೇನು ಪಾಪ !

"ಬದುಕು ರೈಲಿನ ಬಂಡಿ ಗಾರ್ಡ್ ಆದರ ಸಾಹೇಬ" ಎಂದು ಡಿ. ವ್ಹಿ. ಗುಂಡಪ್ಪನವರ ನುಡಿಯನ್ನು ವ್ಯತ್ಯಾಸ ಮಾಡಿ ಹೇಳಿದರೆ ರೈಲು ನಿಲ್ದಾಣದ ಐಸಿರಿಯ ಕಲ್ಪನೆ ಮಿಂಚೀತು. ಅಲ್ಲಿಯ ಗಾರ್ಡ, ಡ್ರಾಯ್‌ವ್ಹರ್, ಆ ಯಂತ್ರ— ಎಲ್ಲ ಕರ್ಮಯೋಗದ ಉಪಾಸನೆ ನಡಿಸಿರು ವಂತೆ ತೋರುವುವು. ಚಿಕ್ಕೆ ಚಂದ್ರಮ ಸೂರ್ಯರ ಗತಿಗೆ ತೊಡಕಾದರೂ ಇವರ ವ್ಯಾಪಾರ ಮಾತ್ರ ನಿರಂತರ ಸಾಗಿಯೇ ತೀರುವುದು. ಗಾಡಿ ತಾಸಿಗೆ ತಾಸೇಕೆ, ದಿವಸಕ್ಕೆ ದಿವಸ ತಡವಾದರೂ— ಕಾರ್ಯರಂಗದಲ್ಲಿ ಹೆಚ್ಚು ಕಡಿಮೆ ಏನಾದೀತು ? ಕೊನೆಗೆ ಮಾನವಸ್ವಭಾವ ಸಂದರ್ಶನಕ್ಕೆ, ಸಂಸ್ಕೃತಿಯ ಪ್ರಸಾರಕ್ಕೆ, ನವನಾಗರಿಕತೆಯ ನಿರ್ಮಾಣಕ್ಕೆ, ತಾತ್ತ್ವಿಕ ವಿವೇಚನೆಯ ದರ್ಶನಕ್ಕೆ ಇದು ಸ್ಫೂರ್ತಿಯ ಆಗರ ಎಂದು ಹೇಳಿದರೆ, ರೈಲುನಿಲ್ದಾಣದ ಭವ್ಯತೆ ದಿವ್ಯತೆ ಉಸುರಿದಂತಾಗಲಿಕ್ಕಿಲ್ಲವೆ ? ಅಲ್ಲಿಯ ಜನಜೀವನದ ಭಾಷೆ-ಉಡುಪು-ಚಟುವಟಿಕೆ-ವೈಖರಿ ಕಣ್ಣಮುಂದೆ ತಂದು ಕೊಂಡರಂತೂ, ರೈಲುನಿಲ್ದಾಣವು ಸಾಮಾಜಿಕ ನಾಟಕದ ರಂಗಭೂಮಿಯೆ! ನಿಸರ್ಗದ ಮಡಿಲಲ್ಲಿ ಶೂನ್ಯದೊಡನೆ ಐಕ್ಯಹೊಂದುವ ಆ ಬೆಳ್ಳಿಯ ಹಳಿಗಳ ಗುಂಟ ನಿರಂತರ ಓಡುವ ಉಗಿಬಂಡಿಯು, ಜಗಚ್ಚಕ್ರದ ಪ್ರತೀಕವೇ ಅಲ್ಲವೇ ? ಇದೀಗ ರೈಲುನಿಲ್ದಾಣದ ರೋಮಾಂಚಕತೆ, ಕಲಾಕಲ್ಪಕತೆ !

# ಮೋಡ

'ಮೇಘಾಲೋಕೆ ಭವತಿ ಸುಖಿನೋಽಪ್ಯನ್ಯಥಾ ವೃತ್ತಿ ಚೇತಃ' ಎಂಬ ಕವಿಕುಲಗುರು ಕಾಲಿದಾಸನ ಮೇಘದೂತ ಖಂಡಕಾವ್ಯದಲ್ಲಿಯ ಯಕ್ಷನ ಉದ್ಗಾರ ಕೇಳಿದರೆ ಸಾಕು, ಮೋಡದ ಐಂದ್ರಜಾಲಿಕ ಶಕ್ತಿಯ ಅರಿವು ಉಂಟಾಗಿಯೇ ತಿರುವುದು. ತನ್ನ ಪ್ರೇಯಸಿಗೆ ವಿರಹಿಹೃದಯದ ಸಂದೇಶ ಮುಟ್ಟಿಸಲು ಯಕ್ಷನು ಅದನ್ನು ಹೊಗಳಿದ್ದು ಎಷ್ಟು ವಿಧವಾಗಿ! ಒಡ್ಡಿನೊಡನೆ ಡಿಕ್ಕಿ ಹೊಡೆಯುವ ಆನೆಯಂತೆ ಹಾಗೂ ಕಾಮರೂಪಿಯೆಂದು ಉಸುರಿ, ಇಂದ್ರನ ಪ್ರಕೃತಿಪುರುಷನೆಂದೂ ಉಬ್ಬಿಸುವನು. ಕೊನೆಗೆ ಲೋಕ ವಿಖ್ಯಾತವಾದ ಪುಷ್ಕರಾವರ್ತದ ವಂಶದಲ್ಲಿ ಹುಟ್ಟಿದವನೆಂದು ಹೇಳಿ ಸೆರಗೊಡ್ಡಿ ಬೇಡಿಕೊಂಡು ವ್ಯವಸ್ಥಿತ ಪೂಜೆ ಸಲ್ಲಿಸಿದಾಗ ಮೋಡವು ತೃಪ್ತಿ ಹೊಂದಿ ಕಣ್ಣು ತೆರೆದಿತಂತೆ! ಕೀಳು ಮನುಷ್ಯನೆಡೆಗೆ ಹೋಗಿ ತನ್ನ ಕೆಲಸ ವಾಗಲೆಂದು ದೈನ್ಯಾವಸ್ಥೆ ತೋರುವುದಕ್ಕಿಂತ, ಕೆಲಸವಾಗದಿದ್ದರೂ ಸೈ ಸದ್ಗುಣಿಯೆಡೆಗೇ ಹೋಗಬೇಕೆಂಬ ನುಡಿ ಕೇಳಿ ನಮಗೆ ಮೋಡದ ದೊಡ್ಡಸ್ತಿಕೆ ಗೌರವಗಳ ಕಲ್ಪನೆಯಾಗದಿರುವುದೆ? ಸಾಮಾನ್ಯರು ಛೀ! ಮೋಡದಲ್ಲಿದ್ದದ್ದೇನು–ಬರಿ ಹೊಗೆ–ನೀರು–ಗಾಳಿ–ಪ್ರಕಾಶ ಎಂದು ವೈಜ್ಞಾನಿಕರಂತೆ ನುಡಿದರೂ ಯಕ್ಷನ ಆತ್ಮೀಯತೆ, ಹೃದಯದ ಉತ್ಕಟ ವ್ಯಥೆ, ಪ್ರೇಯಸಿಗಾಗಿ ಅವ್ಯಾಜ ಪ್ರೇಮಗಳ ಮೂಲಕ ಅಲ್ಲಿ ಚೈತನ್ಯದ ಸೆಲೆ ಕಂಡುದು ಸ್ವಾಭಾವಿಕವೇ ಸರಿ. ಒಬ್ಬ ಯಕ್ಷನಿಗೆ ಮೋಡವು ಹೀಗೆ

ಉನ್ಮಾದದ ಆಗರವೆಂದು ಕಂಡುಬಂದರೆ, ಲೋಕದ ಸಕಲ ಜೀವಿರಾಶಿಗಳಿಗೆ ಅದು ಕಾಣುವ ಪರಿ ಎಂತೆಂಬುದು ನಿಜವಾಗಿಯೂ ರಂಜಕ ವಿಷಯವೇ.

ಕಲೆಯ ದೃಷ್ಟಿಯಿಂದ ಅವಲೋಕಿಸಿದಾಗ ಮೋಡಕ್ಕೆ ನಿಶ್ಚಿತವಾದ ಉಪಯುಕ್ತ ಸ್ಥಾನವಿದೆಯೆಂದು ಹೊಳೆಯುವುದು. ಅದರ ಹಿನ್ನೆಲೆಯ ಹಿರಿಮೆಯನ್ನಂತೂ ಕಡೆಗಣಿಸುವಂತಿಲ್ಲ. ಒಬ್ಬ ಕುಶಲ ಚಿತ್ರಕಲಾಕಾರನಿಗೆ ಅದರ ಅವಶ್ಯಕತೆ ಅನಿಸಿದಷ್ಟು ಸಾಮಾನ್ಯನಿಗೇನು ಗೊತ್ತು? ಸಾಹಿತ್ಯಲೋಕ—ಅದರಲ್ಲಿಯೂ ಕಾದಂಬರಿ ಕ್ಷೇತ್ರವನ್ನು ಕೊಂಚ ಸೂಕ್ಷ್ಮವಾಗಿ ನಿರುಕಿಸಿದರೆ, ಮೇಘಾಚ್ಛಾದಿತವಾದ ಆಕಾಶದ ಬೆಲೆ ತಿಳಿದೀತು. ವಂಗ ನಾಮಾಂಕಿತ ಕಾದಂಬರಿಕಾರರಾದ ಶರಚ್ಚಂದ್ರರ ಚಂದ್ರನಾಥ ಕಾದಂಬರಿಯನ್ನು ತೆಗೆದುಕೊಂಡರೆ, ಅಲ್ಲಿಯ ಒಂದು ಪ್ರಕರಣದಲ್ಲಿ ಕಥಾನಾಯಕನು ತನ್ನ ಹೆಂಡತಿಯ ಚಾರಿತ್ರ್ಯದ ಬಗ್ಗೆ ಸಂಶಯಪಟ್ಟು ತನ್ನ ಹಿರಿಯರ ಮನಶ್ಶಾಂತಿಗೋಸುಗ ಆಕೆಯನ್ನು ಮನೆ ಬಿಡಿಸುವನು. ಅದೊಂದು ಕರುಳು ಕೊರೆಯುವ ದೃಶ್ಯ. ಸರಯೂ ಮನಸಾ ತಪ್ಪು ಮಾಡಿದವಳಲ್ಲ. ತಾಯಿಯ ಮನೋದೌರ್ಬಲ್ಯಕ್ಕಾಗಿ ತನಗೆ ಶಿಕ್ಷೆಯಾದರೇನು ಪಾಪ ಎಂದು ಸಹಿಸುವಳು. ಭಾದ್ರಪದ ಮಾಸದಲ್ಲಿ ಸಾಕಿದ ಬೆಕ್ಕನ್ನಾದರೂ ಹೊರದೊಡುವುದು ಪಾಪವೆನಿಸಿದಾಗ ಧೊ ಧೊ ಎಂದು ಸುರಿಯುವ ಮಳೆಯಲ್ಲಿ ಹೆಂಡತಿಗೆ ಹೊರಗೆ ಹೋಗಬೇಕೆಂದು ಹೇಳುವುದು ಕರ್ತವ್ಯದ ಕಟ್ಟಿಗೆ ಸಿಕ್ಕಾಗ! ಹೀಗೆ ಒಂದು ಪಾತ್ರವು ರೌದ್ರತೆಯನ್ನು ತೋರುವಂತೆ ಮೋಡಕ್ಕಾದರೂ ಆ ಪ್ರಸಂಗದಲ್ಲಿ ಹೀಗೆ ವರ್ತಿಸಬೇಕಾಗಿ ಬಂದಿತು.

ಭಾವಗೀತ ಲೋಕದಲ್ಲಿ ವಿಹರಿಸುವಾಗ ಮೋಡದ ಅಸ್ತಿತ್ವ ಮಹತಿಯನ್ನು ಅಲ್ಲಗಳೆಯಲು ಬರುವಂತಿಲ್ಲ. ಟೆನಿಸನ್ ಕವಿಯು ಭಿಕ್ಷುಕೆಯ ಸೌಂದರ್ಯ ಬಣ್ಣಿಸುವಾಗ 'As shines the moon in clouded skies' ಎಂದು ಉಸಿರಿರುವುದು ಯಥಾರ್ಥವಾದ ನುಡಿಯೇ 'ಬಾಂದೇವಿಯ ಮಣಿಹಾರವಂತಿರುವ ಮಳೆಬಿಲ್ಲು ಎಂದಾದರೂ ನಿರಭ್ರವಾದ ಆಗಸದಲ್ಲಿ ಕಂಡೀತೆ?' ಶೆಲೆ, ವರ್ಡ್ಸ್‌ವರ್ಥ್ ಕವಿಗಳಂತೂ ತಮ್ಮ ನಚ್ಚಿನ ಲಾರ್ಕ್

ಪಕ್ಷಿಯು ಮೋಡಗಳದೇ ಎಂದು ಬಣ್ಣಿಸುವರು. ಹಾಡುವಾಗಲೆ ಹಾರುತ್ತ ಹಾರುತ್ತಲೇ ಇನ್ನೂ ಹಾಡುವ ಆ ಮೋಡದ ಪಕ್ಷಿಯೆಂದರೆ ಈ ನಿಸರ್ಗ ಕವಿಗಳಿಗೆ ಪಂಚಪ್ರಾಣ ವಿಲಾಯತಿಯಲ್ಲಿಯ ವಸಂತಋತು ಅತ್ಯಂತ ಮೋಹಕವಾದುದಂತೆ! ಆಗಸದಲ್ಲಿ ಆಗ ತಿಳಿ ನೀಲಿ ಮೇಘಗಳು ಚಿಕ್ಕಚಿಕ್ಕ ನಾವುಗಳಂತೆ ಸಾಗಿರುವುವು ಗಗನವೊ? ಅದೂ ನೀಲಿಮಾಮಯ ವಾದುದು. ಮಳೆಯೇ ? ಅದು ನಿಂತು ತೀರ ಹಿಂದಿನ ಮಾತಾಯಿತು.

**ಏಕ ಏವ ಖಗೊ ಮಾನೀ ಸುಖಂ ಜೀವತಿ ಚಾತಕಃ ।**
**ಅರ್ಥಿತ್ವಂ ಯಾತಿ ಶಕ್ರಸ್ಯ ನ ನೀಚಮುಪಸರ್ಪತಿ ॥**

ಎಂಬ ಸುಭಾಷಿತದಲ್ಲಿಯ ಆಶಯದಂತೆ, ಉಳಿದವರು ಮೋಡಕೆ. ಎಷ್ಟೇ ಮರ್ಯಾದೆ ಸಲ್ಲಿಸಲಿ ಬಿಡಲಿ, ಮಹಾ ಅಭಿಮಾನಧನವಾದ ಚಾತಕವು ಮಾತ್ರ ಕಂಡವರಿಗೆ ನೀರಿಗಾಗಿ ಬಾಯ್ದೆರೆಯುವದಿಲ್ಲ. ನೆಲದ ಮೇಲೆ ಬಿದ್ದದ್ದನ್ನಂತೂ ಮೊದಲು ಕಣ್ಣೆತ್ತಿ ನೋಡುವದಿಲ್ಲ. ಅದು ಇಂದ್ರನಿಗೇ ಮೊರೆಹೋದೀತು. ಕೀಳು ವಸ್ತುಗಳಿಗೆ ಕೇಳಿಕೊಂಡರೆ ಬಂದದ್ದೇನು ಎಂದು ಅದರ ಜೀವನದ ಗುಟ್ಟು. ಮೋಡದ ಮಹತಿಯ ಕಲ್ಪನೆ ಇಲ್ಲಿ ಬರುವದಷ್ಟೇ ಅಲ್ಲದೆ ಸುಸಂಸ್ಕೃತ ಜೀವಿಯ ಜೀವನದ ರೀತಿ ಎಂತಹದಿರಬೇಕೆಂಬದೂ ಈ ಪ್ರಸಕ್ತಿಯಲ್ಲಿ ಸ್ಪಷ್ಟವಾದೀತು. ಮೋಡವು ಕೊಡೆಗೈ ದೊರೆ ಎಂದೇ ಮೇಲೆ ಆಕಾಶಕ್ಕೇರಿತು. ಸಮುದ್ರವು ಬೇಡಿ ಬೇಡಿ ಕೆಳಗುಳಿಯಿತು ಎಂಬ ಸುಭಾಷಿತಕಾರನ ಮಾತಿನಲ್ಲಿಯೂ ಅಲೌಕಿಕ ಚಮತ್ಕಾರವೇ ಇರುವದು.

ಕಾವ್ಯದ ಹಾಗೂ ಸುಭಾಷಿತಕಾರರ ಅಮೋಘ ವಾಣಿಯನ್ನು ಒಂದೊಂದು ಸಲ ಮರೆತರೂ, ತಾನಿ, ತಾನಸೇನರ ಪವಾಡವನ್ನು ಮರೆಯ ಲಾಗದು. ಅವರೀರ್ವರ ಪ್ರಣಯ ಪ್ರಸಂಗವೂ ಅಷ್ಟೇ ಅಜರಾಮರ. ಅಕಬರ ಬಾದಶಹನ ಮಗಳ ಕಾಯಿಲೆಯನ್ನು ಗುಣಪಡಿಸಲು ಹೋಗಿ ತಾನಸೇನನು ತಾನು ಮೃತ್ಯು ದೇವತೆಯ ಮುಂದಿರದ ಹೊಸ್ತಿಲಕ್ಕೆ ತಲುಪಿ ದಾಗ ತಾನಿಯು ಪತಿಯ ಮೇಲಣ ಪ್ರೀತಿಯಿಂದ ಮೇಘ ಮಲ್ಹಾರ ನುಡಿಸಿ ನಿರಭ್ರವಾದ ಆಗಸದಲ್ಲಿ ಮೋಡಗಳ ಸಾಲುಗಳನ್ನೇ ತಂದು ನಿಲ್ಲಿಸಿದಳಂತೆ!

ಮೋಡವನ್ನೇ ಕರತಲಾಮಲಕವಾಗಿ ಮಾಡಿಕೊಂಡ ಆಕೆಯ ಗಾನಕಲೆಯಲ್ಲಿ ದಿವ್ಯತೆಯ ಸಾನ್ನಿಧ್ಯವಿದ್ದಿತೆಂಬಲ್ಲಿ ಸಂದೇಹವೇನು ?

ಸಾಹಿತ್ಯ ಸಂಗೀತಗಳು ಗಾಳಿಯ ವಿಷಯವೆನಿಸಿದರೆ, ಸಂಸಾರಿಗ ಕಂಸನಿಗೆ ಮಳೆಗಾಲದ ಮೋಡದ ದಿನಮಾನದಿಂದ ಒಂದಿಲ್ಲೊಂದು ಬಗೆಯಿಂದ ಚಿಂತೆ. ಇರುವ ಮನೆ ಸ್ವಂತದ್ದಾಗಿದ್ದರೆ ಅವನು ಚಪ್ಪರದ ರಿಪೇರಿಗಾಗಿ ಹೊರಡುವನು. ಆಕಾಶವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ಈ ಮೋಡಗಳು ಯಾವಾಗ ಎಷ್ಟು ಮಳೆಗರೆದಾವು ಎಂದು ಲೆಕ್ಕ ಹಾಕುವನು

**"ವಾತಾಯ ಕಪಿಲಾ ವಿದ್ಯುದಾತಪಾಯಾತಿಲೋಹಿನೀ ।**
**ಪೀತಾ ಭವತಿ ಸಸ್ಯಾಯ ದುರ್ಭಿಕ್ಷಾಯ ಸಿತಾ ಭವೇತ್ ॥"**

ಎಂಬ ಮಹಾಭಾಷ್ಯದಲ್ಲಿಯ ಮೋಡದ ಲಕ್ಷಣಗಳನ್ನರಿತ ಮಹನೀಯರಂತೂ ಇಂದಿನ ಮಳೆಯಷ್ಟನ್ನೇ ಏಕೆ ಮುಂದಿನ ಮಳೆಯ ಆಗುಹೋಗುಗಳನ್ನೂ ಹೇಳಬಹುದು. ಸರಿ. ಸಂಸಾರಿಗನಿದ್ದರೂ ಬಾಡಿಗೆಯ ತೀರ ಹಳೆಯ ಮನೆಯಲ್ಲಿ ಪಟ್ಟಣದಲ್ಲಿರುತ್ತಿದ್ದರೆ, ಮಳೆಗಾಲದ ದಿನಗಳಲ್ಲಿ ರೌದ್ರಾವತಾರ ತಳೆಯುವದು ಖಂಡಿತ ಮಾಲಕನಿಗೂ ಅವನಿಗೂ ಸುರಾಸುರ ಯುದ್ಧವಾದರೆ ಯಾರೂ ಹೊಣೆಯಾಗಲಾರರು ! ಪ್ರಜಾಸತ್ತಾತ್ಮಕ ರಾಜ್ಯದಾಡಳಿತೆಯಲ್ಲಿ ಯಾರು ಕಡಿಮೆ ಯಾರು ಹೆಚ್ಚು ?

ತಾತ್ವಿಕವಾದ ಒಳಗಣ್ಣು ತೆರದು ನೋಡುವ ಆಧ್ಯಾತ್ಮಿಕ ಮನೋವೃತ್ತಿಯವರಿಗೆ ಮೋಡದ ಮಹತ್ವ ಬೇರೆಯ ಬಗೆಯದು. ಈ ಜೀವನದಲ್ಲಿ ನಿರಾಶೆಯೆ ಹೆಚ್ಚಿದ್ದರೂ ಎಂದೊ ಒಮ್ಮೆಯಾದರೂ ಆಶಾಕಿರಣ ಮೊಳಗುವವೆಂದು ಅವರು ಕಪ್ಪುಮೋಡದ ಬೆಳ್ಳಿಯ ರೇಖೆಯನ್ನು ನೋಡಿ ಬೋಧಿಸುವರು. 'If winter comes can spring be far behind? ಎಂದು ಕೇಳುವ ಆಂಗ್ಲ ಕವಿ ಪ್ರವರರೊಬ್ಬರು ಮೋಡದ ಕಪ್ಪುವರ್ಣದಿಂದ ನಿರಾಶೆ ಹೊಂದಬಾರದೆಂದೂ ಮುಂದೆ ಅದೇ ಸುಭಿಕ್ಷೆ ಸುವರ್ಣದಿನ ತಂದೇ ತೀರುವದೆಂದೂ ಆತ್ಮವಿಶ್ವಾಸದಿಂದ ಉಸಿರಿರುವದು ದೊಡ್ಡ ಮಾತೇ.

ಆ್ಯಟಂ ಬಾಂಬ್, ಹೈಡ್ರೋಜಿನ್ ಬಾಂಬ್, ಕೋಬಾಲ್ಟ ಬಾಂಬಿನ ಇಂದಿನ ಇಪ್ಪತ್ತನೆಯ ಶತಮಾನದ ವೈಜ್ಞಾನಿಕ ಮನ್ವಂತರದಲ್ಲಿ ಮೋಡದ ಉಪಯೋಗವು ಹೇಗಾದೀತೊ ಎಂದು ಹೇಳುವದು ಎದೆಗಾರಿಕೆಯ ಮಾತೆನಿಸಿದರೂ ಆದಿ ಬುನಾದಿ ಕಾಲದಿಂದಿದ್ದ ಅದರ ರುದ್ರ ರಮಣೀಯತೆಯನ್ನು ಕನಿಷ್ಠಪಕ್ಷಕ್ಕೆ ಬುದ್ಧಿಜೀವಿಗಳಾದರೂ ಇಳಿಸಲಾಗದು. ಉಳಿದವರ ಹಂಗೇನು ?

# ಕೊಡೆಗಳು

ಕೊಡೆಗಳ ಮಾತು ಬಂದಾಗೆಲ್ಲ, ವರಕವಿ ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿಯ ಬೆಳ್ಗೊಡೆಯ ಪ್ರಸ್ತಾಪ ಮರೆಯುವಂತಹದೇ ಅಲ್ಲ. ಆ ಶ್ವೇತಚ್ಛತ್ರದ ಪ್ರಶ್ನೆ ಉದ್ಭೂತವಾದಾಗ ಸತ್ಯಸಂಧ ರಾಜನ ಮನಃಸ್ಥಿತಿಯಾದರೂ ಎಂತಹದು ! ತನ್ನ ರಾಜ್ಯವನ್ನೇ ಹೆರವರಿಗೆ ದಾನ ಮಾಡಿದ ಕನಸೆಂದರೆ ದುಃಸ್ವಪ್ನವೇ ! ಹೀಗೆ ಮನಸ್ಸು ವ್ಯಾಕುಲಿತವಾಗಿ ಗಾಸಿಗಾಸಿಯಾದಾಗ ರೂಪಶಾಲಿ ಹೊಲತಿಯರು ನೃತ್ಯ-ಸಂಗೀತಗಳ ವೈಭವ ವೈಖರಿ ಪ್ರದರ್ಶಿಸಿದಾಗ ಅರಸನಿಗೆ ಆನಂದದ ಲಾಸ್ಯದಲ್ಲಿ ಲೋಲಾಡಿದಂತೆ ಅನುಭವವಾದರೆ ಆಶ್ಚರ್ಯವಲ್ಲ. ಅದೇ ಉನ್ಮಾದಾವಸ್ಥೆ ಯಲ್ಲಿ 'ಬೇಡಿದ್ದು ಕೊಡುವೆ' ಎಂದು ನುಡಿದು, ತನ್ನ ಮಾತು ನಡಿಸಲೆಂದು ಪ್ರಾರಂಭಕ್ಕೆ ಮುತ್ತಿನ ಮಾಲೆ ಅವರೆದುರು ಎಸೆಯುವನು. ಆದರೆ ಹೊಲತಿ ಯರು ಅಲ್ಪ ಸಂತುಷ್ಟಿಗಳೇ ? ಛೇ ! ಎಲ್ಲಿಯ ಮಾತು ! ವಿಶ್ವಾಮಿತ್ರನ ಮಾಯೆಯಿಂದ ನಿರ್ಮಿತವಾಗಿ, ಹರಿಶ್ಚಂದ್ರನನ್ನು ಪೀಡಿಸಿ ಪೀಡಿಸಿ ಪರೀಕ್ಷಿಸಲು ಪಣ ತೊಟ್ಟವರು ಅವರು ! ಅಂತೇ ಅವರು— 'ರಾಜಾ, ನೀರಡಿಸಿದವರಿಗೆ ನೀರು ಕೊಡುವದು ಬಿಟ್ಟು ತುಪ್ಪ ಕೊಟ್ಟಂತಾಯಿತು, ಡಗೆ ಸುತ್ತಿ ಸಾವಡಸುತ್ತಿರಲು ನಿನ್ನ ಮುತ್ತಿನ ಸತ್ತಿಗೆಯೇ ತಕ್ಕ ಉಡುಗರೆ' ಎಂದು ಉದ್ಗರಿಸುವರು. ಅರಸನು ಕ್ಷಣಕಾಲ ದಂಗುಬಡೆದು ಅವಾಕ್ಕಾದರೂ ಇದು ತಾಯಿ, ಸತಿ, ಚತುರಂಗ ಬಲ ಪ್ರತೀಕ, ತಂದೆ, ದೈವ,—ಎಂತೆಂತೊ ಆದರ ಮಹಿಮೆ ಬಣ್ಣಿಸುವನು. ಆದರೂ ಲೋಭಿತನದ ಆರೋಪವೇನೂ

ಅವನಿಗೆ ತಪ್ಪುವದಿಲ್ಲ. ಇದೇ ಬಗೆಯಾಗಿ ಕವಿಕುಲಗುರು ಕಾಲಿದಾಸನ ರಘುವಂಶದಲ್ಲಿ, ಮಾಯಾಸಿಂಹವು ದಿಲೀಪನಿಗೆ ಸತ್ತಿಗೆಯ ಹಿರಿಮೆಯನ್ನೂ ಅವನ ತಾರುಣ್ಯವನ್ನೂ ಅಮೌಲ್ಯ ರಾಜವಿಲಾಸವನ್ನೂ ಅವನ ತಾರತಮ್ಯ ಹೀನತೆಯನ್ನೂ —

**' ಏಕಾತಪತ್ರಂ ಜಗತಃ ಪ್ರಭುತ್ವಂ**
**ನವಂ ವಯಃ ಕಾಂತಮಿದಂವಪುಶ್ಚ ||**
**ಅಲ್ಪಸ್ಯ ಹೇತೋರ್ಬಹುಹಾತುಮಿಚ್ಛನ್**
**ವಿಚಾರ ಮೂಢಃ ಪ್ರತಿಭಾಸಿಮೇ ತ್ವಂ ||'**

ಎಂಬ ವಾಣಿಯಲ್ಲಿ ತಿಳಿಹೇಳುವಾಗ ಛತ್ರದ ಸ್ಥೂಲ ವಿಷಯವನ್ನು ಸಾಮಾನ್ಯರಾದರೂ ಅಲಕ್ಷಿಸುವದೆಂತು ?

ಪ್ರಾಚೀನ ಅರ್ವಾಚೀನ ಕಾವ್ಯಗಳ ಊಹಾಪೋಹ ಬಿಟ್ಟು ಕೇವಲ ವಾಸ್ತವರಂಗಕ್ಕಿಳಿದರೆ, ನಿತ್ಯ ವ್ಯವಹಾರದಲ್ಲಿ ಕೊಡೆಯ ಬಗ್ಗೆ ಹಲವಾರು ಲೋಕೋಕ್ತಿಗಳು ಪ್ರಚಲಿತವಾದುದನ್ನು ಕಾಣುವೆವು. ' ಹೊತ್ತು ಬಂದಂತೆ ಕೊಡೆ ಹಿಡಿ ' ಎಂಬುದು ತೀರ ಸಾಮಾನ್ಯ ನುಡಿ. ವ್ಯವಹಾರದ ಜೀವಾಳ ವದು, ಭಾವಗರ್ಭಿತತೆಯ ಆಗರವದು. 'ಸಿಡಿಲು ಹೊಡೆದರೆ ಹಿಡಿವ ಕೊಡೆ ಕಾವುದೆ? ' ಎಂಬ ನುಡಿಯಲ್ಲಿ ಕಾಲಪುರುಷನ ಮಹಿಮೆ ಮೆರೆಯು ತ್ತಿದೆ ! ' ಮಳೆಗಾಲದ ಬಿಸಿಲನ್ನೂ ಮನೆಯ ಗಂಡನ ನಗೆಯನ್ನೂ ನಂಬ ಕೂಡದೆಂ'ಬ ಜಾಣ್ನುಡಿಯಲ್ಲಿ, ನೇರವಾಗಿ ಆಗದಿದ್ದರೂ ಕೊಡೆಯ ವಿಷಯ ಹಣಿಕಿಕ್ಕುವದು. ಹಲವಾರು ಸಲ ನಾವು ಮಳೆಗಾಲದಲ್ಲಿಯ ಕೊಂಚ ಸೂರ್ಯ ಛಾಯೆಗೆ ಮೋಸ ಹೋಗಿ ಮುಂದೆ ಧೋ ಧೋ ಎಂಬ ಮಳೆಯ ಹೊಡೆತಕ್ಕೆ ಸಿಕ್ಕು ಪೇಚಾಡಿಲ್ಲವೇ ? ನಿವೃತ್ತ ಅಧಿಕಾರಿಗಳಂತೆ ಇದನ್ನೇನು ಒಯ್ಯುವದು ಎಂದು ಕೊಡೆ ಬಿಟ್ಟು ಮನೆಯಿಂದ ಹೊರಟದ್ದಕ್ಕೆ ಎಂತಹ ಪ್ರಾಯಶ್ಚಿತ್ತ ! ನೆನಸಿಯೆ ಎಚ್ಚರಿಕೆ ತಳೆಯಬಹುದಾದ ವಿಷನಿಮಿಷವದು !

ಮಳೆಗಾಲದ ಆವಿರ್ಭಾವದ ಸುಳಿ ಹತ್ತಿದಾಗ ಶ್ರೀರಂಗರ ' ಋತುಸಂಹಾರ ' ವೆಂಬ ಹರಟೆ ತಾನಾಗಿಯೇ ಮಿಂಚಿ ಹೋಗುವದು. ಅಲ್ಲಿ, ಪೋಸ್ಟಮನ್ನನಿಗೆ ಆಫೀಸು ಕೊಡೆಯನ್ನೇನೊ ಕೊಟ್ಟಿರುವದು.

ಆದರೆ ಅವನ ರಕ್ಷಣೆಗದಲ್ಲ ! ಪತ್ರಗಳಿಗಾಗಿಯಂತೆ ! ಎಂತಹ ವಿಡಂಬನೆ ! ಪಾಪ ! ಸರಳ ಹೃದಯಿ ಪ್ರೋಸ್ಪಮುನ್ನನು ತಾನು ಉಳಿದರೆ ಮುಂದೆ ಪತ್ರ ಎಂದು ತಿಳಿದು, ಆತ್ಮರಕ್ಷಣೆ ಮಾಡಿಕೊಂಡದ್ದಕ್ಕೆ ಪತ್ರದ ವಿಳಾಸವೆಲ್ಲ ಮಳೆಯ ಹನಿಗಳ ಮೂಲಕ ಮಟ್ಟವಾಯವಾಗಿ 'ಕೊಡೆ ಎಂಬನಾತ ಪತ್ರವನು' ಎಂದು ಉದ್ಗಾರ ಹೊರಡಿಸಿದುದು ಔಚಿತ್ಯ ಸೀಮೆ ಯಲ್ಲಿಯೇ ಸರಿ. ಇನ್ನು ಎಷ್ಟು ಇಂಚು ಮಳೆಯಾಯಿತೆಂಬುದಕ್ಕೆ Rain gauge ಬೇಡವೇ ಬೇಡಂತೆ ! ತಾವು ಹಾಕಿದ ಮೊಚ್ಚೆಯಿಂದುಂಟಾದ ಕೆಸರಿನ ಕೆಂಪು ಕಲೆಗಳ ಶುದ್ಧ ಅಳತೆ ಮಾಡಿದರೆ ತೀರಿತಂತೆ ! ಕೊಡೆಯ ಪ್ರಶ್ನೆ ಇಲ್ಲಿ ಬಾರದಿರುವುದೂ ಒಂದು ಸೋಜಿಗವೇ ಅಹುದು !

ಮನ್ಸೂನ್ ಮಳೆಯ ಮುನ್ಸೂಚನೆ ಆಕಾಶದಲ್ಲಿಯ ಕಾರ್ಮೋಡಗಳ ಕರಾಳ ಛಾಯೆಯಿಂದ ಎಂದು ವೈಜ್ಞಾನಿಕರು ಹೇಳಿದರೂ ಕೊಡೆಯ ಅವಿರತ 'ಖರೀದಿ' ಯಿಂದ ಎಂದು ನಾಗರಿಕರಾದ ನಾವು ಎದೆ ತಟ್ಟಿ ಹೇಳಬಹುದು. ಉಳಿದ ಋತುಮಾನಗಳಲ್ಲಿ ಕೊಡೆಗಳು ಕಾಂತಿಹೀನವಾಗಿ ರುವವಲ್ಲವೆ ? ರದ್ದೀ ಟಿಕೀಟೆಂದು ಹೇಳಬಹುದು. ಶೆಕ್ಸಪಿಯರ ಮಹಾಕವಿಯ ಉಪಮೆ ಕಡತಂದು ಹೇಳಬೇಕೆಂದರೆ, Twice told tale ಎನ್ನಬಹುದು. ಏನೇ ಆಗಲಿ, ಆಗಲೇ ಅಂಗಡಿಗಳಲ್ಲಿ Beware of imitations ಇಲ್ಲವೆ ನಕಲಿಮಾಲಿಗೆ ಮೋಸಹೋಗಬೇಡಿರಿ ಎಂಬ ಬೋರ್ಡು ಗಳು ತೂಗು ಬಿದ್ದದ್ದು ಕಾಣುವದು ಸಹಜ. ಕೇವಲ ಹೊರಗಿನ ಝಗ ಝಗ, ಸಿಲೋಲಾಯಿಡಿನ ಸಪ್ತ ವರ್ಣದ ಹಿಡಿಕೆ ನೋಡಿ ಕೊಂಡವ್ರಕ್ಕೆ ಹಳಹಳಿಸುವದು ಇದ್ದೇ ಇದೆ. ಯಾಕಂದರೆ ಝಣ್ ಝಣ್ ಎಂದು ರೂಪಾಯಿ ಎಣಿಸಿದ್ದರೂ ಅದೇ 'ಖಾತ್ರಿ' ಅರಿವೆ, ನಾಲ್ಕು ದಿನದ ದೊಡ್ಡ ಸೆಳಕುಗಳಲ್ಲಿ ತನ್ನ ಶಕ ತೋರಿಸಿ, ಮಾಯಾವಾದಿ ಶ್ರೀ ಶಂಕರ ಭಗವತ್ಪಾದರ ಸಿದ್ಧಾಂತದಂತೆ, ತನ್ನ ವೈಬಣ್ಣಕ್ಕೂ ಮಾಲಕನ ಶರ್ಟು (ಬುಶ್ ?) ಪ್ಯಾಂಟುಗಳ ಬಣ್ಣಕ್ಕೂ ಭೇದವೇ ಉಳಿಯದಂತೆ ವಾತ್ಸಲ್ಯ ಪ್ರಕಟಿಸುವದು ! ಎಂತಹ ಕಾವ್ಯ ತನ್ಮಯತೆ !

ಇರಲಿ. ಇಂತಹ ಕೊಡೆ ಹಿಡಿದುಕೊಂಡಾದರೂ ಯಾರು ಯಾರು ಹೇಗೆ ಹೇಗೆ ಯಾವ ಯಾವ ಋತುಮಾನಗಳಲ್ಲಿ ಉಪಯೋಗಿಸಿಕೊಳ್ಳುವ

ರೆಂಬದು ನಿಜವಾಗಿಯೂ ಮೋಹಕವಾದ ವಿಷಯ. ತಮಗೆ ಬೇಡಾದ ನಿರುದ್ಯೋಗಿ ವ್ಯಕ್ತಿಗಳನ್ನಾಗಲಿ, ಶತ್ರು ಸಾಹಿತಿಯನ್ನಾಗಲಿ, ಸಾಲಗಾರ ರನ್ನಾಗಲಿ ತಪ್ಪಿಸಲು ಇದೊಂದು ಪರಮ ಶ್ರೇಷ್ಠ ಸಾಧನ ! ವಯಸ್ಕರಿಗೆ ಕೊಡೆ ವಾಕಿಂಗ್‌ಸ್ಟಿಕ್ಕಾಗಿ ಪರಿಣಮಿಸಿದರೆ, ಇತರರಿಗೆ ದನಕರಗಳನ್ನೂ ಬೆದರಿಸಲು ಉಪಯೋಗ. ಎಲ್ಲ ಕಾಲದಲ್ಲಿಯೂ ಕೊಡೆಯಿಂದ ಅಗಲಲಿಲ್ಲ ವೆಂದು ಇಂಗ್ಲಂಡದ ಪ್ರಧಾನಸಚಿವ ಚೇಂಬರ್ಲೇನರಿಗೆ-'ಛತ್ರಿಚೇಂಬರ್ಲೇನ' ರೆಂದು—ವಿವೇಕಿಗಳು ಅಡ್ಡ ಹೆಸರೇ ಕೊಡಲಿಲ್ಲವೆ ?

' ಆಕಾಶವೇ ದೊಡ್ಡ ಕೊಡೆ ' ಎಂದು ಹೇಳುವ ಸಾತ್ವಿಕರಿಗೆ ಕೊಡೆಯ ನಿಜವಾದ ರಂಜಕರೂಪ ಗೊತ್ತಿರಲಿಕ್ಕಿಲ್ಲ. ಕನ್ನಡದ ಲೋಕಪ್ರಿಯ ಕವಿ ಪಂಜೆಯವರ ಪದ್ಯ ಓದಿದವರಿಗೆ ' ಕೊಡೆಯೊಡೆಯರ ' ಹೃದಯ ದ್ರಾವಕ ಸ್ಥಿತಿ ಬಣ್ಣಿಸಿ ಹೇಳುವ ಅಗತ್ಯವಿಲ್ಲ. ಅವರ ಕೊಂಕಣ ಸೀಮೆಯ 'ತೆಂಕಣಗಾಳಿಯು ' ಮಹಾನಿರ್ದಯಿ. 'ಬಡ ಮುದುಕರ ಕೊಡೆಗರಿ ಹರಿ ದಾಡಿಸಿ ' ಬಿಡುವದು ! ತೆಂಗನು ಲಾಗಿಸುವದು; ಹುಡುಗರ ತಲೆ ತಲೆ ಟೊಪ್ಪಿಗೆಯ ಆಟವ ದಡಬಡಿಸುವದು; ಅಡಿಕೆಯ ಬಾಗಿಸುವದು; ತೆನೆ ಇಬ್ಭಾಗಿಸುವದು. ಎಲ್ಲ ತೀರ ಸಾಮಾನ್ಯ ಲೀಲೆಗಳೆ !

ಕೊಡೆಯ ವಿಶ್ವರೂಪವೆಂತಿದ್ದರೂ ಅದರ ಆಕಾರದಲ್ಲಿ— ಉಳಿದ ವೇಷಭೂಷಗಳಲ್ಲಿಯಂತೆ— ಇಂದಿನ ಮನ್ವಂತರದಲ್ಲಿ ಹೆಚ್ಚು ಕಡಿಮೆ, ಅಸಂಬದ್ಧತೆ, ಕುರೂಪ ತಲೆದೋರದಿದ್ದುದು ನಿಜವಾಗಿಯೂ ಸಾಮಾಜಿಕ ದೃಷ್ಟಿಯಿಂದ ಕ್ಷೇಮಕರವೇ ಆಗಿದೆ ಅಷ್ಟೆ ಏಕೆ ? ಮಳೆಗಾಲದಲ್ಲಿ ಕೊಡೆ ಇಲ್ಲದೆ ನಡೆಯುವಂತೆಯೇ ಇಲ್ಲ ಶಿಷ್ಟಾಚಾರಕ್ಕನುಗುಣವಾಗಿ ಒಬ್ಬರು ತಮ್ಮ ಒಂದೇ ಕೊಡೆಯನ್ನು ಹಲವಾರು ಜನರಿಗೆ ಹಿಡಿದಾಗ ಯಾರಿಗೂ ತೊಯಿಸಿಕೊಳ್ಳುವದು ತಪ್ಪುವದಿಲ್ಲ. ಆದರೂ ವ್ಯವಹಾರದಲ್ಲಿ—ಸುಶಿಕ್ಷಿತ ಸಮಾಜದಲ್ಲಿ—ಒಬ್ಬನಿಗೆ ಒಂದು ಕೊಡೆ ಎಂದು ಲೆಕ್ಕವೇ ಇದೆ. ಮಳೆ ಬಂದಾಗ ಸಭೆ ನಡೆದಿದ್ದರೆ ಸ್ಥೂಲಮಾನದಿಂದ ಜನಸಂಖ್ಯೆ ಗೊತ್ತು ಹಿಡಿಯಲು ಕೊಡೆಗಳನ್ನೇ ಎಣಿಸುವರಲ್ಲವೆ? ಕುರಿಗಳ ಸಂಖ್ಯೆ ಗೊತ್ತು ಮಾಡಿಕೊಳ್ಳಲು ಒಬ್ಬ ಹಳ್ಳಿವಾಡದವನು ಕಾಲುಗಳನ್ನೆಣಿಸಿ ನಾಲ್ಕರಿಂದ ಭಾಗಿಸಿದ್ದನ್ನು ಕೇಳಿಲ್ಲವೇ ನೀವು ?

ಕೊಡೆ ಇಂತು ಅನಿವಾರ್ಯವೆನಿಸಿದಾಗ ಅವುಗಳ ಬಳಗ ಕಾಣಬೇಕಾದರೆ ದೊಡ್ಡ ನಗರದ ಭರಬೀದಿಗೆ ಹೋಗಿ ಹತ್ತು ಹದಿನೈದು ನಿಮಿಷ ನಿಂತರೆ ಸಾಕು – ನಿರೀಕ್ಷಕನ ಸೂಕ್ಷ್ಮ ರೀತಿಯಲ್ಲಿ ! ಸುಶಿಕ್ಷಿತ ಸ್ತ್ರೀಯರ ಕೊಡೆಗಳಿಗಂತೂ ಹಣಕೊಟ್ಟು ಕೊಂಡದ್ದಕ್ಕೆ — ಕೊಡೆ ಎನ್ನಬೇಕು ಬೇಕಾದಷ್ಟು ರಂಗ ರಂಗು ಇರಬಹುದವು ! ನಾಜೂಕೂ ಇದ್ದಿತು. ಆದರೆ ಎಲ್ಲ ಗಾತ್ರದವರಿಗೂ ಅದೇ ಆಕಾರ ! ಏನು ವಿಚಿತ್ರ ! ಉಪಯುಕ್ತತೆಯ ಮಾನದಿಂದ ಇವನ್ನಳೆಯುದೆ ಆಭರಣವೆಂದರೆ ಎಲ್ಲ ಸಮಸ್ಯೆ ಪೂರ್ತಿಯಾಗಿ ಹೋಗುವವು.

ಮಹಿಳೆಯರ ಮಾತು ಇಂತಿದ್ದಿರೂ ಸದ್ಗೃಸ್ಥರು ಹೊಸ ಕೊಡೆಯನ್ನು ಬಹಳ ಜತನವಾಗಿರಿಸುವರು. ಹೆಚ್ಚು ಹಣ ತೆತ್ತಾಗಂತೂ ಆದನ್ನು ಹೊರಗೇ ತೆಗೆಯುವದಿಲ್ಲ. ಹಲವು ದಿನ ಮಳೆಯಲ್ಲಿ ಸಹ ಅದನ್ನು ಏರಿಸದೇ ಹೊರಡುವರೆಂದ ಮೇಲೆ ಆ ಮೋಹಕತೆಗೆ ಬೇರೆ ನಿದರ್ಶನಗಳೇ ಬೇಡ ದುರ್ದೈವದಿಂದ ಇವು-ದೇವಸ್ಥಾನ, ಸಭೆ ಸಮ್ಮೇಲನ, ಉಪಹಾರಗೃಹ, ಥಿಯೇಟರುಗಳಲ್ಲಿ ಕಳವಾಗಿ ಹೋದರೆ ಎಂತಹ ಅನಿರ್ವಚನೀಯ ವ್ಯಥೆ ! ವಿರಹ ವ್ಯಥೆಯನ್ನೂ ಮೀರಿಸುವುದೇನೋ ಇದು ! ವಾಚ್, ಫೌಂಟನ್‌ಪೆನ್, ಸಾಯಕಲ್, ಕನ್ನಡಕಗಳಂತೆ ಕೊಡೆಯೂ ಒಂದು ಇಂತಹ ಲೋಭಿಗಳಿಗೆ untransferrable property ಎನಿಸಿದರೆ ಅಸಹಜವೇನೂ ಅಲ್ಲ !

'Sceptre and crown must tumble down and with dust be equal made' ಎಂಬ ಆಂಗ್ಲ ಕವಿ ಶರ್ಲೆಯ ಉದ್ಗಾರವು ಮಾನವತೆಯ ಹಿರಿ ಲಕ್ಷಣ ವಿವರಿಸಿ ತಾರತಮ್ಯಕ್ಕೆ ಬೆಲೆ ಇಲ್ಲವೆಂದು ಹೇಳುತ್ತಿದ್ದರೆ, ಕೊಡೆಯಾದರೂ ಇಂದು ಎಲ್ಲರ ಸಾಮಾನ್ಯ ಸೊತ್ತಾಗಿದೆ. ಮೇಲು ಕೀಳೆಂಬ ದರ್ಜೆಯನ್ನನುಲಕ್ಷಿಸದೆ ಎಲ್ಲರ ಕೈವಾರವಾಗಿರುವ ಕೊಡೆ ಕೊನೆಗೆ ಸಮತಾವಾದದ ಪ್ರತೀಕವೆಂದು ಹೊಳೆಯುವದಲ್ಲವೆ ?

# ಜೋಡು

**ಎತ್ತಾಗಿ ತೊತ್ತಾಗಿ । ಹಿತ್ತಲದ ಗಿಡವಾಗಿ ।**
**ಮತ್ತೆ ಪಾದದಾ ಕೆರವಾಗಿ ಗುರುವಿನಾ ।**
**ಹತ್ತಿರಿರು ಎಂದ ಸರ್ವಜ್ಞ ।**

ಎಂಬ ಶ್ರದ್ಧಾಪರಿಪೂರಿತ ತ್ರಿಪದಿಯನ್ನೋದುವಾಗ, ಗುರುವಿನ ಮಹತಿಯ ಕಲ್ಪನೆ ನಮಗೆ ಸ್ಫುಟವಾಗಿ ಆಗಿಯೇ ತೀರುವುದು. ಹೇಗಾದರೂ ಮಾಡಿ ಸೇವೆಯ ಋಣ ತೀರಿಸಬೇಕೆಂಬುದು ಎಂತಹ ಉದಾತ್ತ ಕಲ್ಪನೆ! ದಾಸಾನುದಾಸನಾಗಿ, ಎಲ್ಲರಿಗೂ ಉಪಯುಕ್ತವೆನಿಸುವ ಹಿತ್ತಲದ ಗಿಡವಾಗಿ, ಕೊನೆಗೆ ಇವೆರಡೂ ಸಾಧಿಸದಿದ್ದರೂ ಜೋಡಾಗಿಯಾದರೂ ಗುರುವಿನ ಸಂಪರ್ಕ ತಪ್ಪಿಸಿಕೊಳ್ಳಬಾರದಂತೆ! 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ತತ್ವದೃಶ ದಾಸರ ಮಾರ್ಮಿಕ ಉಕ್ತಿಯಲ್ಲಿ ಕೂಡ—ಜೋಡಿನ ಪ್ರಸ್ತಾಪ ನೇರವಾಗಿ ಬಾರದಿದ್ದರೂ ಮುಕುತಿ ಸಾಧನೆಗೆ ಗುರು ಕೈದೀಪ ಕೈಗೋಲು ಎಂದಾಯಿತು. ಹೀಗೆಯೇ ಸನ್ಮಾರ್ಗದಲ್ಲಿ ಜೋಡಿನ ಸ್ಥಾನಮಾನ ವಿಶಿಷ್ಟ ಎಂದರಿತು ನಾವು ಸುಮ್ಮನಾಗಕೂಡದು. ಯಾಕೆಂದರೆ ಇದೇ ಸರ್ವಜ್ಞನ 'ಕರೆಯದಲೆ ಬರುವವನ ಬರೆಯದಲೆ ಓದುವನ ಬರಗಾಲಿನಿಂದ ನಡೆವವನ ಕರೆತಂದು ಕೆರದಿ ಹೊಡೆ' ಎಂಬ ಆಶಯದ ಪಂಕ್ತಿಗಳಲ್ಲಿ ಕಠೋರತೆ ಎನಿತು ಎಂದು ಮನವರಿಕೆಯಾಗದೇ ಹೋಗದು. ಕೊಂಚ ಕೂಲಂಕಷವಾಗಿ ಸರ್ವಜ್ಞನ ಈ ನುಡಿಯನ್ನು ಹಿಂಡಿ ಹಿಳಿದು ನೋಡುವಾ: ಔತಣವಿಲ್ಲದೆ ಬಂದು ಹೋಗುವವನಿಗೆ

ಶಾಸನವು ಯುಕ್ತವೇನೊ ಸೈ; ಉದ್ಧಕ್ಕೂ ಓದಿ ಎಂದೂ ಒರೆಯುವ ಚಟ ಕೆಡವಿಕೊಳ್ಳದಿದ್ದರೆ ಶಿಕ್ಷಣದ ಧ್ಯೇಯಕ್ಕೆ ಚ್ಯುತಿಯಾಗುವುದೂ ಖಂಡಿತ. ಆದರೆ ಬಡತನದ ಬೇಗೆಯಲ್ಲಿ ಕಡುನೊಂದು ಹೇಗೆ ಕಾಲ ಹಾಕಬೇಕೆಂದು ಹೊಳೆಯದೇ ಹೇಗೊ ಜೀವನರಥ ನೂಕಿಸಿಕೊಂಡು ಸಾಗಿದ ಕಡು ದರಿದ್ರನಿಗೆ ಕಾಲಲ್ಲಿ ಜೋಡಿಲ್ಲವೆಂಬುದು ಪ್ರಮಾದವೆ? ಅದಕ್ಕಾಗಿ ಅದರಿಂದಲೇ ಅವನಿಗೆ ಪೂಜೆಯೆ? ಎಂತಹ ಅಸಮಂಜಸ ಶಿಕ್ಷೆ! ತರ್ಕಶಾಸ್ತ್ರಕ್ಕೆ, ಸಮಾಜನೀತಿಗೆ ಹೊರತಿದು! ಸರ್ವಜ್ಞನಂತಹ ಮಹಾನುಭಾವನ ಶಿಕ್ಷಾ ರೀತಿಯೆ ಹೀಗೇಕಾಯಿತೆಂಬುದು ನಿಜವಾಗಿಯೂ ವಾದಗ್ರಸ್ತ ವಿಷಯ. ಬಹುತರವಾಗಿ ಯಾವನೋ ಒಬ್ಬ ವಿಲಾಸೀ ಕವಿಯು ತನ್ನ ಬಾಯಿತಿಂಡಿ ಉಜ್ವಲ (?) ಪಾಂಡಿತ್ಯ ನಿದರ್ಶಿಸಲು ಹೀಗೆ ಉದ್ಗಾರ ತೆಗೆದಿರಬಹುದೆ? ಅಂತೂ ಇದೊಂದು ಪ್ರಕ್ಷಿಪ್ತಶ್ಲೋಕನೇ ಇದ್ದೀತೆಂಬುದು ನಿರ್ವಿವಾದ.

ಸಂಶೋಧಕರ ವಿಷಯವು ಹೇಗಿದ್ದರೂ ಜೋಡಿನ ಪ್ರಪಂಚವು ವಾಸ್ತವಜೀವನದಲ್ಲಿ ಸಾಕಷ್ಟು ವಿಸ್ತ್ರತವಾಗಿದೆ, ವೈವಿಧ್ಯಪೂರ್ಣವಾಗಿದೆ. ಒಂಟಿಬಾರು, ಜೋಡುಬಾರು, ಕತ್ರಿಯ ಬಾರು, ಕಿಟಕಿಯ ಜಾಳಿಗೆ ಹೋಲುವ ಮಾಟ— ಎಷ್ಟೋ ಇವೆ. ಜಾಳಿಗೆ ಎಂದೊಡನೆ ಡಾಕ್ಟರ ಜಾನ್ಸನ್ ಮಹಾನುಭವರ 'a net is a reticulated fabric decussated at regular intervals' ಎಂಬ ವ್ಯಾಖ್ಯೆಯನ್ನು ನೆನಪು ಮಾಡಿಕೊಳ್ಳಬೇಡಿ ಮತ್ತೆ! ಜೋಡೆಂಬುದು ಅಷ್ಟೊಂದು ಲೋಕಪ್ರಿಯ ಶಬ್ದವಾಗಿರದಿದ್ದರೂ ಚಪ್ಪಲ್ ಎಂಬ ಮರಾಠೀ ಪದಪ್ರಯೋಗವು ತೀರ ಸಾಮಾನ್ಯರಿಗೆ ಸಹಜ ವಾಗಿ ಹೊಳೆಯುವದು. ಭಲೆ ಭಾಷಾಬಾಂಧವ್ಯವೆ! ಸರಿ, ಕೊಂಚ ಸುಧಾ ರಿಸಿದ ಜೋಡಿನ ಬಳಗವೆಂದರೆ ಸ್ಲಿಪರ್ಸ್, ಚಡಾವು, ಶೂಜ್, ಬೂಟ್ಸ್ ಎಂಬುವು. ಕಡಾವಿಗೆ—ಕಟ್ಟಿಗೆಯವು-ಸರ್ವಸಂಗ ಪರಿತ್ಯಾಗಮಾಡಿ ಹೊರಟ ಸಂನ್ಯಾಸಿಗಳಿಗೆ ಶೋಭಿಸುವುವೆಂದರೂ ನವನಾಗರಿಕತೆಯ ಈ ನಮ್ಮ ಮನ್ವಂತರದಲ್ಲಿ ಅವಕ್ಕೇ ಹೊಸರೂಪ—ಹೊಸ ಕಳೆ, ಹೊಸ ಮಾಟ ಬಂದು 'ಸ್ಯಾಂಡಲ್ಸ್' ಎಂಬ ಅಭಿದಾನ ತಳೆದು ಸರ್ವಂತರ್ಯಾಮಿಯಾಗಿವೆ! ಎಂತಹ ಅಭದ್ರ ನುಡಿ!— ಎಂದು ಬೆಚ್ಚಿ ಬೀಳಬೇಡಿ. ದೇವನಾಗರೀ ನುಡಿಯನ್ನು ನಿತ್ಯ ವ್ಯವಹಾರದಲ್ಲಿ ಸಯುಕ್ತಿಕವಾಗಿ ಬಳಸಿದರೆ ಪ್ರಮಾದ

ವೇಕಾಗಬೇಕು? 'Judge by the results and never by the standards' ಎಂಬುದು ಆಂಗ್ಲ ವಿಮರ್ಶಕರ ವಿಮರ್ಶಾತತ್ತ್ವವಾಗಿಲ್ಲವೆ? ಈ ಪ್ರಸಂಗದಲ್ಲೇಕೆ ಅನ್ವಯಿಸಬಾರದಿದು? ಇನ್ನು ಪೈಲ್ವಾನರ ಹಾಗೂ ಹಳ್ಳಿ ಬಂಧುಗಳ ಜೋಡುಗಳು ಚಿರಿಮಿರಿ ಸದ್ದು ಮಾಡಿ— ಅತಿ ಭಾರವಾಗಿ ಹೊರಗೆ ತೋರಿದರೂ —ಯಾರ ಸಲುವಾಗಿ ಅವುಗಳ ನಿರ್ಮಿತಿಯಾಗಿದೆಯೋ ಅವರಿಗೆ ವಿಶೇಷ ಶೋಭೆ ತರುವುದಲ್ಲದೆ ಚಿರಕಾಲ ತಾಳುವುವು — ಉಳಿದವುಗಳಿಗಿಂತ ಹೆಚ್ಚು ಕಾಲವಷ್ಟೆ! ಸಮಗ್ರ ಜೀವಮಾನದಲ್ಲಿ ಒಂದೇ ಜೋಡೆಂಬ ರ್ಥವಲ್ಲಲ್ಲ! ಇವೆಲ್ಲ ಮರೆತರೂ ಹೆಂಗಳೆಯರ ಜೋಡಿಗೆ ಜೋಡೆಂದು ಹೆಸರಿಸಲೂ ಹೆದರಿಕೆಯುಂಟಾಗುವಷ್ಟು ನಯ ನಾಜೂಕು ಅಲ್ಲಿ ನೆಲಸಿರುವುವು ಏನು ನಕ್ಷೆ, ಜರ, ಮಾರ್ದವ! ಪಾಶ್ಚಿಮಾತ್ಯ ಮಹಿಳೆಯರ ಏರು ಹಿಂಬಡದ ಬೂಟು ಹಾಕಿಕೊಂಡು ನಾವು ನಡೆಯುವದೆಂದರೆ ಡೊಂಬರ ಕಸರತ್ತೇ ಮಾಡಿದಷ್ಟು ಪರಿಶ್ರಮವಾಗುವುದು. ಏನೇ ಆಗಲಿ, ಯಾವ ಮಾನದಿಂದ ಯಾವ ದೇಶದಲ್ಲಿಯಾಗಲಿ, ಜೋಡಿನ ಉದ್ದೇಶ 'ಪಾದರಕ್ಷಣೆ' ಎಂಬಲ್ಲಿ ಸಂದೇಹವಿಲ್ಲ. ಪೂರ್ಣ ರಕ್ಷಿಸುವುದು ಅವುಗಳಿಂದ ಹಲವೆಡೆ ಸಾಧಿಸದಿದ್ದರೂ, ಪಾದರಕ್ಷೆ ಎಂಬ ಹೆಸರಿಗೆ ಮಾತ್ರ ಅರ್ಹತೆ ಬಂದುದು ಸುಳ್ಳೆ?

ಮನುಷ್ಯನು ಜೀವಮಾನದಲ್ಲಿ ಎಷ್ಟೇ ದುಂದುಗಾರನಾಗಿದ್ದರೂ ಜೋಡಿನ ವಿಷಯದಲ್ಲಿ ಅತಿ ವಾತ್ಸಲ್ಯಪೂರ್ಣನಾಗಿರುವ; ಅದೇಕೆ? ಅತಿ ಜೀನನೂ ಆಗಿರುವ. ಎಷ್ಟು ದಿವಸ ಅದನ್ನು ತಡೆಸಿದರೂ ತೃಪ್ತಿಗೆ ಕೊನೆ ಇಲ್ಲ. ಒಂದು ಜೋಡು ಕೆರವಿನ ಸದುಪಯೋಗ (?) ಮಾಡಿಕೊಳ್ಳಲು ಹವ್ಯಾಸಬಟ್ಟು ಅದರ ರಿಪೇರಿಗಾಗಿ ಮೂರು ಹೊಸ ಜೋಡಿನ ಹಣ ಸುರಿಯುವನೆಂದರೆ ಅತಿಶಯೋಕ್ತಿಯ ಆರೋಪವು ಎಷ್ಟೂ ಬರುವಂತಿಲ್ಲ. ನಾಲ್ಕು ಬೀದಿ ಕೂಡಿದಲ್ಲಿ ಚೆಲ್ಲಿಕೊಟ್ಟರೆ ಹದ್ದೂ ಕಚ್ಚಿಕೊಂಡು ಹೋಗಲು ಮನಸ್ಸು ಮಾಡದ ಸ್ಥಿತಿಯುಂಟಾದಾಗ ಮಾತ್ರ ಅವನ್ನು ಅವನು ಚೆಲ್ಲಿ ಕೊಡಬಹುದಷ್ಟೆ!

ವಿವಿಧ ಒಗೆಯ ಜೋಡಿನ ಸಮ್ಮೇಲನ— ಹರಿಕಥೆ, ಕೀರ್ತನ— ಮಂದಿರದ ಹೊರಗೆ, ಉಪಹಾರಗೃಹ, ಸಂಗೀತಕಚೇರಿ, ಸಾರ್ವಜನಿಕ

ಭಾಷಣಗಳ ಎಡೆಯಲ್ಲಿ ನೆರೆಯುವುದುಂಟು ತಮಗಿಲ್ಲವೆಂದು—ಇದ್ದುವಾದರೆ ಹಳೆಯವಿವೆಯೆಂದು– ಹೊಸವನ್ನು ದೊರಕಿಸಲು ಅಪೇಕ್ಷಿಸಡುವವರು ಕಾಲಕಾಲಕ್ಕೆ ಈ ಸ್ಥಳಗಳನ್ನು ವಿಶ್ವಾಸದ ಸೋಗಿನಿಂದ ಸಂದರ್ಶಿಸುವರು. ಅಕಸ್ಮಾತ್ ಯಾರ ಜೋಡೂ ಒಂದು ದಿನ ಸಾರ್ವಜನಿಕ ಕಾರ್ಯಕ್ರಮದಲ್ಲಿ ಕಳವು ಆಗದಿದ್ದರೆ, ವಿಚಿತ್ರವಾಗಿ ಬದಲಾಗಿ ಇಜ್ಜೋಡಾಗುವ ನಗೆಗೇಡಿನ ಸಂದರ್ಭವಂತೂ ಉಂಟಾಗುವುದು ಅಸಹಜವಲ್ಲ.

ಇಂತಹ ಹೊಸ ಜೋಡುಗಳನ್ನು ಹಾಕಿಕೊಂಡು ಅಪೂರ್ವ ಒನಪು ಒಯ್ಯಾರದಿಂದ —ಗಂಡಸರೂ ಸಹ—ಸಾರ್ವಜನಿಕ ಕಾರ್ಯ-ಕಲಾಪಗಳಿಗೆ ಹೋಗಿ, ಬದಲು ಮಾಡಿಕೊಳ್ಳುವ ಇಲ್ಲವೆ ಕಳೆದುಕೊಳ್ಳುವ ಮೊದಲು, ಅವುಗಳ ಮೇಲೆ ಅವರದೆಷ್ಟು ಮಮತೆ ! ಜೋಡಿದ್ದರೂ ಅದಕ್ಕೆ ಎಂತಹ ಮಾನ್ಯ ಸ್ಥಾನ ! ಚಿಕ್ಕಮಕ್ಕಳ ಆಟಿಗೆಗಳಿಗಿಂತಲೂ ಅವು ಮೋಹಕವಾಗಿ ಅವರಿಗೆ ಪರಿಣಮಿಸಿರುವುವು ಮೆಟ್ಟಿ ನಡೆಯಲು ಅವನ್ನು ಕೊಂಡದ್ದೆಂಬ ಅರಿವೇ ಆಗ ಆಗುವುದಿಲ್ಲ ಹೆಂಡತಿ-ಮಕ್ಕಳೊಡನೆ—ಇದನ್ನು ಹಿಡಿದಷ್ಟಕ್ಕಾಗಿ-ಜಗಳ. ಕೈಹಿಡಿದವಳಿಗೆ ಎಲ್ಲಿ ಒಗೆಯು ಉಪದ್ರವ ಉದ್ಭವಿಸುವುದು ಈ ಪ್ರಸಂಗದಲ್ಲಿ ! ಬಹುತರವಾಗಿ ಸರಕಾರದ ಕಾನೂನುಗಳೇ ಶಿಥಿಲವಾಗಿಲ್ಲದಿದ್ದುದು ಇದಕ್ಕೆ ತಕ್ಕ ಕಾರಣ ಹೊಸ ಜೋಡು ಇಂತು ಪ್ರಾರಂಭದ ದಿಶೆಯಲ್ಲಿ ಎಷ್ಟೇ ನೋವು ಗಾಯ ಉಂಟು ಮಾಡಿ— 'Wearer alone knows where the shoe pinches' ಎಂಬ ಲೋಕೋಕ್ತಿಗೆ ಎಡೆ ಕಲ್ಪಿಸಿಕೊಟ್ಟರೂ, ಅದರ ವಿಷಯಕ್ಕೆ ಅವನ ಪ್ರೇಮಾಮೃತಕ್ಕೆ ಕೊರತೆ ಆಗದಿದ್ದುದು ನಿಜವಾಗಿಯೂ ಸೋಜಿಗದ ಸಂಗತಿಯೆ ! ಅಕಸ್ಮಾತ್ತಾಗಿ ದೈವದುರ್ವಿಪಾಕದಿಂದ ಇವು ಕಳೆದುಹೋದರೆ, ಮನೆಯಲ್ಲಿ ಮಹಾಸಭೆ ನಡೆದು ಉತ್ಪಾತವಾಗುವುದು. ನಿತ್ಯ ಜೀವನದಲ್ಲಿ ಭೂತ-ಭವಿಷ್ಯತ್ತಿನ ನಡುವೆ ಒಂದು ದೊಡ್ಡ ಕೊಳ್ಳವೇ ನಿರ್ಮಿತವಾದಂತಾಗಿ, ಅನುಪಮ ಕೋಲಾಹಲವೇಳುವುದು. ಎಲ್ಲೆಲ್ಲಿ ಇದರ ಪರಿಣಾಮವೇನಾಗುವುದೊ ಭಗವಂತನೇ ಬಲ್ಲ !

ಜೋಡು ಹಳೆಯವಿರಲಿ, ಹೊಸವಿರಲಿ, ನಿತ್ಯಬಳಕೆಗೆ ಅನುಗುಣವೆನಿಸಿ ವ್ಯವಹಾರ ಸಾಗಿದಾಗ ಒಮ್ಮೆ ಮಹತ್ತ್ವದ ಕಾರ್ಯಕ್ಕೆ ಸನ್ನದ್ಧರಾಗಿ

ನಾಗರಿಕರು ಹೊರಟಾಗ, ಒಂದು ಉಂಗುಷ್ಟ ಕಿತ್ತಿ ಬಂದರೆ ಎಂತಹ ತೊಡಕು! ವಿದ್ಯಾರ್ಥಿಗೆ ಶಾಲೆಯಲ್ಲಿ ತಡವಾದುದಕ್ಕೆ ಪೂಜೆ, ನಿರುದ್ಯೋಗಿಯ ನೌಕರಿಯ ಹಂಬಲಕ್ಕೆ ತಿಲಾಂಜಲಿ (ಕ್ಷಣಿಕ !). ನೌಕರನಿಗೆ ಮೇಲಿನವರಿಂದ ಕೀಟಕ-ಕೀಟಲೆ ! ಇನ್ನೂ ಯಾರಿಗೆ ಏನೇನೋ ! ಹೀಗೆ ಅನಿವಾರ್ಯವಾಗಿ ಪರಿಣಮಿಸಿ ಜೀವನದುದ್ದಕ್ಕೂ ಒಡೆಯನಿಗಾಗಿ ಶ್ರಮಿಸುವ ಧ್ಯೇಯದಿಂದ ಪ್ರೇರಿತವಾದ ಜೋಡಿಗೆ ಉಡುಗೊರೆ ಎಂದರೆ ಕಸಬರಿಗೆಯದೇ ಮಾಲೆ. ಅದಕ್ಕೂ ಕೀಳು ಸ್ಥಾನವೆಂದರೂ ಪಾಪವಿಲ್ಲ. ಮನುಷ್ಯನ ಕೃತಜ್ಞತಾಬುದ್ಧಿಗೆ ಇದೊಂದು ಕಲಶಪ್ರಾಯವಾದ ನಿದರ್ಶನವಲ್ಲವೆ ?

ಚಪ್ಪಲ್ ಇಲ್ಲವೇ ಜೋಡಿನ ಮನೋರಂಜಕ ಸ್ವರೂಪ ಕಾಣಬೇಕಾದರೆ, ಇಂದು ನಾವು ಭಾರತೀಯ ಚಿತ್ರಪಟಗಳನ್ನು ಅದರಲ್ಲಿಯೂ ಪೌರಾಣಿಕ, ಐತಿಹಾಸಿಕ ಚಿತ್ರಗಳನ್ನು— ಹಗಲಿನಲ್ಲಿ ದೀವಟಿಗೆ ಹಿಡಿದುಕೊಂಡಷ್ಟು ಸೂಕ್ಷ್ಮವಾಗಿ ನಿರುಕಿಸಬೇಕು. ಮಹಾಭಾರತ ರಾಮಾಯಣಗಳ ಸನ್ನಿವೇಶಗಳ ಚಿತ್ರಪಟಗಳಲ್ಲಿ ಕೃಷ್ಣಾರ್ಜುನ, ಕರ್ಣ, ದುರ್ಯೋಧನ ದುಶ್ಯಾಸನರ ಪಾದರಕ್ಷೆಗಳಿಗೆ ಸಂಪೂರ್ಣ ಇಪ್ಪತ್ತನೆಯ ಶತಮಾನದ ಛಾಯೆ ಇಲ್ಲವೇ ಝಳಕು ಕಂಡುಬರುವುದುಂಟು! ದ್ರೌಪದಿ, ಸೀತಾ, ದಮಯಂತಿಯರಂತೂ— ಉತ್ಕರ್ಷಾವಸ್ಥೆಯಲ್ಲಿ— ಸಿನೇಮಾ ತಾರೆಯರ ವೇಷ ಭೂಷಣಗಳನ್ನು ನೆನಪುಮಾಡಿ ಕೊಡುವುರಲ್ಲವೆ ? ಇದರಲ್ಲಿ ದಿಗ್ದರ್ಶಕರು ಪೂರ್ಣ ಹೊಣೆಗಾರರಲ್ಲದಿದ್ದರೂ, ಮನ್ವಂತರದ ಪ್ರಗತಿಯಲ್ಲಿಯೇ ಅಷ್ಟೊಂದು ರಭಸ ಮೈಗೂಡಿಹೋಗಿದೆ. ಯಾರೇನು ಮಾಡುವುದು ?

ಕೊನೆಗೆ ಜೋಡಿನ ಪೌರಾಣಿಕ ಪಾವಿತ್ರ್ಯ ಅರಿಯದಿದ್ದರೆ ಈ ಪ್ರಬಂಧದ ಉದ್ದೇಶವೇ ಪರಿಪೂರ್ಣವಾಗದು. ಶ್ರೀರಾಮನು ತಂದೆಯ ಆಜ್ಞೆಗನುಗುಣವಾಗಿ ಹದಿನಾಲ್ಕು ವರ್ಷ ವನವಾಸ ಕೈಕೊಂಡನಷ್ಟೆ ! ಪಶ್ಚಾತ್ತಾಪದಿಂದ ಕೈಕೇಯಿಯ ಹೃದಯವಾದರೂ ಬೆಂದ್ಹೋಯಿತಲ್ಲ ತಾನೇ ಅವನನ್ನಟ್ಟಿದರೂ ! ಎಂದಮೇಲೆ ರಾಮಪ್ರಿಯರಾದ ಉಳಿದ ಅಯೋಧ್ಯಾ ನಿವಾಸಿಗಳ ಪರಿಸ್ಥಿತಿ ಎಷ್ಟು ಚಿಂತಾಜನಕವಾಗಿರಬೇಡ !

ವಿಯೋಗ ವ್ಯಥೆಯಿಂದ ಪ್ರಜರು ನಿರಂತರ ಕಣ್ಣೀರಿಟ್ಟರು ; ವಿಧಿಯು ಕರುಣೆಗೆ ಮೊರೆ ಇಟ್ಟರು. ಇದರ ಪರಿಹಾರಕ್ಕಾಗಿಯೇ ಮುಂದೆ ಭ್ರಾತೃವತ್ಸಲ ಭರತ, ರಾಮನಿಂದ ಪಾದುಕೆ ಪಡೆದುಕೊಂಡು ಬಂದ. ಇಂತು ರಾಮರಾಜ್ಯ—ಸಿರಿಸುಖದಾಗರದ ಪ್ರತೀಕ— ಪಾದುಕೆಗಳಿಂದಲೇ ಭೂಲೋಕದಲ್ಲಿ ಅಡಿಯಿಟ್ಟಿತೆಂದಮೇಲೆ ಕಲಿಯುಗದಲ್ಲಿ ಅದರ ಬಳಗದ ಮಹಿಮೆ ಬಣ್ಣಿಸುವದು ಪಲುವುಂ ನಾಲಗೆಯ ಆದಿಶೇಷನಿಗೇ ಸಾಧ್ಯ ! ಮಿಕ್ಕ ಮಾನವರ ಪಾಡೇನು ?

# ನಾಚಿಕೆ

ಕವಿಕುಲಗುರು ಕಾಲಿದಾಸನ ಉಜ್ವಲ ಕಲಾಕೃತಿಯಾದ ಶಾಕುಂತಲಾ ನಾಟಕದ ಐದನೆಯ ಅಂಕಿನಲ್ಲಿ ನಾಚಿಕೆಯ ವಿಶಿಷ್ಟ ಸ್ವರೂಪ ಕಂಡಾಗ ಅದರ ಅಗಾಧತೆಗೆ ಮೊರೆ ಹೋಗದೆ ವಿಧಿ ಇಲ್ಲ. ಕೊನೆಯ ರಾಮಬಾಣ ಪ್ರಯೋಗವದು — ಹಿಂದಿನವೆಲ್ಲವೂ ಕೆಲಸಕ್ಕೆ ಬಾರದ ಕೊರಡಾಗಿ ಹಳಹಳಿಯುಂಟುಮಾಡಿದಾಗ! ನಾಟಕದ ಆಗಿನ ಸನ್ನಿವೇಶ ವಾದರೂ ಎಷ್ಟೊಂದು ರೋಮಾಂಚಕಾರಕವಾದುದು.! ಪರಿಣಾಮದಲ್ಲಿ ಸುಖವೇ ಎಂದು ನಂಬುವುದು ಭಾರತೀಯ ಪರಂಪರೆಯಲ್ಲವೆ ? ಹಾಗೆ ಮೊದಮೊದಲು ದೈವದ ಕರಾಳ ಛಾಯೆಗೆ ಎಲ್ಲೂ ಎಡೆ ದೊರೆತಿರಲಿಲ್ಲ. ಆದರೆ 'The path of true love never runs smooth' ಎಂಬ ಅನುಭವದ ಸಾರ ತುಷಾರದ ಲೋಕೋಕ್ತಿ ಇಲ್ಲವೆ ? ಅಂತಹ ಲೋಕೋಕ್ತಿ ಇಂತಹ ಹಿರಿ ನಾಟಕದಲ್ಲಿ ಸುಳ್ಳೇಕೆ ಆಗಬೇಕು ?

ಆಯಿತು. ಸಾಕುತಾಯಿ ಗೌತಮಿ, ಶಾರ್ಙರವ, ಶಾರದ್ವತರು ಶಕುಂತಲೆಯೊಡಗೊಂಡು ಅರಮನೆಗೆ ಬರುತ್ತಾರೆ. ವರ್ಣಾಶ್ರಮಗಳ ರಕ್ಷಕ ರಾಜನು ಸಭಾಮಂದಿರದ ಕಾರ್ಯಕಲಾಪ ಅಷ್ಟಕ್ಕೇ ವಿಸರ್ಜಿಸಿ ಕಂಚುಕಿಯ ಮಾತಿನ ಮೇರೆಗೆ ಅತಿಥಿಗಳನ್ನು ಸ್ವಾಗತಿಸಲು ಸಿದ್ಧನಾಗಿರುತ್ತಾನೆ. ಪ್ರಸ್ತಾವನೆಯ ಉಭಯ ಕುಶಲೋಪರಿ ನಡೆದು—, 'ಅರಸು, ತನ್ನ ಕರ್ತವ್ಯ ಮಾಡಿದಲ್ಲಿ ವಿಶೇಷವಿಲ್ಲ. ವಿನಯ ಗುಣ, ಲಜ್ಜೆ ಸ್ವಾಭಾವಿಕ. ಪಕ್ವ ಹಣ್ಣುಗಳಿಂದ ಗಿಡವು ಬಾಗಿರುವದಿಲ್ಲವೆ? ಮೋಡಗಳು ನೀರ್ವನಿಗಳಿಂದ

ತೀರ ಕೆಳಗೇ ಬಂದಿರುವವು. ಸತ್ಪುರುಷರ ಆಚಾರ,ವಿಚಾರ ಲೋಕ ಕಲ್ಯಾಣ ಬುದ್ಧಿ ಮೊದಲಾದವು ದುಷ್ಯಂತನವು !' ಎಂದು ಶಾರ್ಙ್ಗರವನು ಅತ್ಯುಚಿತ ವಾಗಿ ಉದ್ಗಾರ ತೆಗೆಯುವನು. ಋಷಿವರ್ಯರ ಸೌಮ್ಯ ಮುಖಮುದ್ರೆ ಕಂಡು ಅಂತಹ ಗಂಭೀರ ಕಾರ್ಯವಿರಲಿಕ್ಕಿಲ್ಲ ಎಂದು ದ್ವಾರಪಾಲಕರು ತರ್ಕಿಸುವಾಗ, ಅರಸು ಶಕುಂತಲೆಯನ್ನು ನೋಡಿ, ಮೋರೆಯ ಮುಸುಕಿ ನಲ್ಲಿಯೂ ಆಕೆಯ ರೂಪಲಾವಣ್ಯಗಳನ್ನು ಪ್ರಶಂಸಿಸುವನು. ಆದರೆ ಪರರ ಪತ್ನಿಯನ್ನು ಹೀಗೆ ವರ್ಣಿಸಬೇಕೇ ಎಂಬ ವಿವೇಕ ಅವನನ್ನು ತಡೆಯು ವದು. ಕ್ರಮೇಣ ಒಬ್ಬರೊಬ್ಬರ ಸುಖಸಂಕಥಾ ವಿನೋದ ಸಾಗಿದಾಗ ಶಾರ್ಙ್ಗರವರು, ದುಷ್ಯಂತನು ಶಕುಂತಲೆಯನ್ನು ವರಿಸಿದುದರ ಔಚಿತ್ಯ ವಿವರಿಸುವರು. ಪರಸ್ಪರರ ಪ್ರೇಮವೇ ಉತ್ಕಟವಾಗಿರುವಾಗ ಬೇರೆಯವರು ನಡುವೆ ಏಕೆ ಎಂದು ಗೌತಮಿ ನುಡಿದಾಗ, ಅರಸನ ಮನಸ್ಸು ಹೇಗಾದೀತು ಎಂಬ ಕಳವಳಿ ಶಕುಂತಲೆಯನ್ನಾವರಿಸುವದು. ನೀವು ಹೇಳುತ್ತಿರುವು ದಾದರೂ ಏನು ಎಂಬ ರಾಜನ ನುಡಿ ಕೇಳಿ ಇವು ಕಿಡಿಗಳೇ ಎಂದು ತನ್ನೊಳಗೇ ಅನ್ನುವಳು. ಹಾಂ! ನಾನಿವಳನ್ನು ಲಗ್ನವಾಗಿದ್ದೇನೇ ? ಎಂದಾಗ ಗುಡ್ಡವೇ ಕಡಿದುಕೊಂಡು ಬಿದ್ದಂತೆ ಭಾಸವಾಗುವದು. ಶಾರ್ಙ್ಗರವ ರಿಗೂ ಆಟೋಪ ಮೀರಿ, ಇದೇನು ಕೃತಕಾರ್ಯದ ದ್ವೇಷವೊ, ಧರ್ಮಕ್ಕೆ ವಿಮುಖತೆಯೊ ಎಂದು ಕೇಳಿಬಿಡುವರು. ಆದರೂ ಗೌತಮಿ ಸಾಕುತಾಯಿ; ಹೆಣ್ಣು ಹೃದಯದ ವಾತ್ಸಲ್ಯವೇ ವಿಚಿತ್ರ! 'ಜಾತೆ, ಮುಹೂರ್ತಂ ಮಾ ಲಜ್ಜಸ್ವ; ಅಪನೇಷ್ಯಾಮಿ ತಾವತ್ತೆ ಅವಗುಂಠನಂ; ತತಃ ತ್ವಾಭರ್ತಾಭಿ ಜ್ಞಾಸ್ಯತಿ—' ಎಂದು ಉದ್ಗಾರ ತೆಗೆಯುವಳು. ನಾಚಿಕೆಯ ಪ್ರಸ್ತಾಪವಿಂತು ಅಲೌಕಿಕ ನಾಟಕ ಕ್ಷೇತ್ರಕ್ಕಷ್ಟೇ ಸಂಬಂಧಪಟ್ಟಿದಲ್ಲ. ಪರಮಾತ್ಮನ ಅಸ್ತಿತ್ವ ವ್ಯಾಪ್ತಿಗಳಂತೆ ಅದು ಬ್ರಹ್ಮಾಂಡವನ್ನೇ ಬೆಳಗಿಸಿದೆ. ಬೆಳಗಿಸು ತ್ತಲೂ ಇದೆ.

ವಾಸ್ತವ ಪ್ರಪಂಚದಲ್ಲಿ ಮೊಟ್ಟಮೊದಲು ನವ ವಧು ಮನೆಗೆ ಕಾಲಿ ಟ್ಟಾಗ ಲಜ್ಜಾನ್ವಿತೆಯಾಗಿಯೇ ಇದ್ದು ಮುಂದೆ ಕ್ರಮೇಣ ಪ್ರಗಲ್ಭೆಯಾದಂತೆ ಬದಲಿಸುವಳೆಂದರೂ ನಾಚಿಕೆಯ ಇತಿಹಾಸ ಹಳೆಯದು, ತೀರ ಹಳೆಯದು. ಜಗತ್ತು ಹುಟ್ಟಿದಂದಿನಿಂದಲೆ ಅದಕ್ಕೆ ಭಾವನಾ ಪ್ರಪಂಚದಲ್ಲಿ ವೈಶಿಷ್ಟ್ಯ

ಪೂರ್ಣವಾದ ಎಡೆ ದೊರೆತಿದೆ ಎಂದರೆ ಅತಿಶಯೋಕ್ತಿಯ ಆರೋಪ ಬರಲಿಕ್ಕಿಲ್ಲವಷ್ಟೇ! ಮಹಾ ಕಾವ್ಯದ ಕಾಲದಲ್ಲಿ ಅಡಿಯಿಟ್ಟರೆ (?) ಕೌರವರಿಗೆ ಇನ್ನೂ ಕೊಂಚ ಹೆಚ್ಚು ನಾಚಿಕೆ ಇದ್ದಿದ್ದರೆ (ಸೌಜನ್ಯವೆನ್ನಿ ಬೇಕಾದರೆ) ತಮ್ಮ ಸಹೋದರರೊಡನೆ ನಿರಂತರ ಹೋರಾಡಿ ರಕ್ತಪಾತಕ್ಕೆ ಮಾರು ಹೋಗುವದೇ ತಪ್ಪುತ್ತಿತ್ತು. ಭೂಮಂಡಲದ ಮುಖದಲ್ಲಿಯೇ ಮಾರ್ಪಾಟಾಗುತ್ತಿತ್ತು! ನಾಮಾಂಕಿತ ಆಂಗ್ಲ ನಾಟಕಕಾರ ಶೆಕ್ಸಪಿಯರನ ಮರ್ಚಂಟ ಆಫ್ ವ್ಹೇನಿಸದಲ್ಲಿಯ ಖಳನಾಯಕನೂ ಕೊಂಚ ಹೆಚ್ಚು ವಿವೇಕ (ನಾಚಿಕೆ) ಉಳ್ಳವನಾಗಿದ್ದರೆ ಜಗತ್ತಿನ ದೌರ್ಜನ್ಯಕ್ಕೆ ಎಷ್ಟೋ ಚ್ಯುತಿ ಬರುತ್ತಿತ್ತು! ಸತ್ಪುರುಷರ ಸತ್ವ ಪರೀಕ್ಷೆ ಇಂತಹ ನಿರ್ಲಜ್ಜರಿಲ್ಲದಿದ್ದರೆ ಹೇಗಾಗುತ್ತಿತ್ತೆಂದು ಯಾರಾದರೂ ಅಡ್ಡ ಬಾಯಿ ಹಾಕಬಹುದು. ಆದರೆ ಪರೀಕ್ಷೆ ಇದರಿಂದಲೇ ಏಕೆ ಎಂದಿಷ್ಟೇ ಉತ್ತರವಲ್ಲವಷ್ಟೆ ಪ್ರಸ್ತುತ ಸನ್ನಿವೇಶದಲ್ಲಿ?

"A nod for the wise and a rod for the fool' ಎಂಬ ನಾಣ್ಣುಡಿಯನ್ನು "ಜಾಣನಿಗೆ ಮಾತಿನ ಪೆಟ್ಟು; ದಡ್ಡನಿಗೆ ಡೊಣ್ಣೆಯ ಪೆಟ್ಟು" ಎಂದು ಭಾಷಾಂತರ ಯುಗದಲ್ಲಿ ಹಿಂದೆ ಹೇಳಿದ್ದರೂ, ಮಾನದ ಬೆಲೆನೆಲೆಯಲ್ಲಿ ಅಂತಹ ವ್ಯತ್ಯಾಸ ಎಂದೂ ಆಗಿಲ್ಲ. ಆಗಬೇಕೇಕೆ? ತ್ರಿಕಲಾಬಾಧಿತ ಸತ್ಯಗಳ ಹಣೆಯ ಬರಹವದು! ಹಳೆಯ ಯುಗ ಹಳಸಿ ಹೋಗಿ Direct Methodದ ಹೊಸ ಮನ್ವಂತರ ಬಂದರೂ ಇದಾದರೂ ನಗೆಗೇಡೇ ಆಗಬೇಕಾದುದು ಸೃಷ್ಟಿಯ ನಿಯಮ. ಶಿಕ್ಷಣ ಕ್ಷೇತ್ರದ ಈ ಹೊಸ ಪದ್ಧತಿಯ ವಿಡಂಬನೆ ಕೇಳಿಲ್ಲವೇ ತಾವು? ಒಮ್ಮೆ ಒಬ್ಬ ಹೊಸ (?) ಮಾದರಿಯ ಶಿಕ್ಷಕ, ಬ್ಯಾಂಡ್ ಸೆಟ್ಟಿನ ಚಿಕ್ಕ ಪ್ರಶ್ನೆ ಪಾಠಿನಲ್ಲಿ ಉದ್ಭೂತವಾದದ್ದಕ್ಕೆ ನಿರೀಕ್ಷಣೆಗೆ ಪ್ರಧಾನ್ಯ ಸಲ್ಲಿಸಿ ಆ ಕಂಪನಿಗೇ ಆರ್ಡರ ಕೊಟ್ಟು ಬಿಟ್ಟಿದ್ದನಂತೆ! ಕಬ್ಬಿನ ಪಾಠಿನಲ್ಲಿ ಹತ್ತುಗಳ ಕಬ್ಬು ತರಿಸಿ ಒಗೆದುದು ಇದಕ್ಕೂ ಏನು ಅಚ್ಚರಿಯ ಮಾತು? ಮುಂದೆ ಇವನ್ನೇ ವಿದ್ಯಾರ್ಥಿಗಳು ಪಾಠಿನ ಕೊನೆಗೆ ತಿಂದಿರಬಹುದು! ಹಾನಿ ಏನೂ ಆಗದು. ಆದರೆ ಅಸ್ವಾಭಾವಿಕತೆಗೆ ಏನು ಹೇಳುವದು? ಹಣದ ಅಪವ್ಯಯ ಎಂತಹದು! ಹೀಗೆ ಔಚಿತ್ಯದ ಸೀಮೆ ಮೀರದವನೇ ಬಾಳುವ

ನೆಂಬಂತೆ, ನಾಚಿದವನೇ ಮುಂದುವರಿದಾನೆಂಬ ಸಿದ್ಧಾಂತಕ್ಕೆ ಎಂದೂ ಸುಶಿಕ್ಷಿತ ಸಮಾಜದಲ್ಲಿ ಚ್ಯುತಿ ಬಾರದು.

ಭಾಷಾಂತರ ಯುಗ ದಾಟಿ ಸಾಹಿತ್ಯರಂಗಕ್ಕೆ ತಲುಪಿದರೆ ಹಿಂದಿನ ಕಾಲದಲ್ಲಿ ವರ್ಣನೆಯ ಪ್ರಸಂಗಗಳಲ್ಲಿ ಕವಿಸಮಯಗಳಿದ್ದುದನ್ನು ನಾವು ಓದಿಲ್ಲವೆ? ಕವಿಚೂತವನ ಚೈತ್ರ ಎಂಬ ಬಿರುದಾಂಕಿತ ಲಕ್ಷ್ಮೀಶನು 'ನಾಚಿ ಬಿಳ್ಪೇರಿದಳು ರಾತ್ರಿ ವಧು' ಎಂದು ಹೇಳುವಾಗ ನಾಚಿಕೆಯ ಬಣ್ಣ ಬಿಳಿದು ಎಂದಾಯಿತು. 'ನೃಪನ ಕಣ್ಕೆಂಡದಂತಾದುವು' ಎಂದು ಸಿಟ್ಟಿನ ರಭಸ ರೌದ್ರರೂಪ ಚಿತ್ರಿಸುವಾಗ ಅದರ ವರ್ಣ ಕೆಂಪೇ ಆಯಿತಲ್ಲವೆ? ಚಕ್ರವಾಕ ದಂಪತಿಗಳ ಇರುಳ ವಿರಹ, ಚಂದ್ರ ದರುಶನದಿಂದ ಚಂದ್ರಕಾಂತ ಶಿಲೆ ನೀರೊಸರುವುದು, ಚಕೋರವು ತಂಗದಿರುಗಳನ್ನು ಸೇವಿಸುವದು— ಹೀಗೆ ಎಷ್ಟೋ ಕವಿಸಮಯಗಳು ಭಾವನಾ ಪ್ರಪಂಚದ ಐಸಿರಿಯ ದ್ಯೋತಕಗಳೇ ಆಗಿಲ್ಲವೆ? ಏನೇ ಆಗಲಿ, ನವ್ಯ ಕವಿಗಳನ್ನು ಲಘುವೆಣಿಸಿದರೂ ಹಿಂದಣ ಕವಿಗಳ ವರ್ಣನಾ ವೈಖರಿಗೆ ಸಹಾಯ್ಯವಾದುದು ಸಣ್ಣ ಮಾತಲ್ಲ!

ಕಾವ್ಯದಲ್ಲಿ ನಾಚಿಕೆಗೊಂದು ಸ್ಥಾನವಿತ್ತೆಂದು ಇಂದೂ ಅತಿ ವಿನಯ, ಅತಿ ನಾಚಿಕೆ, ಅನವಶ್ಯಕ ಸೌಜನ್ಯ ತೋರಿಸಿದರೆ ಸಾಗದು. ಜೀವನವೊಂದು ಜಿದ್ದೆಂದು ಪರಿಣಮಿಸಿದ ಇಪ್ಪತ್ತನೆಯ ಶತಮಾನದಲ್ಲಿ ಅತಿ ನಾಚಿಕೆಗೇ ಮೊರೆ ಹೋದರೆ ಪ್ರಗತಿ ಹೇಗಾದೀತು? ನಿತ್ಯ ವ್ಯವಹಾರಕ್ಕೂ ಅಡೆತಡೆ! 'Success often comes to those who dare and act and it seldom goes to the timid' ಎಂದು ಭಾವ ಪೂರ್ಣವಾಗಿ ಉಸುರುವ ಪಂಡಿತ ಜವಾಹರರು ನಿಜವಾಗಿಯೂ ಕ್ರಮಬದ್ಧ ಗಡಸುತನಕ್ಕೆ ಮನ್ನಣೆ ಕೊಟ್ಟಿರುವರಲ್ಲವೆ? ರಂಗಭೂಮಿಯಲ್ಲಿ, ಉಪನ್ಯಾಸ ರಂಗದಲ್ಲಿ ಜನರು ಗೋಚರವಾದೊಡನೆಯೇ ಗದಗುಟ್ಟಿನಡುಗುವವರಿಂದೇನು ಸಾಧಿಸೀತು? ಮೊದಲೊಂದು ಸಲ ಹೀಗಾಯಿತೆಂದು ಪರವಾ ಇಲ್ಲವೆಂದರೂ ಕೊನೆಯವರೆಗೂ ಇದೇ ಪರಿಪಾಠ ಬಿದ್ದರೆ ವೈಯ್ಯಕ್ತಿಕ ಏಳ್ಗೆ ಹಗಲುಗನಸೇ ಸೈ! ಮೊದಲು ಬಾರಿ ಮಾತಿನ ರೂಢಿ ಇಲ್ಲದ್ದಕ್ಕೆ ಅತಿ ತತ್ತರಿಸಿ I conceive, I conceive, I conceive ಎಂದುಸುರಿ ನೆಲನ

ಕೊಂಡ ಇಂಗ್ಲಂಡದ ಮುಖ್ಯ ಮಂತ್ರಿಯೂ ಹಿಂದೊಮ್ಮೆ ಅಪಹಾಸ್ಯಕ್ಕೆ ಗುರಿಯಾದುದನ್ನು ಇತಿಹಾಸ ವಿದ್ಯಾರ್ಥಿ ಎಂದು ಮರೆತಾನು ? ಹೀಗೆ ದಿಟ್ಟತನವು ಸರ್ವಶ್ರೇಷ್ಠ ಸದ್ಗುಣವೆನಿಸದಿದ್ದರೂ, ಇದರ ಅಭಾವದ ಮೂಲಕ ಮರ್ಯಾದೆಗೇಡು ಆಗುವದೇ ಖಂಡಿತ. ಒಮ್ಮೆ ಈ ಪರಿಯಾಗಿ ಸಮಾಜದಲ್ಲಿ ಮೂಲೆಗುಂಪಾದವನು ಮುಂದೆ ಮುಂದುವರಿದಾನೊ ಇಲ್ಲವೊ ಎಂಬುದರ ವಿಷಯದಲ್ಲಿ ಆಸೆಗಿಂತ ವಿವಂಚನೆ, ಹಳಹಳಿಯೇ ಹೆಚ್ಚೆನಿಸುವದು. ಜಾಗತಿಕ ತಕ್ಕಡಿಗೆ ರೆಫ್ರೀಲಿ ಹೊಡಿಸಲು ಅಣಿಯಾಗಿದ್ದರೆಂತೇ ನೆಪ್ಪೋಲಿಯನ್ ಹಿಟ್ಲರರು ಹೆಸರುವಾಸಿಯಾದರು.'ಸಾಯಸೆ ಶ್ರೀಃ ಪ್ರತಿವಸತಿ" ಅನ್ನುವ ತಂಡಕ್ಕೆ ಆರಾಧ್ಯ ದೇವತೆಗಳಾಗಿ ಮೆರೆದರು. ಈ ಗುಣದ ಲವಲೇಶವೇ ಇಲ್ಲದ್ದಕ್ಕಾಗಿ ವೆಂಕ, ನೋಣ, ಶೀನರು ಉದಿತರಾಗಿರುವರು; ಸ್ಥಳಭದ್ರವಾಗಿರಿಸಿಕೊಂಡಿರುವರು—ತಿರುಗುವ ಈ ಭವ ಮಾಲೆಯಲ್ಲಿ !

ಕಾವ್ಯ, ರಾಜಕಾರಣ ಬದಿಗಿರಿಸಿ ಜಾಗತಿಕ ಗದ್ಯ ವಾಙ್ಮಯದೆಡೆ ನೋಟ ಹೊರಳಿಸಿದಾಗ, ನಾಚಿಕೆ ಇಲ್ಲವೆ ದೃಢ ಸಂಕಲ್ಪದ ಅಭಾವ ಮಾರ್ದವಗಳು ಅನೇಕ ಅನರ್ಥಗಳಿಗೆ ವ್ಯಕ್ತಿಗಳ ಸನ್ಯಾಸವೃತ್ತಿಗೆ, ನಿರಾಶೆಗೆ ಕಾರಣೀಭೂತವಾಗಿವೆಯೆಂದು ಹೊಳೆಯುವದು. ವಿಶ್ವವಿಖ್ಯಾತ ಆಂಗ್ಲ ಕಾದಂಬರಿಕಾರನಾದ ಹಾರ್ಡಿಯ ಕ್ಲಿಮ್ ಎಂಬ ಕಥಾನಾಯಕನ ತಾತ್ಸಾರ ವೃತ್ತಿಯ ಮೂಲಕ ಎಂತಹ ಅಳಿಸಲಾಗದ ಅನಾಹುತವಾಯಿತು ಯುಸ್ಟೇಶಿಯಾಳ ಜೀವಕ್ಕೆ! ಮುಚ್ಚುಮರೆ, ಅಸ್ಪಷ್ಟತೆ (ಕವಡು ಗಂಟಕತನ?) ಹೊಯ್ದಾಟಗಳೇ ಇಬ್ಸೆನ್ನನ 'ಡಾಲ್ಸ್ ಹೌಸಿ' ನಲ್ಲಿ ಹಾಹಾಕಾರವೆಬ್ಬಿಸಲಿಲ್ಲವೆ ? ನಾಮಾಂಕಿತ ಗದ್ಯ ಲೇಖಕರಾದ ಎಚ್. ಜಿ. ವೆಲ್ಸರೂ ಇದೇ ದಿಟ್ಟತನದ ಅಭಾವದ ಮೂಲಕ ತಮ್ಮ ಕಥಾನಾಯಕ ಹೊಪ್ ಡ್ರೈವರನಿಗೆ— ಹಣ ನೀರಿನಂತೆ ಸುರಿದರೂ— ಪ್ರಣಯ ಭಗ್ನತೆಯಾಯಿತೆಂದು ರಸವತ್ತಾಗಿ ನಿರೂಪಿಸಿರುವರು. ರವೀಂದ್ರರ 'ಕ್ಷುಧಿತ ಪಾಷಾಣ' ವಾಗಲಿ, ಶರಶ್ಚಂದ್ರರ ಎಷ್ಟೊ ಸಾಮಾಜಿಕ ಕಾದಂಬರಿಗಳಾಗಲೀ ಈ ದಿಸೆಯಲ್ಲಿ ಅತಿ ಮುಂದುವರಿದು ಎದೆಗಾರಿಕೆಗೆ ಮೇಲಿನ ಮಟ್ಟ ಸಲ್ಲಿಸಿವೆ.

ಮುಂದುವರಿದ ರಾಷ್ಟ್ರಗಳಲ್ಲಿಯ ಪೆಣ್ಮಣಿಗಳೂ ಇಂದು ಅತಿ ಲಜ್ಜೆ, ಅರ್ಥಹೀನ ನಾಚಿಕೆ ಅನರ್ಥಕಾರಿಯೆಂದು ಪರಿಗಣಿಸಿ ಮುನ್ನಡೆ

ಇಡುತ್ತಿರುವಾಗ ಸುಶಿಕ್ಷಿತ ಯುವಕನು ಎಂದಾದರೂ ನಾಚಿಕೆಗೆ ಮಾರು ಹೋದಾನೆ ? ನಾಚಿಕೆ, ಲಜ್ಜೆ ಗೌರವದ ಲಕ್ಷಣಗಳೆಂದಾಗ, ಅಹಂಕಾರ ದುರಾಗ್ರಹ, ಆತ್ಮಸ್ತುತಿ, ಪರನಿಂದೆ ಕೀಳು ಎಂದಿಷ್ಟೇ ಅರ್ಥವಾಗುವದೆ ವಿನಹಾ ನಿಷ್ಕ್ರಿಯತೆ ಮೇಲು ಎನ್ನಲಾಗದು. ಅಂತೇ ಜೀವನದುದ್ದಕ್ಕೂ ' ಆಶಾ ಬಲವತೀ ' ಎಂದು ನೆರೆನಂಬಿ ವಿವೇಕ ಬಲದಿಂದ ಪ್ರತಿಭೆಯನ್ನು ಜಾಗ್ರತವಾಗಿಸಿ ಮುನ್ನುಗ್ಗುವ ಮಹಾನುಭಾವರು ಕರ್ತೃತ್ವಶಾಲಿಗಳೆಂದು ಆದಿ ಬುನಾದಿ ಕಾಲದಿಂದಲೂ ಹೆಸರುವಾಸಿಯಾಗಿಲ್ಲವೆ ? ಇದೀಗ ನಾಚಿಕೆಯ ಸ್ವರೂಪ, ವ್ಯಾಪ್ತಿ, ಹಿರಿಮೆ !

# ಸಿಟ್ಟಾಗಲೂ ಬೇಕು.

'ಕೋಪವೆಂಬುದು ಪಾಪದಾ ನೆಲಗಟ್ಟು' 'ಸಿಟ್ಟಾಗಿ ಶಿವನ ಬೈ ಬ್ಯಾಡಾ' 'Anger is a short fit of madness' 'ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.' ಎಂದು ಹಲವಾರು ಬಗೆಯಿಂದ ನೀತಿಶಾಸ್ತ್ರಗಳು, ಜಾನಪದ ಸಾಹಿತ್ಯ, ದಾಸ ವಚನ ವಾಙ್ಮಯಗಳು ಯುಗ ಯುಗಾಂತರದಿಂದ ಬೋಧಿಸುತ್ತ ಬಂದಿದ್ದರೂ ಇವನೇಕೆ ಸಿಟ್ಟು ಸೆಡವಿನ ಮಹಿಮೆ ಕೊಂಡಾಡುವನಪ್ಪಾ ಎಂದು ಪ್ರಾರಂಭಕ್ಕೆ ಕೆಲವು ನಿಷ್ಠಾವಂತರು ಶಿರೋಲೇಖನ ನೋಡಿ ನನ್ನ ಮೇಲೆ ಹರಿಹಾಯಬಹುದು. ಪ್ರಗತಿ ಶೀಲತೆಯ ಇದೊಂದು ಮಾದರಿ ಎಂದು ಶರಾ ಹಾಕುವ ಚಿಕಿತ್ಸಕರೂ ಇದ್ದಿರಲು ಸಾಕು. ಇನ್ನುಳಿದವರು ಇವನು ಹೇಗೆ ತನ್ನ ಮಾತು ಸಮರ್ಥಿಸಿ ಕೊಂಡಾನೆಂದು ಕುತೂಹಲಿಗಳೂ ಆಗಿರಬಹುದು. ಎಲ್ಲದಕ್ಕೂ ( ರೋಗ ಗಳಲ್ಲ ! ) ಒಂದೇ ರಾಮಬಾಣವೆಂಬರೀತಿ ವಿಷಯ ಪ್ರವೇಶವೇ ಗತಿ.

ಸಿಟ್ಟಿನ ವಿರಾಟ ರೂಪ ಬಣ್ಣಿಸುವ ಮೊದಲು ಅದರ ವ್ಯಾಪ್ತಿಯ ಬಗೆಗೆ ಪರ್ಯಾಲೋಚಿಸುವದು ಯುಕ್ತವೇ ಸೈ. ಸಿಟ್ಟು ಬಾರದೇ ಯಾರಿಗೆ ಇದ್ದೀತು ? ನಿಜವಾಗಿಯೂ ಇದು ಮನೋರಂಜಕ ವಿಷಯ. ಇದೀಗ ಬೆಳೆ ಯುತ್ತಿರುವ ಚಿಕ್ಕ ಮಗುವಿನಿಂದ ಹಿಡಿದು ಅತಿ ವಯಸ್ಕ ಹಿರಿಯರ ವರೆಗೂ ಸಿಟ್ಟು ತನ್ನ ಲೀಲಾಜಾಲ ಹರಡಿದೆಯೆಂದರೆ ಅದರ ಸಮಗ್ರ ಮೇರೆ ಬಣ್ಣಿಸಿದಂತಾಯಿತಲ್ಲವೆ— From Himalayas to Cape Comorin ಎಂದು ಭಾರತದ ಉದ್ದಗಲತೆ ತೋಳು ಬೀಸಿ ಹೇಳಿದಂತೆ ? ಬರೀ ವ್ಯಾಪ್ತಿ

ಯಿಂದ ಅದರ ಹಿರಿಮೆ ವ್ಯಕ್ತವಾಗುವದೆಂದರೆ ತಪ್ಪು ಕಲ್ಪನೆಯಾಗುವ ಸಂಭವ ಉಂಟು. ಅದರ ರೂಪವೇ ಮೋಹಕವೆಂದರೆ ಮಾತ್ರ ಅದರ ನೆಲೆ ಬೆಲೆ ಅರ್ಥವಾದೀತು.

ಸಿಟ್ಟಾದವರ ಮುಖಚರ್ಯವನ್ನು ಸೂಕ್ಷ್ಮವಾಗಿ ನಿರುಕಿಸುವದೆಂದರೆ ಮಾನಸಶಾಸ್ತ್ರದ ಹಿರಿ ಅಭ್ಯಾಸ ನಡಿಸಿದಂತೆ ಸಿಟ್ಟಿನ ಆವಿರ್ಭಾವವೆನಿಸಿದಾಗ ಕಾಡುಜನರು ಮೊದಲು ತುಟಿ ಕಚ್ಚಬಹುದು, ಹಲ್ಲು ಕಡಿಯಬಹುದು. "ದಂತಾನ್ ದಂತ್ಯೈರ್ವಿಘಟ್ಟಯನ್" ಎಂಬುದು ಕೇವಲ ದೇವವಾಣಿಯ ನಿದರ್ಶನ ! "ಆಃ ಕ್ಷುದ್ರಾಃ ಸಮರ ಭೀರವಃ ಕಥಮೇವಂ ಪ್ರಲತಾಂ ವಃ ನದೀರ್ಣಮನಯಾ ಜಿಹ್ವಯಾ" ಎಂದು ಉದ್ಗರಿಸುವ ಭಟ್ಟ ನಾರಾಯಣ ಕವಿಯ ವೇಣೀ ಸಂಹಾರದ ಅಶ್ವತ್ಥಾಮನ ವಾಣಿ ಸುಕೋಮಲವಾಗಿದ್ದರೆ ನಗೆಗೇಡಲ್ಲವೆ ? ಅಂತೂ ಸಿಟ್ಟಿನ ಪರಿಣಾಮ ಸ್ವಾಭಾವಿಕವಾಗಿ ಧ್ವನಿಯ ಮುಖಾಂತರ ಮಾರ್ಮಿಕವಾಗಿ ವಿದಿತವಾಗುವದು ರೂಢಿ. ಹೀಗೆಂದ ಮಾತ್ರಕ್ಕೆ ನಲ್ಲೆಯ ಹುಸಿ ಮುನಿಸೂ ಹೀಗೇ ಇದ್ದಿರಬೇಕೆಂದು ಹಿಂದು ಮುಂದೆ ನೋಡದೆ ತರ್ಕದ ಸರಣಿಯಲ್ಲಿ ತಿಳಿದರೆ ಎಬಡತನದ ಪರಮಾವಧಿ ಎನಿಸೀತು ! ಉಪ್ಪು ಟೆಂಗಿನಕಾಯಿಗಳ ಭೇದವರಿಯದಂತಾದೀತು ! ಎರಡೂ ವಸ್ತುಗಳೂ ಅಡಿಗೆಗೆ ಉಪಯುಕ್ತವೆಂದು ತಾರತಮ್ಯ ಬಿಟ್ಟರೆ ಹಾಹಾಕಾರವೆದ್ದು ಮಾಯಾವಾದವು ತಲೆದೋರಿ ಲೋಕವ್ಯಾಪಾರ ಲೋಕಸಂಗ್ರಹಗಳಿಗೇ ಚ್ಯುತಿ ಬಂದೀತು !

ಸಿಟ್ಟಿನ ಹಿರಿಮೆಯನ್ನು ಹಾಡಿ ಹರಿಸುವವರು ಮುಖ್ಯತಃ ಮಾನಸ ಶಾಸ್ತ್ರಜ್ಞರೇ ಎನ್ನಬೇಕು. ಮುಂಗೋಪಿ ಶೀಘ್ರಕೋಪಿಗಳಾಗಿರೆಂದು ಅವರು ಸಲಹೆ ಕೊಡುತ್ತಾರೆನ್ನಕೂಡದು. ಸಕಾಲಕ್ಕೆ ಸಿಟ್ಟಿನ ಸೋಗು ಸಾಧಿಸಿಕೊಳ್ಳದಿದ್ದರೆ ಅನರ್ಥವಾಗುವದೇ ಖಚಿತ. ಮಗುವಿನ ಮೇಲೆ ಅಪರಿಮಿತ ವಾತ್ಸಲ್ಯವಿದೆಯೆಂದ ಮಾತ್ರಕ್ಕೆ ಅದು ಏನು ಕೆಡಿಸಿದರೂ ಏನೆಂದರೂ ತಡೆಯಲಾದೀತೆ ? ಹಾಗಾದರೆ ಆ ಕಾಲಕ್ಕೆ ಪೆಟ್ಟು ಹಾಕ ಬೇಕೆಂದು ಅರ್ಥವಲ್ಲ. ಆದರೆ ಹೀಗೆ ಮಾಡಿದ್ದೆಲ್ಲ ತಪ್ಪು ಎಂಬ ಸಿಟ್ಟಿನ ಮುಖ ಮುದ್ರೆ ಹಾಕಿ ಬಿಟ್ಟರಷ್ಟೇ ಸಾಕು. ಅಡ್ಡದಾರಿ ತುಳಿಯುವದನ್ನು ಮೊದಲೇ ತಪ್ಪಿಸುವ ಅತಿ ಸಾಮಾನ್ಯ ಸುಕುಮಾರ ಉಪಾಯ ! ಹಾಗೆ

ನೋಡಿದರೆ ಕೊಂಚ ಛೇಡಿಸಿ ಸಿಟ್ಟಿಗೆಬ್ಬಿಸಿದಾಗ ವ್ಯವಹಾರದಲ್ಲಿ ನಿಶ್ಚಿತ ಪ್ರಮಾಣದ ಲಾಭವೇ ಕಂಡು ಬರುವದು. 'ವಾದೇ ವಾದೇ ಜಾಯತೇ ತತ್ವ ಬೋಧಃ' ಎಂಬ ಶುಕರಂಭೆಯರ ಲೋಕ ಪ್ರಿಯ ನುಡಿಯಂತೂ ನೆರವಿಗಿದ್ದೇ ಇದೆ. ಮಾನವ ಕುಲ ಬದಿಗಿರಿಸಿ ಕೆಳಗಿನ ಘಟ್ಟಕ್ಕಿಳಿದಾಗಲೂ ಪ್ರಾಣಿ ವರ್ಗಕ್ಕೂ ಈ ಮಾತು ಅನ್ವಯಿಸುವದುಂಟು. ಟಾಂಗೆಯ ಕುದುರೆಗೆ, ಚಕ್ಕಡಿಯ ಎತ್ತಿಗೆ ಮಾಲಕರು ಬರೀ ರಮಿಸುತ್ತ ಹೊರಟರೆ ಹೊಟ್ಟೆಗೆ ಕೇರುಹಾಕಿ ಕೊಳ್ಳುವ ಕಾಲ ಒದಗೀತು ! ಬಾರಕೋಲಿನ ಇಲ್ಲವೆ ಚಬಕದ ಧ್ವನಿಯ ಮೂಲಕ ಸಿಟ್ಟನ್ನು ವ್ಯಕ್ತಗೊಳಿಸಲೇಬೇಕು. ವ್ಯವಹಾರದ ರೀತಿ ನೀತಿಯದು !

ಸಿಟ್ಟು ಎಂತೆಂತಹದನ್ನೋ ಸಾಧಿಸಿದೆ ಎಂದಾಗ, ಮೂಗಿನ ಮೇಲೆ ಸಿಟ್ಟಿದ್ದವರು ಅವ್ಯವಹಾರಿಗಳೆನ್ನಬೇಕು. ತನ್ನ ಯೋಗ್ಯತೆ ಪರಿಕ್ಷಿಸದೆ ಸಿಟ್ಟಿಗೇಳುವವನನ್ನು ಕಂಡೇ ಜಾಣರು-'ಬಡವನ ಸಿಟ್ಟು ದವಡೆಗೆ ಮೂಲ' ಎಂಬ ನಾಣ್ಣುಡಿ ಕಂಡು ಹಿಡಿದಿದ್ದಾರು ರಾಜಮಹಾರಾಜರ ಹುಬ್ಬಿನ ದರ್ಪದಿಂದ ಹೊರಹೊಮ್ಮುವ ಕಿಡಿಗಳಿಂದ ರಾಜ್ಯದ ಸಾಮ್ರಾಜ್ಯದ ತೆನಿ ಒಕ್ಕಿ, ಮಂಡಲ ಗಿಂಡಲಗಳ ಗಡ ಮುಕ್ಕಿ ಹೋದಾವು. ಆದರೆ ಕಡು ದರಿದ್ರನದೇನು ? ಏನಿದ್ದರೂ ತನ್ನ ಉದ್ದೇಶ ಸಾಧಿಸದಿದ್ದುದಕ್ಕಾಗಿ ಎಂತಹರಿಗೂ ಯಾತಕ್ಕೂ ಸಿಟ್ಟು ಬರುವದು ಸಹಜವೇ ಅಹುದು.

ಸಿಟ್ಟಿನ ನೈಜ ಬೆಲೆ ಅರಿಯಲು ಹಲವಾರು ಸಲ ಸಾಹಿತ್ಯವೂ ಅತಿ ಸಹಾಯಕಾರಿ. ಮಹಾರಾಷ್ಟ್ರದ ಗಣ್ಯ ಲೇಖಕರಾದ ಸಾನೆ ಗುರೂಜಿಯವರ 'ಶ್ಯಾಮಚೀ ಆಯಿ' ಈ ದಿಸೆಯಲ್ಲಿ ಒಳ್ಳೇ ನಿದರ್ಶನ. ಶ್ಯಾಮನು ಬಡ ಸ್ವಾವಲಂಬಿ ಕೊಂಕಣಿ ಕುಟುಂಬದಲ್ಲಿ ಹುಟ್ಟಿ ಬೆಳೆದವ. ತಾಯಿ ಮಹಾ ಬುದ್ಧಿಶಾಲಿನಿ. ಮಗನಿಗೆ ಕ್ಷಣಕ್ಷಣಕ್ಕೆ ಬುದ್ಧಿ ಕಲಿಸುವ ಹಟ ತೊಟ್ಟವಳು. ತನ್ನ ಲಹರಿಯಂತೆ ಕುಣಿದರೆ ಮಗು ಮುಟ್ಟೇತೆಲ್ಲಿ ಎಂಬ ಉದ್ವಿಗ್ನತೆ ಆವಳಿಗೆ. 'I shall be as harsh as truth and as uncompromising as justice' ಎಂಬ ಮಹಾತ್ಮಾ ಗಾಂಧೀಜಿಯರ ತತ್ವವನ್ನು ಅರಗಿಸಿಕೊಂಡ ಸಾನೆ ಗುರೂಜಿಯವರ ಪಾತ್ರ ಸಾಮಾನ್ಯವಾಗಿ ವ್ಯವಹರಿಸೀತೆ ? ಅಂತೇ ಈಜುವ ಮನಸ್ಸಿಲ್ಲದಿದ್ದರೂ ಶ್ಯಾಮುನನ್ನು ಆಕೆ ಆದರಲ್ಲಿ ಕ್ರೂರತನದಿಂದ

ತೊಡಗಿಸುತ್ತಾಳೆ; ಉಪವಾಸ ಕೆಡವಿಯಾದರೂ ಕೈಕೆಲಸದ ಹಿರಿಮೆ ಮನ-ಗಾಣಿಸಿಕೊಡುತ್ತಾಳೆ; ಸಿಟ್ಟು ಮಾಡಿಯೂ ಭ್ರಾತೃವಾತ್ಸಲ್ಯ ಕಲಿಸುತ್ತಾಳೆ; ಬಿರುನುಡಿದು ಕೂಡ "ಅಯಂ ನಿಜಃ ಪರೋವೇತಿ ಗಣನಾ ಲಘು ಚೇತಸಾಂ" ಎಂದು ಬಿಂಬಿಸುತ್ತಾಳೆ. ಶ್ಯಾಮನಿಗೆ ತಾಯಿಯ ಸಿಟ್ಟಿನ ಹಿನ್ನೆಲೆಯ ಹೃದಯದ ಔದಾರ್ಯ ಹೊಳೆದು ಘನಶ್ಯಾಮ ಮಾಧವ ನಾಗುವನು !

ಸಿಟ್ಟಿನ ಕಾಡುಸ್ಥಿತಿ ಹಾಗೂ ಸೇಡಿನ ಬುದ್ಧಿಗಾಗಿ ರೋಸಿಹೋದ ಕವಿಗಳು ಅದರ ಅನರ್ಥಗಳನ್ನು ಜಗತ್ತಿನಲ್ಲಿ ಕಂಡು ಅನುಭವಿಸಿದಂತಹರೇ. 'What man has made of man' ಎಂಬ ಒಂದೇ ಭಾವಗರ್ಭಿತ ವಾಕ್ಯದಲ್ಲಿ ನಿಸರ್ಗಕವಿ ವರ್ಡ್ಸ್‌ವರ್ಥನು ಮಾನವನ ದುರ್ವೃತ್ತಿಗಾಗಿ ಕಣ್ಣೀರಿನ ಕೋಡಿ ಹರಿಸಿದ್ದಾನೆ. ಹರೀಂದ್ರನಾಥ ಚಟ್ಟೋಪಾಧ್ಯಾಯರ 'Festival of the red' ಎಂಬುದಂತೂ ಮಾನವನ ಕುತ್ಸಿತತನಕ್ಕೆ ಕೈಗನ್ನಡಿಯಾಗಿದೆ. ಒಂದು ಮೇಜವಾನಿಗೆ ಜಗತ್ತಿನ ಎಲ್ಲ ಕೋಮಲ, ಭಯಾನಕ ಕೆಂಪು ಬಣ್ಣಗಳೆಲ್ಲ ಬಂದುವಂತೆ ! ಒಳಗೆ ಬರಲೊ ಬೇಡವೋ, ಬಂದರೆ ನನ್ನನ್ನೆಷ್ಟು ತಿರಸ್ಕರಿಸಬಹುದೆಂದು ಮನುಷ್ಯನ ಸಿಟ್ಟಿನ ಕೆಂಬಣ್ಣವು ಮಾತ್ರ ಹೊರಗೆ ದಾರಿ ಕಾಯಿತಂತೆ ! ಮನುಷ್ಯನ ಕೋಪಾಟೋಪದ ಹಾಹಾಕಾರದ ಕಲ್ಪನೆ ಇದರಿಂದಾದೀತು ! ಅಂತೇ ಕೆಂಪಿದ್ದರೂ ಕೆಂಪಿನ ಸಮ್ಮೇಲನದಲ್ಲಿ ಬಹಿಷ್ಕಾರ !

ಸಾಹಿತ್ಯದ ಪ್ರಮುಖ ಅಂಗವೆನಿಸಿಕೊಂಡ ಮಹಾಕಾವ್ಯಗಳಲ್ಲಿ ಕೂಡ ಸಿಟ್ಟಿನ ಸ್ಥಾನ ಮೇಲ್ಮಟ್ಟದ್ದು. ತನ್ನ ಅವಮಾನಕ್ಕೆ ಪ್ರತೀಕಾರವಾಗ ಬೇಕೆಂದು ರಣಚಂಡಿಯಂತೆ ದ್ರೌಪದಿಯು ಸಿಟ್ಟಿಗೇಳದಿದ್ದರೆ ಭೀಮನ ಬಣ್ಣ ಹೊರಬೀಳುತ್ತಿರಲಿಲ್ಲ. ಕೌರವ ಕುಲದ ಖಂಡನೆಯೂ ಸಾಧಿಸುತ್ತಿರ ಲಿಲ್ಲ. ದುಷ್ಟರ ದಂಡನೆ ಶಿಷ್ಟರ ಪರಿಪಾಲನೆ ಇಲ್ಲವೆ ಪರಮಾತ್ಮನ ಅವತಾರದ ಕಾರ್ಯ ನೆರವೇರುತ್ತಿತ್ತೊ ಇಲ್ಲವೊ ? ತನ್ನ ಪತಿಯನ್ನೇ ಧೇನಿಸುತ್ತ ತಮ್ಮನ್ನು ಅಲಕ್ಷಿಸಿದ್ದಕ್ಕಾಗಿ ಯಶೋಧನರಾದ ದುರ್ವಾಸರು ಸಿಟ್ಟಿನಿಂದ ಶಾಪ ಕೊಟ್ಟಿರದಿದ್ದರೆ ಶಕುಂತಲೆಯ ಸ್ವಭಾವದ ಉತ್ತಾನತೆ ನಮಗೆ ಮನವರಿಕೆಯಾಗುತ್ತಿತ್ತೆ ? ತಂದೆ ಮಕ್ಕಳ ನೈಜ ವಾತ್ಸಲ್ಯ ವಿಶ್ವಾಸಗಳಿಗೆ

ಜಮದಗ್ನಿ ಪರಶುರಾಮರೇ ಸಾಕ್ಷಿ! ಪಾಪಕ್ಕಾಗಿ ತಾಯಿಯನ್ನೇ ಕಡಿದು ಬಿಡೆಂದು ಆಜ್ಞಾಪಿಸಬೇಕಾದರೆ ಜಮದಗ್ನಿಯ ಸಿಟ್ಟಿನ ಪರಿಮಿತಿ ಎಂತಹ ದಿದ್ದೀತು?

"ಅವಿವೇಕಃ ಪರಮಾಪದಾಂ ಪದಂ" ಎಂಬಂತೆ ಸಿಟ್ಟಿನ ಭರದಲ್ಲಿ ಅನರ್ಥಗಳಾಗುವದೇ ಹೆಚ್ಚು. ಕಾರಣಗಳೇನೂ ಕ್ಷುಲ್ಲಕವಿದ್ದಿರಬಹುದು. ಶೆಕ್ಸಪಿಯರ್ ಮಹಾಕವಿಯ ಅಥೆಲೋ ನಾಟಕದಲ್ಲಿ ಗಂಡಹೆಂಡಿರ ಪ್ರೀತಿ ಎಷ್ಟೊಂದು ಪರಿಶುದ್ಧ, ಆದರ್ಶವಾದುದು! ಡೆಸ್‌ಡೆಮೋನಾ ಅಥೆಲೋವಿಗೆ ಒಲಿಯುವದು ಮೊದಲು ರೂಪಕ್ಕಾಗಿಯಲ್ಲ; ಅವನಲ್ಲಿಯ ಮಾತಿನ ಸಾಹಸದ ಜಾದೂಗಾರಿಕೆಗಾಗಿ! ಮುಂದೆ ಖಳನಾಯಕನ ಹಿತ್ತಾಳೆಯ ಕಿವಿಗಾಗಿ ಸೊಟ್ಟ ಕರವಸ್ತ್ರದ ಮೂಲಕ ಬಂಗಾರದಂತಹ ಅವರ ಪ್ರೇಮವು ನುಚ್ಚುನೂರಾಯಿತು. ನಿರಾಸೆ ಇಷ್ಟಕ್ಕೇ ನಿಲ್ಲದೆ, ಹೆಂಡತಿ ವಿಶ್ವಾಸಕ್ಕೆ ಪಾತ್ರಳಲ್ಲವೆಂದು ಕಂಡುಬಂದೊಡನೆ ಸಿಟ್ಟಿನ ಭರದಲ್ಲಿ ಆಕೆಯನ್ನು ಅಥೆಲೊ ಕೊಂದೂಬಿಟ್ಟ! ಎಂತಹ ಅಳಿಸಲಾಗದ ಅನ್ಯಾಯ– ಒಂದು ಭಾವನೆಯ ಉದ್ರೇಕಕ್ಕೆ ಕಟ್ಟುಬಿದ್ದಾಗ!

"ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೆ" ಎಂದು ಸಂನ್ಯಾಸ ವೃತ್ತಿಯ ಲಕ್ಷಣ ವಿವರಿಸಲಾಗಿದ್ದರೂ ದೈನಂದಿನ ಜೀವನದಲ್ಲಿ ಎಷ್ಟೋ ಸಲ ಈ ಸಪ್ಪೆ ಜೀವನ ಸಾಗಿಸಿದರೆ ಕುಟುಂಬದಲ್ಲಿಯೂ ಅವ್ಯವಸ್ಥೆ, ಸಮಾಜದಲ್ಲಿಯೂ ಅರಾಜಕತೆ ಅಡಿ ಇಟ್ಟೀತು. ಮನೆಯೊಡೆಯನಿಗೆ ಸಿಟ್ಟಿನ ಪ್ರತೀಕವಾದ ಬಿಗುಹು ಅವಶ್ಯವಾದಂತೆ ಆಡಳಿತಗಾರರಿಗೂ ರಾಷ್ಟ್ರಗಳ ಭಾಗ್ಯವಿಧಾತರಿಗೂ ದರ್ಪದ ಸೋಂಕಿಲ್ಲದೆ ಸಾಗದು. ಸಿಟ್ಟಿನಿಂದ, ಬಿಗುಹಿನಿಂದ ಒಂದು ಬಗೆಯ ಶಕ್ತಿ, ವ್ಯಕ್ತಿಯ ಮೈಗೂಡುತ್ತಿದೆಯೆಂದೊಡನೆ ಅದರ ದುರುಪಯೋಗ ಮಾಡಿಕೊಳ್ಳುವದು ಅನಾಗರಿಕತೆಯ ಕುರುಹು. It is good to have giant's strength but it is bad to use it as a giant ಎಂಬ ಉಕ್ತಿ ಕೇಳಿಲ್ಲವೆ? ಹೀಗೆ "ಯೋಗಃ ಕರ್ಮಸು ಕೌಶಲಂ" ಎಂದು ಗೀತೆ ಹೇಳಿದಂತೆ, ಅಂತಹದೇ ಬುದ್ಧಿಮತ್ತೆಯ ಮೂಲಕ ಸಿಟ್ಟನ್ನು ಆಟೋಪದಲ್ಲಿಟ್ಟುಕೊಂಡು ವ್ಯಕ್ತಿ ವ್ಯವಹರಿಸತೊಡಗಿದರೆ ಹಾಹಾ ಎನ್ನುವದರಲ್ಲಿ ಜಗತ್ತು ನಂದನವನವಾದೀತಲ್ಲವೆ? ಅದಕ್ಕಾಗಿ ಸಾಧು

ಸಂತರ ಇತರ ಮಹನೀಯರ ಹವ್ಯಾಸ ಆಕಾಂಕ್ಷೆಗಳಿಲ್ಲವೆ? "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಭರತ ವಾಕ್ಯದ ಗುಟ್ಟು ಇಂತಹ ಪ್ರವೃತ್ತಿಯಲ್ಲಿಯೇ ಹುದುಗಿದೆ ಎಂದು ಹೇಳಿ ವಿಷಯದಿಂದ ವಿರಮಿಸ ಬಹುದಲ್ಲವೆ? ಅಸ್ತು!

# ತಾಯಿ

ಶ್ರೀ ಶಂಕರ ಭಗವತ್ಪಾದರು ತಮ್ಮ ಗೌರೀಸ್ತುತಿಯಲ್ಲಿ 'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ' ಎಂದು ಹೇಳಿದ ನುಡಿಯೊಂದನ್ನು ಜ್ಞಾಪಿಸಿಕೊಂಡಾಗ, ತಾಯಿಯ ಮಹತಿಯ ಕಲ್ಪನೆ ಮಿಂಚಿಯೇ ತೀರುವುದುಂಟು. ವಿವೇಕಿಯಾದ ಓದುಗನಿಗೆ ಈ ಶಬ್ದದ ಅಂತರಂಗದಲ್ಲಿ ಜಗತ್ತೇ ಹುದುಗಿರುವುದೆಂಬ ವಿಚಾರ ತಲೆದೋರುವುದು. ಅಣ್ಣ-ತಂಗಿಯರ ಪ್ರೀತಿ, ಅಕ್ಕ-ತಂಗಿಯರ ಪ್ರೀತಿ, ಸಹೋದರರ ಪ್ರೀತಿ, ದಾಂಪತ್ಯ ಪ್ರಣಯ, ಸುಹೃಜ್ಜನರ ಆತ್ಮಾರ್ಪಣೆಯ ವಾತ್ಸಲ್ಯ— ಈ ಎಲ್ಲವನ್ನೂ ಮೀರಿಸುವ ಉತ್ಕಟ ದಿವ್ಯ ಆತ್ಮೀಯತೆ ತಾಯಿಯ ಹೃದಯದಲ್ಲಿ ಸದೈವ ಜಾಗೃತವಿರುವುದು. ಮಗನು ಎಂತಹ ಹೀನದಿಶೆಗಿಳಿದರೂ ತಾಯಿಯು ಕ್ಷಮಿಸುವಳು; ನೈಜ ಅನುರಾಗ ವ್ಯಕ್ತಗೊಳಿಸುವಳು. ರೂಪ-ವಿರೂಪ, ಗುಣ-ಅವಗುಣಗಳ ಪ್ರಶ್ನೆ ಆಕೆಯಲ್ಲಿ ಎಂದೂ ಉದ್ಭೂತವಾಗದು. 'ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿ ಇಲ್ಲ' ಎಂಬ ತೀರ ಸಾಮಾನ್ಯ ಲೋಕೋಕ್ತಿ ಸಹ, ತಾಯಿಯ ಪ್ರೇಮದ ಅಗಾಧತೆಯನ್ನು ಸಾರಿ ಸಾರಿ ಹೇಳುವುದು. ತನ್ನ ಭಾಷೆ, ತನ್ನ ನಾಡು ಎಂಬ ವಿಚಾರಗಳೂ ಮಾತೃಹೃದಯದ ಪಾವಿತ್ರ್ಯವನ್ನು ನೇರವಾಗಿ ಬಿಂಬಿಸುವಾಗ ಆ ಪ್ರೀತಿಯ ವಿಸ್ತಾರವನ್ನು ಬಣ್ಣಿಸುವುದು ಸಾಹಸದ ಮಾತೇ! ಹೇಗೆನಿಸಿದರೂ ಜನಸಾಮಾನ್ಯರು ತಮ್ಮ ವಿಚಾರಲಹರಿಯನ್ನು ಯಾತರ ಬಗೆಗೂ ಹರಿಸಲು ಹಿಂದುಮುಂದು ನೋಡರು. ಚಿಕಿತ್ಸಕ ಬುದ್ಧಿಯೇ ಮಾನವತೆಯ ಕುರುಹಲ್ಲವೇ ?

ಸರಿ, ಗುರುವಿಗಿಂತಲೂ ತಾಯ್ತನದ ಹೊಣೆಯೇ ಹೆಚ್ಚಿನದೆಂದು ಮೊಟ್ಟಮೊದಲು ಗ್ರಹಿಸುವುದವಶ್ಯ. ಆಕೆ ಮಗುವಿನ ಸ್ವಭಾವವನ್ನು ಮೇಣದಂತೆ ಬದಲಿಸಬಲ್ಲಳು—ಅಷ್ಟು ಸಂಸ್ಕಾರಗಳಿದ್ದುದಾದರೆ! ಚಿಕ್ಕತನ ದಲ್ಲಿಯೇ ಆಕೆಯ ಕಾರ್ಯರಂಗ ಬಹುಮುಖವಿರುವುದು. ಮಗುವನ್ನು ನಿಷ್ಠುರ ರೀತಿಯಿಂದ ಮೊದಲೇ ತಿದ್ದದಿದ್ದರೆ, ಮುಂದೆ ಎಂತಹ ಅಳಿಸಲಾಗದ ಅನಾಹುತವಾಗುವುದೆಂಬುದಕ್ಕೆ ಜಾಗತಿಕ ಇತಿಹಾಸದಲ್ಲಿ ಲಕ್ಷೋಪಲಕ್ಷ ಕತೆಗಳಿರುವುವು. ತೀರ ಸಾಮಾನ್ಯ ಕತೆಯನ್ನು ಜಾನಪದ ಜೀವನದಿಂದಾಯ್ದು ಹೇಳುವುದುಂಟು: ಒಮ್ಮೆ ಒಬ್ಬ ಬಾಗವಾನರಾಕೆ, ತನ್ನ ಮಗು ಒಂದು ಹಣ್ಣು ಕದ್ದು ತಂದಾಗ ಊಹಾಪೋಹ ಮಾಡಲಿಲ್ಲವಂತೆ. ತಂದದ್ದರಲ್ಲಿ ಅರ್ಧ ಇಸಿದುಕೊಂಡು ತಿಳಿಯದೇ ಪ್ರೋತ್ಸಾಹಿಸಿಬಿಟ್ಟಳು. ಕ್ರಮೇಣ ಇದೇ ಚಟ ಬೆಳೆಯುತ್ತ ಹೋಗಿ, ದೊಡ್ಡ ದೊಡ್ಡ ಕಳವುಗಳಲ್ಲಿ ಭಾಗವಹಿಸಿ ತಾಯಿಯನ್ನು ಸಂತೈಸಿದನು. ಕೊನೆಗೊಮ್ಮೆ ಅತಿದೊಡ್ಡ ಅಪರಾಧದಲ್ಲಿ ಅವನು ಸಿಕ್ಕಿಬಿದ್ದು ಮರಣಾಂತಿಕ ಶಿಕ್ಷೆಗೊಳಗಾದಾಗ, ತಾಯಿಯ ಭೆಟ್ಟಿಯನ್ನು—ಅಂತಿಮ—ಮಾಡಿಸಿದರು. "ನಾಲ್ಕು ಮಾತು ಪ್ರೀತಿಯ ವೆಂದು ಹೇಳಿ ತೃಪ್ತಿಹೊಂದು" ಎಂದು ಅಧಿಕಾರಿಗಳೆಂದಾಗ, ಆ ಸಮಯ ವನ್ನೇ ಉಪಯೋಗಿಸಿ ಆ ತರುಣನು—ಈಗ ತರುಣನಾಗಿದ್ದ— ಆಕೆಗೆ ಸಮಾಧಾನ, ಪ್ರೀತಿ ತೋರುವ ಬದಲು, ಆಕೆಯ ಕಿವಿ ಕಚ್ಚಿಬಿಟ್ಟನಂತೆ! "ಎಷ್ಟು ಕ್ರೂರ, ನಿಷ್ಕರುಣಿ ಇವ; ತಾಯಿಯನ್ನೇ ಕೊನೆಗೆ ಹಿಂಸಿಸಿದನಲ್ಲ!" ಎಂದು ಕೂಡಿದ ಜನರು ಅಚ್ಚರಿ ತೋರ್ಪಡಿಸಿದಾಗ, ಅವನು ನುಡಿದು ದಿಂತು:— "ನೋಡಿರಿ, ಈ ನನ್ನ ತಾಯಿಯೇ ನಾನು ಚಿಕ್ಕ ಪುಟ್ಟ ಕಳವು ಮಾಡಿದಾಗ ದಂಡಿಸಿ ಸನ್ಮಾರ್ಗಕ್ಕೆ ಹಚ್ಚಿದ್ದರೆ, ನನಗೆಲ್ಲಿ ಈ ಘೋರ ವಿಪತ್ತು ಬರುತ್ತಿತ್ತು? ಈಗ ಆಕೆಗೆ ಅಸಹನೀಯ ದುಃಖ ಅನುಭವಿಸುವ ಭಾಗ ಏಕೆ ಬೀಳುತ್ತಿತ್ತು?"

ವೇದ ಕಾಲದಲ್ಲಿ ಆಚಾರ್ಯರು ಶಿಷ್ಯನನ್ನು ಅಧ್ಯಯನಾನಂತರ ಮನೆಗೆ ಕಳಿಸುವಾಗ— "ಸತ್ಯಂ ವದ, ಧರ್ಮಂ ಚರ; ಯಾನಿ ಅನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ, ನೋ ಇತರಾಣಿ; ಶ್ರದ್ಧಯಾ ದೇಯಂ ಅಶ್ರದ್ಧಯಾ ಅದೇಯಂ; ಯೇ ಕೇ ಚ ಅಸ್ಮತ್ ಶ್ರೇಯಾಂಸೋ

ಬ್ರಾಹ್ಮಣಾಃ ತೇಷಾಂ ತ್ವಯಾಽಸನೇನ ಪ್ರಶ್ವಸಿತವ್ಯಂ" ಎಂದು ಹೇಳುವ ಸಂಪ್ರದಾಯವಿದ್ದಿರಲಿಲ್ಲವೆ? ತಾಯಿಯಾದರೂ ಇದೇ ಬಗೆಯಾಗಿ ಮಗುವಿನ ಸ್ವಭಾವವನ್ನು ಚಿಕ್ಕಂದಿನಿಂದಲೂ ಗುರುವಿನೋಪಾದಿಯಲ್ಲಿ ತಿದ್ದಬಲ್ಲವ ಳೆಂಬುದಕ್ಕೆ ಮಹಾಭಾರತದ ಅಭಿಮನ್ಯುವಿನ ತಾಯಿಯ ದೃಷ್ಟಾಂತ ಹೇಳಬಹುದು. ಆಕೆಯ ಸ್ಫೂರ್ತಿ, ಬುದ್ಧಿಮತ್ತೆಯ ಮೂಲಕ ಅಭಿಮನ್ಯು ವೀರಾಗ್ರೇಸರನಾಗಿ ವೀರಮರಣವನ್ನೈದಿದ. ಹಿಂದಿನ ಯುಗ ಬಿಟ್ಟು ಐತಿಹಾಸಿಕ ರಂಗಕ್ಕೆ ಕಾಲಿಟ್ಟು ಸೂಕ್ಷ್ಮವಾಗಿ ನಿರುಕಿಸಿದರೆ, ಶಿವಾಜಿಯ ತಾಯಿಯಾದ ಜೀಜಾಬಾಯಿಯ ಕತೆ ನೆನಪಾಗುವುದು. ಆಕೆ ಕಲಿಸಿದ ಸದ್ಗುಣಗಳ ಫಲವಾಗಿ, ಅವನು ಗೋಬ್ರಾಹ್ಮಣ ಪ್ರತಿಪಾಲಕನಾಗಿ ಭಾರತ ದಾದ್ಯಂತ ಹಿಂದೂಧರ್ಮ ಸಂರಕ್ಷಿಸಿದ.

ತಾಯಿಯೆಂದರೆ ನಾಡು-ನುಡಿಯ ಪ್ರತೀಕವೆಂದಿಟ್ಟುಕೊಂಡಾಗ ಅದಕ್ಕಾಗಿ ಜೀವವನ್ನೇ ಮುಡಿಪಿರಿಸಿದ ಮಹನೀಯರ ಕತೆಗಳು ಇತಿಹಾಸದ ಪುಟಪುಟಗಳಲ್ಲಿ ನೋಡಲು ಸಿಕ್ಕುವವು. ಕೌರವ-ಪಾಂಡವರ ಮಹಾಕಾವ್ಯದ ಯುದ್ಧವಂತೂ ಜಗದ್ವಿಖ್ಯಾತವಾದುದು. ಅದು ನಾಡಿಗಾಗಿಯೇ ನಡೆದುದು. ತಾಯಿಯ ಉದ್ಧಾರವೇ ಅದರ ಉದ್ದೇಶ. ರಾಜಪೂತರು ಹಳದಿ ಬಟ್ಟೆ ಧರಿಸಿ ಹೆಂಡಿರು-ಮಕ್ಕಳನ್ನು ಕೊಂದು ಕತ್ತಿಯನ್ನು ಹಿಡಿದು ವೀರಾವೇಶದಿಂದ ಯುದ್ಧರಂಗಕ್ಕಿಳಿದುದು ತಾಯ ವಿಮೋಚನೆಗಾಗಿಯೇ ಅಲ್ಲವೆ? ಝಾಂಸಿ ಲಕ್ಷ್ಮೀಬಾಯಿ, ಕೆಳದಿಯ ರಾಣಿ, ಕಿತ್ತೂರ ಚನ್ನಮ್ಮರಂತಹ ಸ್ತ್ರೀಯರು ಸಹ ನಾಡಿಗಾಗಿ ಟೊಂಕಕಟ್ಟಿ ಹೋರಾಡಿ ಮಡಿದುದನ್ನು ನೆನೆದರೆ ತಾಯ ಪಾವಿತ್ರ್ಯದ ಕಲ್ಪನೆ ಇನ್ನೂ ಸ್ಫುಟವೆನಿಸೀತು!

ಮಾತೃತ್ವದ ಮರ್ಯಾದೆ ಎಷ್ಟೊಂದು ಪಾವಿತ್ರ್ಯದಿಂದೊಡಗೂಡಿದು ದೆಂಬುದಕ್ಕೆ ಮಹಾರಾಷ್ಟ್ರ ಇತಿಹಾಸದಲ್ಲಿಯ ಕತೆ ಹೇಳುವುದುಂಟು: ಶಿವಾಜಿಯ ನಂಬುಗೆಯ ಸರದಾರನಾದ ಆಬಾಜಿ ಸೋನದೇವ ಎಂಬವನು, ಕಲ್ಯಾಣ ಪ್ರಾಂತವನ್ನು ನುಗ್ಗಿ ಆಕ್ರಮಿಸಿದನಂತೆ. ಅಲ್ಲಿಯ ಸುಭೇದಾರ ಮೌಲಾನಾ ಅಹಮ್ಮದ ಎಂಬವನು. ಹೆಂಡತಿ, ರೂಪವತಿಯಾದ ಸೊಸೆ ಸಹಿತ ಅವನನ್ನು ಸೆರೆಹಿಡಿದು ತನ್ನ ಒಡೆಯನಾದ ಶಿವಾಜಿಯೆಡೆಗೆ ಆ ಸುಂದರ ಸೊಸೆಯನ್ನು ಕಾಣಿಕೆಯಾಗಿ ಉಬ್ಬಿನಿಂದ ಒಪ್ಪಿಸಿ ಹೊಗಳಿಕೆ

ಹೊಂದಲು ಹೋದಾಗ ಅವನು ನುಡಿದುದಿಷ್ಟೆ: "ಸೋನದೇವ, ಆಕೆಯನ್ನು ಓಲಗಕ್ಕೇ ಕರೆದುಕೊಂಡು ಬಾ." ಓಲಗಕ್ಕೆ ಆಕೆ ಬಂದಾಗ ಅರಸು ಆಕೆಯನ್ನುದ್ದೇಶಿಸಿ ನುಡಿದ: "ಈ ಅಕ್ಕನು ರೂಪವತಿಯಾಗಿರುವಂತೆ ನನ್ನ ತಾಯಿಯೂ ಆಗಿದ್ದರೆ, ನಾನಿನ್ನೂ ಎಷ್ಟು ರೂಪವಂತನಾಗಿ ಹುಟ್ಟುತ್ತಿದ್ದೆನಲ್ಲ!" ಕೂಡಿದ ಸಭೆ ಆಶ್ಚರ್ಯಚಕಿತವಾದಾಗ, ಅರಸು ಆಕೆಗೆ ಉಡುಗೊರೆ ಕೊಟ್ಟು ಗೌರವಿಸಿ ಪತಿಯೆಡೆಗೆ ಕಳುಹಿದ. ಇಂತಹ ಅಲೌಕಿಕ ಗುಣಗಳೇ ಮಹಾತ್ಮರ ಕೀರ್ತಿಯನ್ನು ದೇದೀಪ್ಯಮಾನವಾಗಿಸಿದುದರಲ್ಲಿ ಸಂದೇಹವಿಲ್ಲ!

ತಾಯಿಯ ವಾತ್ಸಲ್ಯದ ಆಳ ಹಾಗೂ ನೈಜತೆ ಅರಿಯಲು ನಾವು ರವೀಂದ್ರರ "ಕ್ಷುಧಿತ ಪಾಷಾಣ" ಎಂಬ ಕಥಾಸಂಕಲನಕ್ಕೆ ಮಾರು ಹೋಗಬೇಕು. ಅಲ್ಲಿಯ 'ಮಾಸ್ಟರ್ ಮಾಶಾಯ್' ಎಂಬ ಕಥೆಯ ಪ್ರಮುಖ ಪಾತ್ರ ಹರಲಾಲ ಅವನ ತಾಯಿ ಅವನನ್ನು ಬಹಳ ವಾತ್ಸಲ್ಯದಿಂದ ತನ್ನ ಹೊಟ್ಟೆಕಟ್ಟಿ ಕಲಿಸಿ ಕೆಲಸಕ್ಕೆ ಹಚ್ಚಿದಳು. ಆದರೆ ಅವನು ಮನೆಯಲ್ಲಿ ತಂದಿಟ್ಟ ಕಂಪನಿಯ ಹಣ ಹಿಂದಿನ ಶಿಷ್ಯ ವೇಣುಗೋಪಾಲ ಹೇಳದೆ ಕೇಳದೆ ಒಯ್ದಾಗ ಎಂತಹ ಆಪತ್ತು! ಅಪರಾಧಕ್ಕಾಗಿ ಪೋಲೀಸರು ಶೋಧ ನಡೆಸಿದಾಗ ತನ್ನ ಹೃದಯವನ್ನೇ ತೆರೆದು ತೋರಿಸಿ, ಅವನ ಪ್ರಾಮಾಣಿಕತೆಯ ಅರಿವು ಮಾಡಿಕೊಡಲು ಯತ್ನಿಸಿದಳು. ವಿಫಲವಾಯಿತು! ಹಾಗೇ 'ಮರಳಿ ಮನೆಗೆ' ಎಂಬಲ್ಲಿ, ಕಥಾನಾಯಕ ಫಟೀಕನು ಉಡಾಳ. ತಾಯಿ ಅವನ ಉಪಟಳಕ್ಕಾಗಿ ಬೇಸತ್ತು ಹೋಗಿರುವಳು. ಒಮ್ಮೆ ಅವನ ಕಕ್ಕನು ಬಂದಾಗ, ಹಳ್ಳಿಯಿಂದ ಕಲಕತ್ತೆಗೆ ಕಳಿಸಿಬಿಡುವಳು. ದಿನಗಳೆದಂತೆ ಬಾಲಕನಿಗೆ—ಈಗ ಹದಿನಾಲ್ಕು ವರುಷದ—ಬೇಜಾರು ತಲೆದೋರಿತು. ಶಾಲೆಯಲ್ಲಿ ಹಿಂದು ಬಿದ್ದ. ಹಳ್ಳಿಯಲ್ಲಿಯಂತೆ ಪಟ ಹಾರಿಸಿ ಮೋಜು ಮಾಡುವಂತಿಲ್ಲ; ಜೀವದ ಗೆಳೆಯರ ಕೊರತೆ. ಮೇಲೆ ಕಕ್ಕಿಯ ಅಸಹನೀಯತೆ. ಹೀಗಾಗಿ ಫಟೀಕನು ನಿರಾಶೆ ಹೊಂದಿ ಒಮ್ಮೆ ಧೋಧೋ ಎಂದು ಸುರಿಯುವ ಮಳೆಯಲ್ಲಿ ತನ್ನ ಹಳ್ಳಿಯ ದಿಕ್ಕಿನಲ್ಲಿ ಓಡಿದ. ಪೋಲೀಸರು ಅವನನ್ನು ಹಿಡಿದು ತಂದರು. ಅಂದೇ ಅವನಿಗೆ ಜ್ವರದಿಂದ ಎಚ್ಚರ ತಪ್ಪಿತು. "ಹಬ್ಬದ ದಿನ ಬಂದುವೆ? ಕಾಕಾ, ಊರಿಗೆ ಹೊರಡುವುದೇ?" ಎಂದು ಬಡಬಡಿಸಹತ್ತಿದ. ಗಾಬರಿಯಾದ ಕಕ್ಕ ಫಟೀಕನ

ತಾಯಿಯನ್ನು ಕರೆಸಿದ. ಹಿಂದಿನ ಅಲಕ್ಷ್ಯಭಾವ ಆಕೆಗೆ ಈಗೆಲ್ಲಿ? "ಘಟೀಕ, ನನ್ನ ಮುದ್ದುಮಗು, ಮಗು" ಎಂದು ಹಲುಬುತ್ತ ಆಕೆ ಬಿರುಗಾಳಿಯಂತೆ ಘಟೀಕನು ಮಲಗಿದ ಕೊಠಡಿಗೆ ಧಾವಿಸುವಳು. ತಾಯಿಯ ನೈಜ ಹೃದಯಕ್ಕೆ ಇದೊಂದು ಒಳ್ಳೇ ನಿದರ್ಶನವೆನ್ನಲು ಸಾಕು.

ತಾಯಿಯ ಪ್ರೀತಿಗೂ ತಂದೆಯ ಪ್ರೀತಿಗೂ ಅಜಗಜಾಂತರ ಉಂಟೆನ್ನಲು ನಾವು ಪೌರಾಣಿಕ ಕತೆಗಳನ್ನು ನೆನಪಿಗೆ ತಂದುಕೊಳ್ಳಬೇಕು. ಮಾದರಿಗೆಂದು ಜಮದಗ್ನಿ ಋಷಿಗಳ ಕತೆ ನೋಡಿದರೆ ಅವರು ಮಹಾ ಸಿಟ್ಟಿನವರು. ಹೆಂಡತಿ ರೇಣುಕಾ ತಪ್ಪಿತಸ್ಥಳೆಂದು ಅವರಿಗೆ ಸಂಶಯವು ದೃಢವಾದಾಗ, ಅವರ ಕಣ್ಣಿನಿಂದ ಪ್ರತ್ಯಕ್ಷ ಕಿಡಿಗಳೇ ಹೊರಸೂಸಿದುವಂತೆ! ಹೆಂಡತಿಯನ್ನು ಕಡಿದುಬಿಡಿರೆಂದು ಮಕ್ಕಳಿಗೆ ಆಜ್ಞಾಪಿಸಿದರು! ಪ್ರತಿಯೊಬ್ಬರೂ ಈ ಪಾತಕಕ್ಕೆ ಹೇಸಿಕೊಳ್ಳಲು ಪರಶುರಾಮನೊಬ್ಬನೇ ತಂದೆಯ ಮಾತನ್ನು ಮನ್ನಿಸಿದ. ಪಾಪ ಬಂದರೂ ಹೊಣೆ ತಂದೆಯದೆಂದು ನಂಬಿ ಕೊಂದ ಜಮದಗ್ನಿ ಋಷಿಗಳು ಮಗನ ಆಜ್ಞಾಧಾರಕತ್ವಕ್ಕೆ ತಲೆದೂಗಿ "ಒಂದು ವರ ಬೇಡಿಕೊ ಮಗು!" ಎನ್ನಲು ಆ ಚಾಣಾಕ್ಷ ಪರಶುರಾಮನು ತಾಯಿಯನ್ನೆ ಬದುಕಿಸೆಂದು ಬೇಡಿಕೊಂಡನಂತೆ! ತಂದೆಗಾದರೂ ತನ್ನ ಕೋಪಕ್ಕಾಗಿ ಪಶ್ಚಾತ್ತಾಪವೆನಿಸಿದ್ದೀತು! ತಾಯಿ ಬದುಕಿದಳು!

ಇಂತು ತಾಯ್ತನದ ರೂಪಗಳು ಅಸಂಖ್ಯಾತ ಹಾಗೂ ಮೋಹಕವಿರುವಾಗ, ಅವನ್ನು ತೃಪ್ತಿಕರವಾಗಿ ರೂಹಿಸುವುದು ಅಸಾಧ್ಯಕೋಟಿಯ ಸಂಗತಿಯೆ! ಅಂತೇ ಇಷ್ಟಕ್ಕೆ ವಿರಾಮವೆನ್ನದೆ ವಿಧಿ ಇಲ್ಲವಷ್ಟೆ!

# ವಿಶ್ರಾಂತಿ ಗೃಹ

ಮಲಗುವ ವೇಳೆ ಬಿಟ್ಟು ಯಾವಾಗಲೂ ವಿವಿಧ ಬಗೆಯ ಸ್ವರ ಸಮ್ಮಿಲನವಿರುವ ಸಾರ್ವಜನಿಕ ಕಟ್ಟಡವೇ (?) ವಿಶ್ರಾಂತಿಗೃಹವಿರಬೇಕೆಂದು ಬಾಲಕನೂ ಕೂಡ ಇಂದು ಥಟ್ಟನೆ ಹೇಳಬಹುದು ಉಪಹಾರ ಗೃಹ, ಫಲಾಹಾರ ಮಂದಿರ, Restaurant ಎಂಬ ಇನ್ನೂ ಅನೇಕ ಹೆಸರುಗಳು ಅದಕ್ಕೆ ಪ್ರಚಲಿತವಿದ್ದರೂ ಅದೊಂದು ಚಿಕ್ಕ ವಿಶ್ವವೇ ಎಂಬಲ್ಲಿ ಮತಭೇದವಾಗಲಾರದು ಆದರೆ ಮೃಚ್ಛಕಟಿಕ ಸಂಸ್ಕೃತ ನಾಟಕದ ಕರ್ತೃ ಯಾವ ಶೂದ್ರಕ ಎಂಬಲ್ಲಿ ಆದರೂ ಆದೀತು ಇಂತಹರಿಗೆ ! ಊರ ಮಧ್ಯದಲ್ಲಿದ್ದರಂತೂ ಈ ಕಟ್ಟಡಕ್ಕೆ ಕೆಲವು ವೈಶಿಷ್ಟ್ಯಗಳು ಇರಲೇಬೇಕು. 'Gentleness is indeed the outstanding test of gentlemanliness' ಎಂದು ಉಸಿರುವಂತೆ, ಇಂತಹ ಪ್ರತಿ ಅಂಗಡಿಗೂ ಸಾರವತ್ತಾದ ವೈಚಿತ್ರ್ಯವಿರುವದು ಸಹಜ. ಏನು ಇದ್ದು ಇನ್ನೇನೂ ಇರದಿದ್ದರೂ ವಿಶ್ರಾಂತಿ ಗೃಹದ ಒಡೆಯನ ದೇಶಪ್ರೇಮದ ಕುರುಹು ಅಲ್ಲಿಯ ನೆಹ್ರು, ಸುಭಾಸ, ಗಾಂಧೀಜಿಯವರ ಛಾಯಾ ಚಿತ್ರಗಳಲ್ಲಿ ಸ್ಫುಟವಾಗಿ ಮೂಡಿ ತೋರುವದು. ಎಷ್ಟಾದರೂ ಅವನೂ ನಮ್ಮಂತೆ ನಾಗರಿಕನಲ್ಲವೆ ? ನಾವೇ ಒಬ್ಬರು ಸುಶಿಕ್ಷಿತರೆ? ನಿನ್ನೆ ಮೊನ್ನೆ ಗೃಹದ ಉದ್ಘಾಟನೆಯಾದಂತೆನಿಸಿದರೂ ಹಲವಾರು ನಿಸರ್ಗ ಚಿತ್ರಗಳು ಅಲ್ಲಿ ಕಾಣಲೇಬೇಕು. ವ್ಯವಹಾರಕ್ಕೂ ಕಲೆಗೂ ನಿಕಟ ಸಂಬಂಧವಿದ್ದುದರ ದ್ಯೋತಕವಲ್ಲವೇ ಇವು ? ಲೋಕಪ್ರಿಯರಾದ ಇಬ್ಬರು ಮೂವರು

ಚಲಚ್ಚಿತ್ರ ತಾರೆಯರು ಅಲ್ಲಲ್ಲಿ ಗೋಡೆ ಅಲಂಕರಿಸಿ ಬಳಿಯಲ್ಲಿಯ ಕ್ಯಾಲೆಂಡರಿನಷ್ಟೇ ಆಕರ್ಷಕ ಎನಿಸಿದರೆ (ಯಾರಿಗೆ ?) ಪ್ರಮಾದವೇನು ? ಇಷ್ಟಿದ್ದರೂ ' ಜಾಗಾದ ಕೊರತೆಯ ಮೂಲಕ ವಿಶ್ರಾಂತಿ ಬೇಗ ಮುಗಿಸಿರಿ ' ಎಂದು ಸೌಜನ್ಯ ಹಾಗೂ ಲೋಕಾರೂಢಿಗೆ ತಿಳಕು ಹಾಕಿದ ಬೋರ್ಡು ತೂಗುತ್ತಿದ್ದರೆ ಇಪ್ಪತ್ತನೆಯ ಶತಮಾನದ ಈ ರಭಸದ ನಿತ್ಯ ಜೀವನದಲ್ಲಿ ಯಾವ ಸುಶಿಕ್ಷಿತ ಗಿರಾಕಿಗೂ ಅವಮಾನದ ಸೋಂಕೆನಿಸಬೇಕಿಲ್ಲ !

ಭರಪೇಟೆಯಲ್ಲಿಯ ಹಿರಿವಿಶ್ರಾಂತಿಗ್ರಹ ನೋಡುವವನಿಗೆ ಎರಡು ಕಣ್ಣು ಸಾಲವು. ' ದಿವ್ಯಂ ದದಾಮಿ ತೆ ಚಕ್ಷುಃ ' ಎಂದು ಗೀತೆಯ ಶ್ರೀಕೃಷ್ಣನು ಅರ್ಜುನನಿಗೆ ಆಶ್ವಾಸನೆ ಕೊಟ್ಟಂತೆ ನಮಗೂ ಸಾಧಿಸಿದರೆ ಈ ಸ್ವರ್ಗೀಯ ಸೌಂದರ್ಯಕ್ಕೆ ಎರವಾಗುವದಿಲ್ಲ. ' ಮಾಯಾವೀ ಇವ ಮಾಯಾಯಾಃ' ಎಂದು ಶ್ರೀಮತ್ ಶಂಕರಾಚಾರ್ಯರ ಸೃಷ್ಟಿಕರ್ತನ ಸ್ವರೂಪವಿರುವಂತೆ ಉಪಹಾರಗ್ರಹದ ಮಾಲಕನಿಗೂ ಕರ್ತುಮನ್ಯಥಾ ಕರ್ತುಂ ಶಕ್ತಿ ಇರುವ ದುಂಟು. ಮೂಲಸೃಷ್ಟಿ ಬ್ರಹ್ಮಸೃಷ್ಟಿಯಾದರೆ, ಇದು ವಿಶ್ವಾಮಿತ್ರನ ಸೃಷ್ಟಿ ಎಂದರೇನು ತಪ್ಪು ? ಅಲ್ಲಿಯ ಸಹಸ್ರದಲೋದ್ಭವ ಬ್ರಹ್ಮನು ಇಲ್ಲಿರದಿದ್ದರೂ ಇಲ್ಲಿಯ ಮಾಲಕನ ಠೀವಿ, ಎಂತಹ ಭವ್ಯ ಕಾರಖಾನೆಯ ಮಾಲಕನ ಠೀವಿಯನ್ನೂ ನಾಚಿಸುವದು. ಬಂಡವಲ-ಕೆಲಸಗಾರರ ಪ್ರಮಾಣ ದಲ್ಲಿಯಷ್ಟೇ ಅಂತರವೆನಿಸೀತು ! ಇಲ್ಲಿಯ ಸ್ಪೇಶಲ್‌ರೂಮ್ ಎಂದರೆ ಫ್ಯಾಶನ್ನಿನ ಕೇಂದ್ರವೇ ಸೈ. ಬಹುತರವಾಗಿ ನಾವು ಬೇರೆ ಹಾಲಿವುಡ್ ತಾರೆಯರ ಚಿತ್ರಪಟ ಸಂದರ್ಶಿಸುವ ಅಗತ್ಯವಿಲ್ಲ. ಗೆಳೆಯರ ನಡುವಿನ ವೈಮನಸ್ಸಿನ ಪರಿಹಾರ, ಹೊಲ ವ್ಯಾಪಾರದ ತಂಟೆಯ ನಿರ್ಣಯ, ಸಾಹಿತ್ಯಿಕ ಮಾತುಕತೆಯ ರಭಸ-ರಸರಂಜಿತ ಚರ್ಚೆ— ಎಲ್ಲ ಇಲ್ಲಿಯೇ ಅನಿರೀಕ್ಷಿತ ನಡೆಯಬೇಕು.

ವಿಶ್ರಾಂತಿಗ್ರಹ ಇಲ್ಲವೇ ಉಪಹಾರಗ್ರಹಕ್ಕೆ ತನ್ನ ಮಟ್ಟಿಗೆ ತನಗೆ ಹೇಳಿಕೊಳ್ಳುವಂತಹ ವೈಭವ, ಬೆಲೆ ಒಂದು ವೇಳೆ ಇದ್ದಿರಲಿಕ್ಕಿಲ್ಲ. ಆದರೆ ಮುದ್ದಣನ ರಾಮಾಶ್ವಮೇಧದ ವಸ್ತು ಸಾಮಾನ್ಯ ಚರ್ವಿತ ಚರ್ವಣ ವಿದ್ದರೂ ಕವಿಯ ಕೈವಾಡದ ಮೂಲಕ ಸುವರ್ಣ ಚೌಕಟ್ಟಿನ ಕಳೆ ಬಂದಂತೆ ವಿಶಿಷ್ಟ ಆವರಣದ ಮೂಲಕವೂ ಒಂದೊಂದು ಬಾರಿ ಒಂದೊಂದು ಅಂಗಡಿಗೆ

ಅಲೌಕಿಕ ಮೌಲ್ಯ ಉಂಟಾಗುವದುಂಟು. ದೈವೇಚ್ಛೆಯದು ! ಯೋಗಾಯೋಗವೆಂಬಂತೆ ಬಸ್ ನಿಲ್ದಾಣ, ಸಾಯಕಲ್ ನಿಲ್ದಾಣ ( ಬದಲಾಗುವ, ಕಳವಾಗುವ ಸ್ಥಳ ), ಟಾಂಗಾ ನಿಲ್ದಾಣ, ( ಪಾಸಾದುವು ) ನಾಟಕ (?) ಸಿನೇಮಾ ಥಿಯೇಟರ್ , ಸಲೂನ (ಆಯುಷ್ಕರ್ಮ ಶಾಲೆ ?), ಸ್ಟೂಡಿಯೊ, ಅಚ್ಚುಕೂಟ—ಇವೇ ಮೊದಲಾದವು ಈ ಮಂದಿರವನ್ನು ಸುತ್ತುವರಿದಿರುವವು. ಕೊನೆಯ ಎರಡು ಸಂಸ್ಥೆಗಳಂತೂ ಅತಿಶಯವಾಗಿ ಇದಕ್ಕೆ ಪೋಷಕವಾಗಿರುವವು. ಅಂಗಡಿಯ ಗಿರಾಕಿಗಳೇ ಪ್ರತಿದಿನ ತಮ್ಮ ಫೋಟೋ ಇಲ್ಲಿ ತೆಗೆಯಿಸಿಕೊಳ್ಳದಿದ್ದರೂ ಗಿರಾಕಿಗಳ ಬಿಲ್ ಪುಸ್ತಕ ಮಾತ್ರ ಸಮೀಪದ ಪ್ರೆಸ್ಸಿಗೆ ಬಾರದೇ ವಿಧಿ ಇಲ್ಲ ! ಇಬ್ಬರ ವ್ಯವಹಾರ ಹೇಗಿದ್ದರೂ ನಾಗರಿಕರು ಹೊಣೆಗಾರರಲ್ಲ ! ಕಿರಾಣಿ, ಕಬ್ಬಿಣ, ಉಕ್ಕಿನ ಅಂಗಡಿ ಅಕಸ್ಮಾತ್ ದೂರವಿದ್ದರೂ ಎಲೆಅಡಿಕೆ, ಬೀಡಿ ದುಕಾನಗಳು ಸುವರ್ಣ ಮಂದಿರಕ್ಕೆ (ಚಹದ) ದ್ವಾರಪಾಲರಾಗಿ ಪರಿಣಮಿಸಿರುವವು. ಸಾಕ್ಷಾತ್ ವಿಷ್ಣುವಿನ ಜಯವಿಜಯರೇನೋ ಅಲ್ಲಿಯ ಮಾಲಕರು !

ಇಂತಹ ಕ್ಯಾಫೆ-ಇಲೈಟ್ ಉಪಹಾರಗೃಹಕ್ಕೆ ಗಿರಾಕಿಗಳು ಎಷ್ಟು ಅವಸರದಲ್ಲಿ ಬಂದಿದ್ದರೂ (ಗಾಡಿಗೆ, ಮೋಟರಿಗೆ ಹೋಗುವದಿಲ್ಲದಿದ್ದಾಗ) ಪಾರ್ಟಿಯಲ್ಲಿ ತಲ್ಲೀನರಾದಾಗ ಪೇಪರಿನಿಂದ ಅಗಲುವದಿಲ್ಲ. ಅದೇ ಇಲ್ಲದಿದ್ದರೆ ಏನೊ ಹಳವಂಡವೆನಿಸುವದು ಸುಶಿಕ್ಷಿತನಿಗೆ— ಮೇಘದೂತದ ಯಕ್ಷನಿಗೆ ವಿಪ್ರಲಂಭ ಶೃಂಗಾರಾವಸ್ಥೆಯಲ್ಲಿ ಶೂನ್ಯತೆ ತಲೆದೋರಿದಂತೆ ! ಪತ್ರಿಕೆಗಳು ನಿಜವಾಗಿಯೂ ಅಷ್ಟೇ ವೇಳೆಯಲ್ಲಿ ಅಂದಿನವೇ ಇಂತಹ ಭಾಷೆಯವೇ ಸಿಗಬೇಕೆಂಬ ನಿಯಮವಿಲ್ಲ. ಏನಾದರೂ ಇರಬೇಕು. ಒಮ್ಮೊಮ್ಮೆ ನಿರುದ್ಯೋಗಿಗಳೇ (ಉಂಡುಟ್ಟು ಸುಖದಿಂದಿರುವವರು) ಅಂಗಡಿಗೆ ನಿರಾತಂಕವಾಗಿ ಬಂದು ಕುಳಿತರೆ ಮಾಣಿಯೊಡನೆ ಅವರ ಹರಟೆ ನಿರರ್ಗಳವಾಗಿ, ವೆಗ್ಗಳವಾಗಿ ಸಾಗುವದು— ಜಲಪಾತದಂತೆ ! ಅವನ ಸಂಬಳ, ವಿರಾಮಕಾಲ, ಕುಲಗೋತ್ರ (ವಿವಾಹಕ್ಕಲ್ಲ!) ವಯಸ್ಸು, ವ್ಯವಸಾಯದ ಅನುಭವ ಎಲ್ಲ ವಿಷಯ ನುಗ್ಗಿ ಹೋಗುವವು ! ಎಲ್ಲ ಮಾಣಿಗಳು ಇಷ್ಟೇ ಸಲುಗೆ ಬೆಳಸಿಕೊಳ್ಳಲಿಕ್ಕಿಲ್ಲ. ಮುಂಗೋಪಿಗಳ ಹೆಮ್ಮೆಯವರ ತಂಡವೇ ಬೇರೆ! ಅವರೆಲ್ಲ ಬರಿ ನೌಕರರು. ಹೃದಯವಂತಿಕೆ ರಸವಂತಿಕೆಯುವರಲ್ಲ. ಕೇವಲ

ಸೂತ್ರದ ಬೊಂಬೆಗಳು— ಇಬ್ಸೆನ್ನನವಲ್ಲ ! ಚಲಚ್ಚಿತ್ರದ ಜಾಹಿರಾತು ಗಳು, “ ಆರೋಗ್ಯ ಮತ್ತು ಸುಖಕ್ಕಾಗಿ ಸೇದಲೇಬೇಕಾದ ಬೀಡಿಗಳ ಪ್ರಕಟನೆ, ಪೌರಾಣಿಕ ಪಾತ್ರಗಳಿದ್ದರೂ ಹೊಣೆಗೆಟ್ಟ ಕಲಾವಿದರ (?) ಕೈಗೆ ಸಿಕ್ಕು ಅರ್ಧ ನಗ್ನವಾಗಿರುವ ಚಿತ್ರಗಳು, ಬೇಟೆಯ-ನೌಕಾಪರ್ಯಟನದ ದೃಶ್ಯ, ಅಪ್ಸರೆಯರ ವಿವಿಧ ಭಂಗಿಗಳು, ಪೈಲ್ವಾನರ ನಿಲುವುಗಳು — ವಿರಾಮ ಕಾಲದ ರಸಿಕರನ್ನು ತಣಿಸಿಬಿಡುವವು. ಮನೆ ಮಾರು ಮರೆಸಿಬಿಡುವವು— ನಿರಂತರವಲ್ಲ! ವಿಶ್ವಾಮಿತ್ರ ಮೇನಕೆ, ನಳ ದಮಯಂತಿ, ಸಮುದ್ರಮಥನ, ರಾಮರಾವಣರ ಕಾಳಗ, ಶಿವ ತಾಂಡವ ನೃತ್ಯ ಇವನ್ನಾರು ಈ ಯುಗದಲ್ಲಿ ಶ್ರದ್ಧೆಯಿಂದ ಕಣ್ಣೆತ್ತಿ ನೋಡಿಯಾರು ? ಮೊದಲಿದ್ದವೆಂದು ಇಂದಿಗೂ ಅವು ಗೋಡೆಯನ್ನಲಂಕರಿಸಿವೆ ಅಷ್ಟೆ !

ಬೇರೊಂದು ದೃಷ್ಟಿಯಿಂದ ವಿಶ್ರಾಂತಿಗ್ರಹವನ್ನು ನಾವು ಕಡೆಗಣಿಸ ಲಾಗದು. ಒಂದು ವೇಳೆ ಸೂರ್ಯ ಹುಟ್ಟಿ, ಅವನ ಹೊಂಬಣ್ಣದ ಕಿರಣಗಳು ಬೇರೆಡೆ ಹರಡಿದ್ದು ನಮ್ಮ ಮೋರೆಯ ಮೇಲೆ ಬೀಳದೆ ಹೋಗಬಹುದು. ಎಚ್ಚರಾಗಲಿಕ್ಕಿಲ್ಲ. ಕೋಳಿಯೂ ಒಮ್ಮೆ ಬೆಳಗಿನ ಇಂತಹ ಮುನ್ಸೂಚನೆ ಕೊಡಲು ಮರೆತೀತು. ಆದರೆ ಉಪಹಾರಗ್ರಹ ಮಾತ್ರ ಅತೀವ ವಾತ್ಸಲ್ಯದಿಂದ ( ತಾಯಿಯನ್ನು ಮೀರಿಸಿಯೂ ಕೂಡ ) ನಮ್ಮನ್ನು ಗಾನ ಸುಧೆಯಿಂದ ಆಹ್ವಾನಿಸುವುದು. ಕೆಲವರನ್ನೇ ಎಂಬ ಕುತ್ಸಿತವೃತ್ತಿ restaurantಕ್ಕಿಲ್ಲ. ‘ಸಮತೆಯ ಕಲಿಸುವ ಶಾಲೆಯಿದು’. ಅಂತೇ ಕೂಲಿಯ ಯವನಿಂದ ಹಿಡಿದು ಹಿರಿ ನೌಕರರವರೆಗೂ ಎಲ್ಲರಿಗೆ— ಗಂಡು ಹೆಣ್ಣು ಭೇದವಿಲ್ಲದೆ—ಇದರ ಬಗೆಗೆ ವಿಲಕ್ಷಣ ವ್ಯಾಮೋಹವೆನಿಸಿದೆ. ‘A thing of beauty is a joy forever’ ಎಂದು ಕೀಟ್ಸ್ ಕವಿ ಹೇಳಲಿಲ್ಲವೆ ರಸಿಕರಿಗೆ ? ರಸಿಕತೆಯೆಂದರೆ ಕಾವ್ಯದ ರಸಿಕತೆಯಲ್ಲ ಮತ್ತೆ ! ವಿಶ್ರಾಂತಿ ಗ್ರಹದ ಶುಚಿ ರುಚಿ (?) ತಿಂಡಿ ತಿನಸುಗಳಿಂದಲೇ ಉದ್ಭವಿಸಿದ್ದು.

ವಿಶ್ರಾಂತಿಗ್ರಹ ಜನಜೀವನದ ಉಸಿರೆಂದರೆ ಬಹು ಜನ ಒಪ್ಪುವ ಮಾತು. ಬಹುಶಃ ಎರಡು ದಿನ ಜೋಗ ವಿದ್ಯುತ್ತಿನ ದೀಪ ಕಣ್ಣು ಮುಚ್ಚಿ ದಾಗ ನಗರದಲ್ಲೆಲ್ಲ ಇರುಳು ಅಷ್ಟು ಹಾಹಾಕಾರವೆದ್ದಿರಲಿಕ್ಕಿಲ್ಲ. ಆದರೆ ಅಷ್ಟೇಕಾಲ ಉಪಹಾರ ಗ್ರಹ ( ಎಲ್ಲ ) ಮುಚ್ಚಿಹೋದರೆ ಹಗಲಿರುಳು

ಎಂತಹ ತೊಡಕು! ಅದನ್ನವಲಂಬಿಸಿ ಜೀವಿಸಿದವರಿಗೆ ಆ ವ್ಯಥೆ (ವಿರಹವೆ?) ಗೊತ್ತು. ಪೇಟೆಯಲ್ಲಿ ಕಾಳಿನ ಬೆಲೆ ಕಣ್ಣು ತಿರುಗುವಷ್ಟು ಏರಿದಾಗ ಹಲವರಿಗೆ ಲಕ್ಷ್ಯ ಹೋಗಲಿಕ್ಕಿಲ್ಲ, ಆದರೆ ಈ ಸಾರ್ವಜನಿಕ ಕಲ್ಯಾಣ ಮಂದಿರಗಳು ದಿನಗಟ್ಲೆ ಮುಚ್ಚಿಹೋದರೆ ಜನರ ಕಣ್ಣೇ ಮುಚ್ಚಿದಂತೆ ನಿಸುವದಲ್ಲವೆ ?

ಚಹದ ಅಂಗಡಿ ಮುಚ್ಚಿದರೇನಾಯಿತು— ಫೇಡೆ ತಿಂದರಾಗುವದಲ್ಲವೆ ? ಅದು ಆರೋಗ್ಯಕ್ಕೆ ಹಿತ ಎಂದು ವಾದಿಸುವವರನ್ನು ಇಂದು ಹುಚ್ಚರೆಂದು ಉಳಿದವರು ಸಂಬೋಧಿಸುವರು. ಆಸ್ಪತ್ರೆಯಲ್ಲಷ್ಟು ಮಾತ್ರ ಅವರು ಇದ್ದಿರಲಿಕ್ಕಿಲ್ಲ ! ಹರಿಶ್ಚಂದ್ರ ಹೊಲತಿಯರ ಸಂವಾದ ಅವರಿಗೆ ನೆನಪುಮಾಡಿ ಕೊಡುವವರುಂಟು. ಬಹುಜನ ಸಮಾಜಕ್ಕೆ ಬೇಕಾದುದು ಒಳ್ಳೇ ಪೇಯ. ಅಂಗಡಿಯ ಚಹ ತಿನಸು— ಎಂಬದಕ್ಕೆ ಆ ಸನ್ನಿವೇಶ ಬಣ್ಣಿಸುವರು. ದರಿದ್ರಗೆ ಕಡವರ, ರೋಗಿಗೆ ಅಮೃತ, ಡಗೆಸುತ್ತಿ ಸಾವಡಿಸಿದವನಿಗೆ ನೆರಳು ಬೇಕು, ನೀರಡಿಸಿದವನಿಗೆ ತುಪ್ಪ ಕೊಟ್ಟರೆ, ಏನು ಪ್ರಯೋಜನ ?— ಹೀಗೆ ಚಹದ ಬೆಲೆ ಚಹಕ್ಕೆ, ಮಿಠಾಯಿಯದು ಮಿಠಾಯಿಗೆ— ಎಂದು ಗಂಟೆಗಟ್ಲೆ ವಾದಿಸುವವರುಂಟು. ಅಂತೇ ವಿಶ್ರಾಂತಿ ಗ್ರಹಕ್ಕೆ ಮನಸೋತು ಅಲ್ಲಿಯ ಕಂಪಿನ ದೋಸೆ ಟೋಸ್ಟಿಗಾಗಿ ಮಡಿವಂತಿಕೆಯಲ್ಲಿಯೂ ಇಳಿವಯಸ್ಸಿನಲ್ಲಿಯೂ ಕೊಂಚ ಶಿಥಿಲತೆ ವೈಗೂಡಿಸಿಕೊಂಡವರು ಇರುವರೆಂದ ಮೇಲೆ ಬೇರೆ ಮಾತು ಏಕೆ? 'Eat, drink and be merry' ಎಂಬ ಆಶಯದ 'epicurrean' ತತ್ವಗಳನ್ನು ಎದೆಗವಚಿಕೊಳ್ಳುವವರ ಮನಸ್ಸು ' ಅರಂಕುಸವಿಟ್ಟರೂ' ಆ ವಿಶ್ರಾಂತಿ ಗೃಹವನ್ನೇ ನೆನೆಯುವದು. 'More things are wrought by restaurants than this world ever dreams of' ಎಂದು ಟೆನಿಸನ್ ಕವಿಯ ಮಾತನ್ನೇ ಬದಲಿಸಿ ಕೊನೆಗೆ ಹೇಳಿದಾಗಲೇ ವಿಶ್ರಾಂತಿ ಗ್ರಹದ ಸಾಮಾಜಿಕ ಅಂತಸ್ತು, ದಿವ್ಯತೆ ಅನಿವಾರ್ಯತೆಯ ಅರಿವಾಗುವದಲ್ಲವೆ? ಅದೇ ಮಾತನ್ನು ವಿರೋಧಿಸಿ ಎಷ್ಟು ವಿಧವಾಗಿ ಉಸಿರಿದರೇನು ಬಂದಿತು? ಪರಿಶ್ರಮವಷ್ಟೇ ಅಲ್ಲವೆ ? ಸುವರ್ಣಕ್ಕೆ ಕುಂದಣ ಕೂಡಿಸಿದಂತೆ, ಬಾನುಲಿಯ ಪೆಟ್ಟಿಗೆ ಎದುರು ವಿಶ್ರಾಂತಿಗ್ರಹದೊಡೆಯನ ಅಪೂರ್ವ

ಸ್ನೇಹವೂ ಬೆರೆತುದಾದರೆ, 'ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ' ಎಂದು ಸರ್ವಜ್ಞನ ನುಡಿ ನೆನಪು ಮಾಡಿಕೊಳ್ಳುವ ಮಹನೀಯರಿದ್ದಿದ್ದಾರು. ಅವನು ಸಂಗೀತ ಕಚೇರಿ, ಸುದ್ದಿ, ಕ್ರೀಡಾರಂಗ, ಸಾಹಿತ್ಯ ವಿಮರ್ಶೆ, ನಾಟಕ, ಚಿತ್ರಪಟಗಳಲ್ಲಿ ಆಸ್ಥೆಯುಳ್ಳವನಿದ್ದ ಸುಶಿಕ್ಷಿತನಿದ್ದರೆ (ಸಿರಿವಂತನಿರಲೂ ಸಾಕು) ಬೇರೆಡೆಯ ಗೆಳೆತನವೇ ಅನವಶ್ಯಕವಾಗಿ ಅವರಿಗೆ ಎನಿಸಿದರೇನು ಅಸಹಜ? ವಿಶ್ರಾಂತಿಗೃಹ, ಇಂತು ಸಂಸ್ಕೃತಿಯ ಜೀವಾಳವೆನಿಸಿ ಸ್ಫೂರ್ತಿಯ ಆಗರವಾಗಿ ಪರಿಣಮಿಸಿದರೆ ಅದರ ಸಾಮಾಜಿಕ ಮನ್ನಣೆಗೆ ಕೊರತೆ ಎಲ್ಲಿ? ಅಂತಹ ಭಾಗ್ಯದ ದಿನಗಳೂ ಬಂದಾವು! ನಿರಾಶಾವಾದ ವೇಕೆ?

# ನಾನು

"ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜ್ಯಂ ಕರ್ಮ ಚಾಖಿಲಂ" ಎಂಬ ಗೀತೋಕ್ತಿಯನ್ನು ಶ್ರದ್ಧೆಯಿಂದ ಓದುವಾಗ "ನಾನು" ಎಂಬ ಮೋಹಕ್ಕೊಳಗಾಗುವದು ಸರ್ವಥಾ ಅನಿಷ್ಟಕಾರಕ ಎಂಬ ಕಲ್ಪನೆ ಆಗಾಗ ಮೂಡಿ ಮಾಯವಾಗುವದುಂಟು. ಆದರೆ ವ್ಯಾವಹಾರಿಕ ಪ್ರಪಂಚ ಬೇರೆ, ಆಧ್ಯಾತ್ಮಿಕ ರಂಗ ಬೇರೆ ಎಂದು ಮನಗಂಡಾಗ ವ್ಯಕ್ತಿ ತನ್ನನ್ನು ತಾನು ಮರೆತರೆ ಕ್ಷಣವೂ ಪ್ರಗತಿಯ ಮಾರ್ಗದಲ್ಲುಳಿಯಲಾರನೆನಿಸುವದು. ಅಂತಹ ವ್ಯಾಪಕತೆ ಸಂಮ್ಮೋಹಕತೆ ನಾನು ಎಂಬ ಪದದಲ್ಲಿ ಹುದುಗಿದೆ ಎಂಬಲ್ಲಿ ಸಂದೇಹವಿಲ್ಲ.

"ನಾನು" ಎಂಬುದೇ ಪ್ರಚಂಡವಾಗಿ ಪರಿಣಮಿಸಿದ ಕುಟುಂಬದ ಮಾತೆತ್ತಿದಾಗ ತಮ್ಮ ಧ್ವಜವನ್ನೇ ಮೆರಿಸಲೆಳಿಸದ ಗಂಡೂ ಇಲ್ಲ ಹೆಣ್ಣೂ ಇಲ್ಲ ಎಂಬುದು ಕಂಡುಂಡ ಸಂಗತಿ. ಅತ್ತೆ, ತನ್ನ ಸೊಸೆಯ ಮುಂದೆ ತನ್ನ ಜಂಭ ಕೊಚ್ಚಿಕೊಂಡು ಮೂಗು ಮೇಲೆ ಮಾಡಿಕೊಳ್ಳದಿರುವಳೆ? ತನ್ನ ನಯ ವಿನಯ, (ಔದ್ಧತ್ಯದ ಕಳಸ ಮುಟ್ಟಿದ್ದರೂ!) ಆಚಾರ ವಿಚಾರ, ನಿರಾಡಂಬರ, ಕೌಶಲ, ದೌಲತ್ತು— ಪ್ರಸಂಗ ಬಂದಾಗೆಲ್ಲ ತೂರಿಕೊಳ್ಳದಿದ್ದರೆ ಆಕೆಯ ಅಸ್ತಿತ್ವಕ್ಕೆ ಬೆಲೆ ಎಲ್ಲಿ? ಹೇಳಿ ಕೇಳಿ ಹೆಂಗಸೆಂದ ಮೇಲೆ ಮಾತಿನ ಮಾಲಿಕೆಯಲ್ಲಿ ಆಕೆಯ ಸಡಗರ ವ್ಯಕ್ತವಾಗಲೇಬೇಕು. ಹಿಂದಿನ ಕಾಲದ ಮಹಿಳೆಯರ ಗತಿ ಇದೆಂದು ಈಗಿನ (ಸುಸಂಸ್ಕೃತರು)ನವರು ಉದ್ಗಾರ ತೆಗೆದರೂ ತಪ್ಪಿಯಾದರೂ ವ್ಯಕ್ತಿತ್ವದ ಹಿರಿಮೆಯ ವಿವೇಚನೆಗೆ ಎಡೆ ದೊರೆಯಲೇಬೇಕು.

ಕೇವಲ ಹೆಣ್ಣುಮಕ್ಕಳಷ್ಟೇ ತಮ್ಮ ಬಗ್ಗೆ ಹೇಳಿಕೊಳ್ಳುವದರಲ್ಲಿ ಸಂತಸಬಡುವರೆಂದರೆ ಇಂದಿನ ಇಪ್ಪತ್ತನೆಯ ಶತಮಾನದ ನವನಾಗರಿಕತೆಯು. ಪ್ರಜಾಪ್ರಭುತ್ವದ ಮನ್ವಂತರದಲ್ಲಿ ಅಳಿಸಲಾಗದ ಅನಾಹುತವಾದೀತು! ಎಷ್ಟು ಕಲಿತಿದ್ದರೂ (ವಿಶ್ವವಿದ್ಯಾಲಯ ಶಿಕ್ಷಣವಲ್ಲ ಮತ್ತೆ!) ಮನೆಯೊಡೆಯ ಗ್ರಹಸ್ಥಾಶ್ರಮಿಯು ತನ್ನ ಕರ್ತೃತ್ವಶಕ್ತಿಯ ಮೆರವಣಿಗೆ ಮಾಡಿಯೇ ತೀರುವನು. ತಿಳಿಯದಲೆ ಎನ್ನಿರಿ ಬೇಕಾದರೆ! ತಾನು ಹೊತ್ತ ಸಂಸಾರದ ಭಾರ, ಹೊಲ ಮನೆ ತೂಗಿಸಿದ ಜಾಣ್ಮೆ, ಸಮಾಜದಲ್ಲಿ ಗಳಿಸಿದ ಹಿರಿಮೆ, ಮನುಷ್ಯನಾಗಿ ಸಮಾಜಜೀವಿಯಾಗಿ ಬಾಳಲು ಪಟ್ಟ ಕಷ್ಟನಷ್ಟ— ಎಲ್ಲವನ್ನೂ ಅವನು ಇರುಳು ಊಟವಾದ ಮೇಲೆ ಮನೆಯ ಕಟ್ಟೆಯ ಮೇಲೆ ಕುಳಿತು— ಸಾಧ್ಯವಿದ್ದರೆ ಎಲೆಯಡಿಕೆ ಬಾರು ಮಾಡಿ— ಸಭಿಕರ ಮಧ್ಯೆ ರಂಜಕವಾಗಿ ವಿವರಿಸುವನು. ಹಾಗೇ ಹಳ್ಳಿಯ ಹಿರಿಯ ಆಡಳಿತಗಾರ ಗೌಡ, ತನ್ನ ಹಳ್ಳಿ ಸಾಕ್ಷಾತ್ (?) ರಾಮರಾಜ್ಯವಾಗಲು ತಾನು ಹೆಣಗಿದುದೆಷ್ಟು ಎಂಬುದನ್ನು ಅವನು ಚಾಚೂ ತಪ್ಪದೆ, ಉಪ್ಪುಕಾರ ಹಚ್ಚಿ ಬಣ್ಣಿಸಿ ಹಳ್ಳಿಗರನ್ನು ಮುಗ್ಧರನ್ನಾಗಿಸದಿದ್ದರೆ (ಬಾಯಿ ತೆರಿಸದಿದ್ದರೆ) ಅವನು ನಿಜವಾದ ಆಡಳಿತಗಾರನೇ ಅಲ್ಲ! ಊರಲ್ಲಿ ಎಷ್ಟೇ ಒಡಕು ಒಳಸಂಚು ಸ್ಪರ್ಧಾಬುದ್ಧಿ ನೆಲೆಯೂರಿದ್ದರೂ ತನ್ನ ದೈವೀ ವ್ಯಕ್ತಿತ್ವದ ಪ್ರಭಾವವನ್ನವನು ಬಿಂಬಿಸುವುದೇ ಸಹಜ!

ನಾನು ಎನ್ನುವ ಕಲ್ಪನೆ ಇಷ್ಟು ಬ್ರಹದ್‌ರೂಪ ತಳೆದಿದ್ದರೂ ಸಂಸ್ಕಾರವಂತ ವ್ಯಕ್ತಿಯ ಮನಃಸ್ಥಿತಿಯೇ ಬೇರೆ. ತನ್ನ ಬಗ್ಗೆ ತಾನು ಅಂತರ್ ನಿರೀಕ್ಷಣೆ ಮಾಡಿಕೊಳ್ಳತೊಡಗಿದಾಗ (ಮಧ್ಯ ವಯಸ್ಕನಾದಾಗ) ವ್ಯಕ್ತಿ ತನ್ನ ಬಾಲ್ಯದ ಸವಿನೆನಹನ್ನು ಮರೆಯಲಾರ. "The days of our youth are the days of our glory." ಎಂದು ಬೈರನ್ ಮಹಾಕವಿ ಉದ್ಗಾರ ತೆಗೆದುದು ಅಚ್ಚರಿಯ ವಿಷಯವೇನಲ್ಲ. ಅವೆಲ್ಲ ಸುವರ್ಣ ದಿನಗಳೇ. ಆಗೆಲ್ಲಿ ಸಂತೆಯ ಚಿಂತೆ? ಬೈಗು ಬೆಳಗು ಆಟ; ಬರೀ ಆಟ. ಇಲ್ಲವೇ ಸರಿಕರೊಡನೆ ಜಗಳಾಟ. ಪ್ರಣಯಕಲಹಕ್ಕೆ ಸಮೀಪವರ್ತಿ ಎಂದರೂ ಪಾಪವಿಲ್ಲ! ತೀರ ಚಿಕ್ಕವರಿದ್ದಾಗ ಆಡಿದ ಗುಂಡು ಗಜಗ, ಚಿಣಿಫಣಿ, ಸರಬಡಿಗಿ ಆಟಗಳ ಮೋಜು ಮರೆವುದೆಂತು? ಕೋಕಿಲೆಯ ಇನಿದನಿಯನ್ನು

ಅಣಕಿಸುತ್ತ ಅದನ್ನೇ ಅರಸುತ್ತ ಗಿಡದಿಂದ ಗಿಡಕ್ಕೆ ಅಲೆಯುವದು, ಕಡ್ಡಿ ಪೆಟ್ಟಿಗೆಯಲ್ಲಿ ಭೋರಂಗಿ ಹಾಕಿಡುವದು, ಉಸುಕಿನಿಂದ ಗುಬ್ಬಿಯ ಗೂಡು ಕಟ್ಟುವದು, ಗಿಡಮಂಗ ಆಟದಲ್ಲಿ ತಮ್ಮನ್ನೆ ತಾವು ಮರೆಯುವುದು ತೀರ ಸಾಮಾನ್ಯ ಚಟುವಟಿಕೆಗಳು. ಸಣ್ಣ ಸಣ್ಣ ಮಾತಿನ ವಿರಸದ ಮೂಲಕ ಪಾಲಾ ಫೂ ಬಿಟ್ಟು ಹಿಂದುಗಡೆ ಕೂಡಿದ್ದು ನೈಜ ರಸನಿಮಿಷವೇ ಸೈ! ಆ ವಯಸ್ಸಿಗೇ ಅನುಗುಣವಾದ ಸ್ವಭಾವದ ರೀತಿಯದು. ದೊಡ್ಡವರಾಗಿ ಸಾಮಾಜಿಕ ಪ್ರಜ್ಞೆ ಮೈಗೂಡಿ ಹೋದಂತೆ ಎಲ್ಲವೂ ಹಿಂದಿನದು ನಗೆಗೀಡು, ವಿಡಂಬನೆ ಎನಿಸುವುದು ಸರಿಯೇ.

ಮನುಷ್ಯನು ಬೆಳೆದು (ದೈಹಿಕ, ಮಾನಸಿಕ ರೀತಿಯಿಂದ) ಎಷ್ಟೇ ದೊಡ್ಡವನಾಗಲಿ, ತಾನೇ ತಾನಾದಾಗ ನಡೆದುಕೊಳ್ಳುವ ಬಗೆಯೇ ವಿಲಕ್ಷಣವಾದದ್ದೆನ್ನಬೇಕು. ಏಕಾಂತದಲ್ಲಿ ಮನುಷ್ಯನು ತೀರ ಸ್ವಾತಂತ್ರ್ಯ ಜೀವಿಯಾಗಿರುವದಿಲ್ಲವೆ? ಸಮಾಜದಲ್ಲಿ ಹಿಂದು ಮುಂದು ನೋಡಬೇಕಾ ದಂತೆ ಆಗಿನ ಕಾಲದಲ್ಲಿ ಅವಶ್ಯಕತೆ ಇರುವದಿಲ್ಲ. ವೇಷ ಭೂಷ ಸರಿಪಡಿಸಿ ಕೊಂಡು ವಿಕ್ಷಿಪ್ತತೆಯಿಂದ ಒಂದಿಲ್ಲೊಂದು ಬಗೆಯಾಗಿ ರಂಗತಾಲೀಮಿಗೆ (rehearsal) ಮನಸೋಲುವದು ಸ್ವಾಭಾವಿಕ. ಲೇಖಕನಿದ್ದರೆ ಹತ್ತಾರು ಸಲ ಬರೆದದ್ದನ್ನು ತಿದ್ದಿಕೊಳ್ಳುವ. ಮಾತುಗಾರನಿದ್ದರೊ ತೀರಿಯೇ ಹೋಯಿತು! ನಾಲ್ಕು ಗೋಡೆಗಳ ಮಧ್ಯೆ ಕನ್ನಡಿಯ ಮುಂದೆ ನಿಂತು (ಬಾಗಿಲು ಇಕ್ಕಿರುವದು) ಹಾವಭಾವದೊಡನೆ, ಧ್ವನಿಯ ಏರಿಳಿತ ನಾಟಕೀಯತೆಯೊಡನೆ, ಮಾತು ಪಾಠು ಮಾಡಿದ್ದೇ ಮಾಡಿದ್ದು! ಇದೇ ಮುಂದೆ ರಾಜಕೀಯ ರಂಗದಲ್ಲಿ ಅವನಿಗೆ ಬಂಡವಲು ಆಗಿ ಪರಿಣಮಿಸಿದರೆ ಅಂತಹ ಪ್ರಮಾದವೆನಿಸದು!

ನಾನು ಎಂಬ ಕಲ್ಪನೆಯಿಂದ ಇಷ್ಟೊಂದು ಅನರ್ಥವಾಗಿದೆ ಎಂದು ವೇದಾಂತಿಯಂತೆ ಎಲ್ಲರೂ ಗ್ರಹಿಸಿದ್ದರೆ ಜಗತ್ತೇ ನಡೆಯುತ್ತಿದ್ದಿಲ್ಲವೇನೊ! ತಿಳಿಯದೆಯೇ ಎಲ್ಲರೂ ಅದಕ್ಕೆ ಕಟ್ಟುಬಿದ್ದಿರುವರೆಂದು ಜಾಗತಿಕ ಸಾಹಿತ್ಯ ನಿರ್ಮಿತಿಯಾಗಿದೆಯಲ್ಲವೆ? ಮಹಾಕಾವ್ಯದ ಕಾಲದಿಂದ ಪರಿಕಿಸುತ ಸಾಗಿದರೆ ನನ್ನತನವೇ ಎಲ್ಲಕ್ಕೂ ಮೂಲವೆನಿಸುವದು. ಪಾಂಡವರೂ, ಕೌರವರೂ ಇಬ್ಬರೂ ಮಮತ್ವವನ್ನು ಗಾಳಿಯ ಪಟ ಮಾಡಿಬಿಟ್ಟಿದ್ದರೆ

ಗಿಲ ಪರ್ವಗಳ ಉಜ್ವಲ ಕತೆಯ ರಚನೆಯಾಗುತ್ತಿತ್ತೆ ? ಪಾಪ ! ವ್ಯಾಸರೂ ನಿಶ್ಚಿಂತರಾಗಿರುತ್ತಿದ್ದರು ! ಹಾಗೆಯೇ ಜಗದ್ವಂದ್ಯ ಶಾಕುಂತಲಾ ನಾಟಕ ದಲ್ಲಿ ದೂರ್ವಾಸರು ನಿಜವಾಗಿಯೂ ಸಂನ್ಯಾಸಿಗಳಂತೆಯೇ ಸರ್ವಸಂಗ ಪರಿತ್ಯಾಗ ಮಾಡಿ ಸಾತ್ವಿಕ ರೀತಿಯಿಂದ ಅಲಕ್ಷ್ಯತೆಯ ಅವಮಾನ ಸಹಿಸಿ ದ್ದರೆ ಶಾಪಕ್ಕೆ ಎಡೆ ಎಲ್ಲಿ ದೊರೆಯುತ್ತಿತ್ತು ! ಅಭಿಜ್ಞಾನದ ಪ್ರಶ್ನೆಯೇ ಏಳುತ್ತಿರಲಿಲ್ಲ ! ದುಷ್ಯಂತನೂ ಮಹಾಸಾಗರದಂತೆ ಗಂಭೀರನಾಗಿಯೇ ಉಳಿಯುತ್ತಿದ್ದ ! ಇನ್ನುಳಿದ ಏರಿಳಿತಗಳೊ ? ಹೇಳಹೆಸರಿಲ್ಲದಾಗುತ್ತಿದ್ದವು. ಶೆಕ್ಸಪಿಯರ ಮಹಾ ಕವಿಯ ಲೇಡಿ ಮ್ಯಾಕ್‌ಬೆಥ್‌ಳು ನಾಟಕದ ಪ್ರಾರಂಭಕ್ಕೆ ಗಂಡನಂತೆಯೇ ತೀರ ಸಾಮಾನ್ಯಳಾಗಿ ಸರದಾರನ ಗ್ರಹಿಣಿ ಎಂದು ಸಮಾ ಧಾನದಿಂದ ಹಾಯಾಗಿ ಹರ್ಮ್ಯದಲ್ಲಿದ್ದು ಬಿಟ್ಟಿದ್ದರೆ ಒಂದರ ತರುವಾಯ ಒಂದು ಕೊಲೆಗೆ ರಂಗಭೂಮಿಯಲ್ಲಿ ಎಡೆದೊರೆಯುತ್ತಿತ್ತೆ ? ಸೀನ ಸೀನರಿಗಳ ವೆಚ್ಚವೂ ಕಡಿಮೆಯಾಗಿ ನಾಟಕವು ಸುಖಮಯವಾಗಿ ಪರಿಣಮಿಸಿ ಪ್ರೇಕ್ಷಕರೂ ಲೋಕಾಭಿರಾಮವಾಗಿ ಹರಟುತ್ತ (ಸಾಧ್ಯವಿದ್ದರೆ ಸಿಗರೇಟು ಹಚ್ಚಿ) ಮನೆಯೆಡೆಗೆ ಸಾಗುತ್ತಿದ್ದರು. ಮಹತ್ವಾಕಾಂಕ್ಷೆಯ ಅನಾಹುತಕ್ಕೆ ಸಾವಿರಾರು ನಿದರ್ಶನ ಸಿಕ್ಕಾವು ಹೀಗೆಯೇ ! ಏನಾದರೂ ಉದ್ದೇಶ ಸಾಧಿಸುವದಿಷ್ಟೆ !

ಅಹಮಹಮಿಕೆಯಿಂದ ಇಂತು ಇಷ್ಟೊಂದು ಅನರ್ಥವಾಗಿದೆಯೆಂದು ಮನಗಂಡು ನಾವು ಇಂದು ನನ್ನತನಕ್ಕೆಲ್ಲ ತಾತ್ವಿಕ ಬುದ್ಧಿಯಿಂದ ತಿಲಾಂಜಲಿ ಕೊಡಲು ಸನ್ನದ್ಧರಾದರೆ ತಪ್ಪುಗಾರರಾಗುವದೇ ಖಂಡಿತ 'Survival of the fittest' ಎಂಬ ಸಿದ್ಧಾಂತಕ್ಕೆ ಅನಿವಾರ್ಯವಾಗಿ ಮನ್ನಣೆ ಉಳಿಯುವ ವರೆಗೂ ವ್ಯಕ್ತಿಯು ನಿಷ್ಕ್ರಿಯನಾದರೆ, ಯಾವ ಪುರುಷಾರ್ಥವೂ ಸಾಧಿಸುವ ದಿಲ್ಲ. ವಿವೇಕದ ಕಡಿವಾಣ ಹಾಕಿಕೊಂಡು ಅವನು ಮುನ್ನಡೆ ಇಟ್ಟಲ್ಲಿ ಇದ್ದ ಸಮಾಜಕ್ಕೂ ಹಾನಿ ಇಲ್ಲ. ವ್ಯಕ್ತಿಯ ಆಕಾಂಕ್ಷೆಗಳಿಗೂ ದೋಷದ ಸೋಂಕು ಇಲ್ಲ. ಇದೀಗ ನಾನು ಎನ್ನುವದರ ರಹಸ್ಯದ ಸೌಂದರ್ಯ, ಸಮಾಜದ ಏಳ್ಗೆ !

# ನನ್ನ ದೀಪಾವಳಿಯ ರಸನಿಮಿಷಗಳು

ಪ್ರೂನಾ ಬೆಂಗಳೂರು ಪ್ಯಾಸಿಂಜರ್ ಗಾಡಿ, ರಾತ್ರಿ ಮೂರರ ಸುಮಾರಿಗೆ ಅಂದು ಬರುವುದಿದ್ದಾಗ, ಕೇವಲ ಇಪ್ಪತ್ತು ನಿಮಿಷ ಮೊದಲು, ಧೋ ಧೋ ಎಂದು ಸುರಿಯುವ ಮಳೆಯಲ್ಲಿ, ತೀರ ಸಾಮಾನ್ಯ (?) ಟಾಂಗೆಯಲ್ಲಿ ಮೂವರು ಪ್ರವಾಸಿಕರು ತಮ್ಮ ಗಂಟು ಗದಡಿಗಳೊಡನೆ ತೊಯಿಸಿಕೊಂಡು ಸಾಗಿದ್ದುದನ್ನು ಕಂಡವರು 'ಛೇ! ಇವರೇನು ಪ್ರದೀರ್ಘ ಪ್ರವಾಸಮಾಡಿ ಮುಂದಾದಾರು' ಎಂದು ಸಂಶಯ ತಳೆಯುವಂತಿದ್ದಿತು. ಏನೇ ಆಗಲಿ, ಸಂಶಯದ ಕಾರ್ಮೋಡ ಚೆದರಿ ನಮ್ಮ ಮನಸ್ಸೂ ಪ್ರಫುಲ್ಲಿತವಾಯಿತು—ಇನ್ನೂ ನಿಲ್ದಾಣಕ್ಕೆ ಗಾಡಿ ಬಾರದಿದ್ದುದನ್ನು ಕಂಡು! ಅಷ್ಟರಲ್ಲಿಯೇ ಇನ್ನುಳಿದವರೂ ನಮಗಿಂತ ತಡಮಾಡಿ ತಲುಪಿದರೂ ಅನಾನುಕೂಲವೇನೂ ಆಗಲಿಲ್ಲ. ಸುದೈವದಿಂದಲೊ ರೂಢಿಬಲದಿಂದಲೊ, ಗಾಡಿ ಅಂದು ತಡವಾಗಿಯೇ ಬಂದಿತು. ಅಲ್ಲಿ ಯಾರ ತಪ್ಪು ಏನು? ಒಳಗಂತೂ ಆಸೀನರಾದರು ಎಲ್ಲರೂ.

ಪ್ರವಾಸದಲ್ಲಿ ಮನೋರಂಜನೆಯೇ ಮುಖ್ಯವೆಂದು ನೆರೆನಂಬಿದ ಮಹನೀಯರು, ಇಸ್ಪೇಟುದೇವಿಯ ಆರಾಧಕರಾದರು. ವಿಲಾಸಿ ಆಟಗಾರರು ಸಹಜವಾಗಿ ಪ್ರೇಕ್ಷಕ ವರ್ಗಕ್ಕೆ ಸೇರಿದರು. ಮೊದಮೊದಲು ಕಂಪಾರ್ಟ್‌ಮೆಂಟಿನಲ್ಲಿ ಸ್ಥಳ ಸಾಕಷ್ಟೆನಿಸಿದರೂ, ಮುಂದೆ ಮುಂದೆ ಕ್ರಮಿಸಿದಂತೆ ಗದ್ದಲ ಹೆಚ್ಚಾಗಿ ಕೊಂಚ ಗುದ್ದಾಟಕ್ಕೂ (ಶಾರೀರಿಕವಲ್ಲ!) ಇಂಬು ದೊರೆಯಿತು. ಎಲ್ಲರೂ ಹಣ ಕೊಟ್ಟೇ ಟಿಕೇಟು ಪಡೆದು ಹತ್ತಿದಾಗ

' ನಾನು ಮೊದಲು ಬಂದು ಕುಳಿತವ' ಎಂದರೆ, ವ್ಯಾವಹಾರಿಕ ಕಾಯಿದೆಯ ದೃಷ್ಟಿಯಿಂದ ಒಪ್ಪಲಾಗುವುದಿಲ್ಲವೆಂದು ಇಂತಹ ರಸಕಸಿ ಸಹಜ. ಮೇಲಿಂದ ಮೇಲೆ ಇವು ಆದರೆ ಒಳಿತು ಎಂದು ಆಶಿಸಲೂ ಆಗದು. ಅಂತೂ ಕೈಗೆಕೈ ಹೆಚ್ಚುವುದನ್ನಷ್ಟೆ ಉಳಿಸಿದ ಸುಶಿಕ್ಷಿತರೇ (?) ಮುಂದೊಂದು ತಾಸಿನಲ್ಲಿ ಜೀವದ ಗೆಳೆಯರಾದರು (ತೆಗೆದುಕೊಳ್ಳುವವರಲ್ಲ) ! ತಿಂಡಿ, ತೀರ್ಥಗಳ ವೈಭವದಲ್ಲಿ ಹಿಂದಿನ ಕದನ ಮರೆವಿನ ಸಾಮ್ರಾಜ್ಯಕ್ಕೆ ಧುಮುಕಿ, ಕ್ರಮೇಣ ತಿಳಿ ವಾತಾವರಣವು ಎಲ್ಲೆಡೆ ಹರಡಿತು. ಎಲ್ಲರೂ ನಿಸರ್ಗ ನಿರೀಕ್ಷಣೆಯಲ್ಲಿ ತಲ್ಲೀನರಾದರು. ಅನ್ನದೇವ ಪ್ರತ್ಯಕ್ಷನಾದ ಮೇಲೆ ರಸಿಕತೆ ಅಡಿ ಇಟ್ಟರೆ ಏನು ಪ್ರಮಾದ ? ಆ ಮಾತು ಈ ಮಾತು ತಲೆತುಂಬ ಆಡುವಾಗ, ವಿನೋದಿಸುವಾಗ, ಆಟಕ್ಕೂ ಕಳೆ ಕಟ್ಟಿದಾಗ, ನಿದ್ರಾದೇವತೆಯೂ ಒಲಿಯುತ್ತಿರುವಾಗ ಬೆಂಗಳೂರಿನ ಸೆರಗೇ ನಮ್ಮ ಕಣ್ಣು ಕಟ್ಟಿತು !

ನಮ್ಮೊಬ್ಬ ಗೆಳೆಯರ ಶಿಫಾರಸಿನಿಂದ, ನಿಲ್ದಾಣದ ಸಮೀಪದ ಛತ್ರದಲ್ಲಿ ಇಳಿದುಕೊಂಡೆವು. ಒಂದು ವಾರ ಅಲ್ಲಿ ಇರುವ ಪ್ರಸಂಗ ಬಂದರೆ ' ಅಂದಮಾನವೇ ಚೆನ್ನು ಇದಕ್ಕಿಂತ ' ಎಂದು ಅಭಿಪ್ರಾಯ ಪಡುವ ಮಟ್ಟಿಗೆ ನಮ್ಮ ಗೆಳೆಯರ ಗುಂಪಿನ ಉಪದ್ವ್ಯಾಪಿಯೊಬ್ಬ ಬಂದಿದ್ದ. ಕರ್ಮ–ಧರ್ಮ ಸಂಯೋಗದಿಂದ ದಣಿದು ಮಲಗಲಿಕ್ಕಷ್ಟೇ ಅಲ್ಲಿಗೆ ಮೂರು ರಾತ್ರಿ ನಾವು ಹೋದುದರಿಂದ—ಬದುಕಿದೆವೆನಿಸಿತು. ಅಷ್ಟು ಅಲ್ಲಿಯ ಅಚ್ಚುಕಟ್ಟುತನ ! ಹಿಂದುಳಿದ ದೇಶಗಳು ಅಲ್ಲಿಯ ಸ್ವಚ್ಛತೆಯ ಮಾದರಿ ಅಭ್ಯಸಿಸಿದರೆ ಪಾಪವೇನು ? ಸರಿ. ಇಂತಹ ಹಳೆ ಹೊಸದರ ತಿಕ್ಕಾಟದಲ್ಲಿಯೇ ನಾವು ' ವಿಧಾನಸೌಧ ' ಕಂಡು ಬಂದೆವು. ಆ ಅಲೌಕಿಕ ಬೆಡಗಿಗೆ ಮಾರು ಹೋದೆವು. ಸರಕಾರದ ಕಲಾಪ್ರೇಮಕ್ಕೆ, ಉಜ್ವಲ ಸಾಂಪತ್ತಿಕ ಸ್ಥಿತಿಗೆ(?) ಅದೊಂದು ಜೀವಂತ ನಿದರ್ಶನವೆಂದು ನಮ್ಮ ಗೆಳೆಯರ ಬಳಗದ ಮುಖ್ಯ ಮೇಲ್ವಿಚಾರಕರು ಶರಾ ಹೊಡೆಯದೇ ಸಾಗಲಿಲ್ಲ. ಅವರೇನು ಬರೀ ಶಿಕ್ಷಕರಲ್ಲ; ಕಾಯಿದೆ ಪಂಡಿತರು; ಮೇಲಾಗಿ ಮರದ ಮೇಲಿನ ಮಂಗ ಕೈಬಿಡುವಂತೆ ಮಾತಾಡುವವರು. ಹೆಚ್ಚೇನು ? ನಾಮಾಂಕಿತ ವಿಲಾಸಿ ಹಾಗೂ ವಿನೋದಿ ನಟರೂ ಅವರಿದ್ದುದರಿಂದ, ಅವರ ಮಾತಿನಲ್ಲಿ ಎಲ್ಲರಿಗೂ ವಿಶ್ವಾಸ ಹುಟ್ಟಿತು. ತಾಸೇಕೆ ? ಹೆಚ್ಚು ಹೊತ್ತು ಸೌಧ ನೋಡಿ

ಬೆರಗಾಗಿ, ಎಲ್ಲರೂ ಕಬನ್ ಪಾರ್ಕಿಗೆ ಬಂದೆವು. ಊಟದ ವೇಳೆ ಸಮೀಪಿಸಲಿದ್ದರೂ ಹಲವರು ಅಲ್ಲಿ ಕಡಲೆ ಪುರಿ-ಉಸುಳಿ ಕೊಂಡು ತಿಂದರು. ಅದೇ ಉನ್ಮಾದಾವಸ್ಥೆಯಲ್ಲಿ ಸಂಜೆಗೆ ಲಾಲಬಾಗ ಪಾರ್ಕಿನ ಸಂದರ್ಶನ ವಾಯಿತು. ಸಾಹಿತ್ಯದಲ್ಲಿ ಅಜರಾಮತೆ ಪಡೆದ ಎರಡೂ ಪಾರ್ಕುಗಳಿಂದ ನಮ್ಮಲ್ಲಿಯ ಕನಿಷ್ಠ ಇಬ್ಬರು ಮೂವರು ಸಾಹಿತ್ಯಿಕರು ಚಿರಂತನ ಸ್ಫೂರ್ತಿ ತಳೆದಿರಬೇಕು.

ಮರುದಿನವೇ ಮಂಡ್ಯದ ಸಕ್ಕರೆಯ ಕಾರಖಾನೆಯ ಸಂದರ್ಶನ. ಮೊದಮೊದಲು ನೋಡುವ ಉತ್ಸುಕತೆಯಿಂದ ಪ್ರೇರಿತರಾಗಿ ಒಳಗೆ ಹೊಕ್ಕ ಹಲವರು, ಅಲ್ಲಿಯ ಅತ್ಯುಗ್ರ ವಾಸನೆಗೆ ಹಿಂತೆಗೆದು ಓಡಲನುವಾಗಿದ್ದರು; ಉಳಿದವರು ನಾವು, ಅವರನ್ನು ಹಿಡಿದು ತರಲು ಅತಿಯಾಗಿ ಶ್ರಮಿಸಬೇಕಾಯಿತು. ಏನೇ ಇರಲಿ, ಅಂತಹ ಭವ್ಯ ಯಾಂತ್ರಿಕ ಯೋಜನೆಯನ್ನು ಕಂಡು ದಂಗುಬಡಿಯದೇ ನಿಲ್ಲುವುದು ಯಾರಿಗೂ ಅಸಾಧ್ಯ! ಕಬ್ಬಿನ ರಾಶಿ ಹೋಗಿ ಸಕ್ಕರೆ ಸಿದ್ಧವಾಗಿ, ಯಂತ್ರದಲ್ಲಿಯೇ—ಗೋಣಿಯ ಅಸಂಖ್ಯ ಚೀಲಗಳು—ವ್ಯವಸ್ಥಿತವಾಗಿ ಹೊಲಿಯಲ್ಪಟ್ಟು ಹೊರಬೀಳುವದು ಸೋಜಿಗದ ಮಾತೇ ಅಹುದು. ಮನುಷ್ಯನ ಅಸ್ತಿತ್ವವನ್ನು ಅಳಿಸಲು ಹೆಣಗಿ ಯಶಸ್ವಿಯಾದ ಯಂತ್ರವೇ ನೀನೇ ಧನ್ಯನೆಂದು ನನ್ನ ಸಾಹಿತ್ಯಿಕಮಿತ್ರ ಉದ್ಗಾರ ಹೊರಡಿಸಿಯೇಬಿಟ್ಟ! ಕಂಪನಿ ನಾಟಕಗಳನ್ನೇ ಹೆಚ್ಚಾಗಿ ನೋಡಿ ಹುಚ್ಚನಾದ ಅವನಿಗೆ ಈ ಉದ್ಗಾರವು ತೀರ ಸಹಜವಿತ್ತು! ಇರದೇ ಏನು?

ಬತ್ತದ ಬೆಳೆಯ ಐಸಿರಿ ಕಂಡು ಆನಂದಿಸುವಾಗ ಮೈಸೂರು ಬಂದಿತು. ಇರುಳು ವಿಶ್ರಾಂತಿಯನ್ನು ಪಡೆದು, ಮೊದಲು ಮುಂಜಾವು ಮೋಟರಿನಲ್ಲಿ ಚಾಮುಂಡಿ ಬೆಟ್ಟ ಹತ್ತಿದೆವು. ಮಹಿಷಾಸುರನ ಭವ್ಯ ಮೂರ್ತಿ ನಮ್ಮ ಹೋಳಿಹುಣ್ಣಿವೆಯ ಕಾಮಣ್ಣನ ನೆನಪು ತರುವಂತಹದು. ಸಂಜೆಗೆ 'ತಮಾಷೇ ಬಂಗಲೆ' (Zoo Garden), ಜಗನ್ಮೋಹಿನಿ ಪ್ಯಾಲೇಸ್ ನೋಡಿದ್ದಾಯಿತು. ರವಿವರ್ಮನ ಚಿತ್ರಗಳನ್ನೆಲ್ಲ ಹಿರಿಯಾಕಾರದಲ್ಲಿ ಕಂಡಾಗ, ಆನಂದ ಕೋಡಿಯೊಡೆದು ಹರಿಯಿತು. ದೇವಪೂಜೆಗೆ. ಪೂಜೆಯ ಸಾಮಗ್ರಿ— ಹಚ್ಚಿದ ನೀಲಾಂಜನ ಒಯ್ಯುವ ಮುತ್ತೈದೆಯೋರ್ವಳ ಚಿತ್ರವು ವಾಸ್ತವತೆಯ ಮೂಲಕ ಜೀವಕಳೆಯಿಂದ ತುಂಬಿ ಪರಿಪೂರ್ಣವೆನಿಸಿತು.

"ಚಲಚ್ಚಿತ್ರ ಪಟದಲ್ಲಿ ಕನ್ನಂಬಾಡಿ ಆಣೆಕಟ್ಟು, ದೀಪೋತ್ಸವ ನೋಡಿರುವೆವು; ಮತ್ತೇಕೆ ಈ ಅನಾವಶ್ಯಕ ಆತುರತೆ?" ಎಂದು ಜುಕ್ಕುಜುಲುಮೆಯಿಂದ ಕಾಲುಹಾಕುತ್ತ ಸಾಗಿ, ಅಲ್ಲಿಗೆ ೭-೩೦ಕ್ಕೆ ತಲುಪಿದಾಗ, ಚಿತ್ರದೃಶ್ಯಕ್ಕೂ, ನೈಜತೆಗೂ ಇರುವ ಅಜಗಜಾಂತರವು ನಮ್ಮನ್ನು ಮುಗ್ಧರನ್ನಾಗಿಸಿತು. ಬರುವಾಗ ನಾವಿನಲ್ಲಿ ಒಂದು ವಿಹಾರ ಸಾಧಿಸಿತು. ಬಹಳ ಹಣವಿಟ್ಟುಕೊಂಡ ನಮ್ಮ ಮೇಲ್ವಿಚಾರಕ ಮಹನೀಯರು, ಅಂಜಿಕೆಯಿಂದ (ಮುಳುಗುವ ?) "ಮನೋಜವಂ ಮಾರುತ ತುಲ್ಯ ವೇಗಂ" ಎಂಬ ಮಂತ್ರ ಪಠಿಸಹತ್ತಿದರು. ವಿನೋದಕ್ಕಾಗಿ ಆಗ ಅವರು ಹಾಗೆ ನುಡಿದಿದ್ದರೂ, ನಗೆಯ ತುಷಾರ ಎಲ್ಲರಲ್ಲಿ ಚಿಮ್ಮದಿರಲಿಲ್ಲ. ಮುಂದೆ ಅವರು ಕನ್ನಡವನ್ನಷ್ಟೇ ಬಲ್ಲ ಒಬ್ಬನ ಕತೆ ಹೇಳಿದರು. ದಾರಿಯಲ್ಲಿ ಅವನಿಗೆ ಹಿಂದಿಯನ್ನಷ್ಟೇ ಬಲ್ಲ ಬೇರೊಬ್ಬ ಸಂಧಿಸಿದನಂತೆ. ಕನ್ನಡ ಮಾತಾಡುವವನಿಗೆ ಎದುರಿಗೆ ಹೊರಟ ಪ್ರಾಣಿ ಆನೆ ಎಂಬುದು ತಿಳಿದಿರಲಿಲ್ಲವಾದ್ದರಿಂದ "ಇದೇನು?" ಎಂದು ಕೇಳಿದ. ಹಿಂದಿ ಬಲ್ಲವನು "ಕ್ಯಾ ಪೂಛತೇ ಮೇರಿ?" ಎಂದು ಉತ್ತರಿಸಿದ. ಕನ್ನಡಿಗನು, "ಇದು ಕ್ಯಾ ಪೂಛತೇನ ಮರೀನs? ಇದರ ತಾಯಿ ಎಷ್ಟು ದೊಡ್ಡದಿದ್ದೀತಪ್ಪಾ!" ಎಂದು ಉದ್ಗರಿಸಿದನಂತೆ!

ಮರುದಿನ ಲಲಿತ ಮಹಲಿನ ಸಂದರ್ಶನ! ಪೌರ್ವಾತ್ಯ ಪಾಶ್ಚಿಮಾತ್ಯ ಕಲಾಭಿರುಚಿಯ ಸಮನ್ವಯವನ್ನಿಲ್ಲಿ ಕಾಣಬಹುದು. ಐತಿಹಾಸಿಕ ಘಟನೆಗಳೂ ಇಲ್ಲಿ ರಮ್ಯವಾಗಿ ಚಿತ್ರಾರ್ಪಿತವಾಗಿವೆ. ಟೀಪುವಿನ ಮಕ್ಕಳು ಆಂಗ್ಲ ಅಧಿಕಾರಿಗಳ ಕೈಗೆ ಸಿಕ್ಕಾಗಿನ ನೋಟವು ಕರುಳು ಕೊರೆಯುವಂತಹದು! ಶೂರನಾದ ಆ ದೊರೆಯ ಅಪಜಯದ ಅವಮಾನಕ್ಕೆ ಮಕ್ಕಳ ವಿರಹದ ಬರೆ! ಬಾಲ್‌ರೂಮ್‌ನ್ನು ಕಂಡಾಗಂತೂ ನಮ್ಮ ಹಿರಿ ಶಿಕ್ಷಕರು ಡಾನ್ಸಿನ ಪೋಜನ್ನೇ ಕೊಟ್ಟು ನಿಂತರು. ಸಂಗಾತಿ ಇದ್ದರೆ ಕುಣಿಯಬಹುತ್ತೇನೋ— ಎಂದು ಪುಣ್ಯಕ್ಕೆ ಯಾರೂ ಕುಚೇಷ್ಟೆ ಮಾಡಲಿಲ್ಲ! ಹಿರಿಯರಿಗೆ ಅಮರ್ಯಾದೆ ಯಾರು ಮಾಡಿಯಾರು? ಆದರೆ ನಗೆ ಸೀಮೆ ಮೀರಿ ಉಕ್ಕಿತು. ಆ ಮಾತೇ ಬೇರೆ.

ಗುಲಾಬಿ ವರ್ಣರಂಜಿತ ಸೂರ್ಯರಶ್ಮಿಗಳು ಅದೇ ಭೂವಲಯವನ್ನು ಅಪ್ಪುತ್ತಿರುವಾಗ ಶ್ರೀರಂಗಪಟ್ಟಣಕ್ಕೆ ನಮ್ಮನ್ನೊಯ್ಯುವ ಬಸ್ಸು ಛತ್ರದ

ಮುಂದೇ ಬಂದು ದಾರಿಕಾಯುತ್ತಿತ್ತು. ಸ್ವಲ್ಪ ವೇಳೆಯಲ್ಲಿ ಎಲ್ಲರೂ ತಿಂಡಿ-ತೀರ್ಥದ ಕಾರ್ಯಕಲಾಪ ಮುಗಿಸಿ ಹೊರಟೆವು. ದಾರಿಯಲ್ಲಿ ನಮ್ಮಲ್ಲಿಯ ಉತ್ಸಾಹಿ ಗೆಳೆಯನೊಬ್ಬ ಸಾಹಿತಿಯ ವ್ಯಾಖ್ಯೆ ಮಂಡಿಸಿ— "ಮಾತುಗಾರಿಕೆ ಬರವಣಿಗೆಯ ಕಲೆ, ಹೆಚ್ಚಾದ ಓದು ಇಲ್ಲದವನು ಸಾಹಿತಿಯಾಗಲಾರ—" ಎಂದು ಆಹ್ವಾನಿಸಿ ಹಲವಾರು ವಿಖ್ಯಾತ ಜನರನ್ನು ಈ ತರ್ಕದ ತಿರುಗಣಿಯಲ್ಲಿ ತಿರುಗಿಸಿಬಿಟ್ಟ. ಮೊದಲು ಹಗುರಾದ ಮಾತು ಕ್ರಮೇಣ ಬಲಿತು ಬಲಿತು ವಿರಸಕ್ಕಿಟ್ಟುಕೊಂಡಿತು. ಕೊನೆಗೆ ಒಬ್ಬಿಬ್ಬರ ಬುದ್ಧಿವಂತಿಕೆಯಿಂದ ವಿಷಯ ಮರೆಸಿ ಬತ್ತಳಿಕೆಯಲ್ಲಿ ಹಾಕಿಡಬೇಕಾದರೆ ಸಾಕುಸಾಕಾಯಿತು! ಭಲೆ ಸಾಹಿತ್ಯದ ಪ್ರಭಾವವೆ! ಇಂತು ರಂಗನಾಥ ಸ್ವಾಮಿಯ ದಿವ್ಯಮಂದಿರ ಹೊಕ್ಕಾಗ "ಕಂಗಳಿದ್ಯಾತಕೊ, ಕಾವೇರಿ ರಂಗನ ನೋಡದ" ಎಂಬ ದಾಸರ ಉಕ್ತಿಯ ಮಹಿಮೆ ನಿಜವಾಗಿ ಪರಿಣಮಿಸಿತು. ಕಾಯಿ ಒಡೆಸಿ, ಕರ್ಪುರದಾರತಿ ಬೆಳಗಿಸಿ ಮುನ್ನಡೆದಾಗ— ಟೀಪುವಿನ ಕೋಟೆ, ಅವನು ಆಂಗ್ಲ ಸೆರೆಯಾಳುಗಳನ್ನು ಹಾಕಿದ ಡಂಜನ್ ನೋಡಿದೆವು. ಬಳಿಯಲ್ಲಿ 'Here the dead body of Tippu was found' ಎಂಬ ಅಂಕಿತದ ಕಲ್‌ಬರೆಹ ಕಂಡೆವು. ವೀರಾಗ್ರೇಸರನೆನಿಸಿ ವೀರಮರಣವನ್ನೈದಿದ ಆ ಮಹಾವೀರನಿಗೆ ಈ ಮೈಲುಗಲ್ಲೇ ಸ್ಮಾರಕವೇ— ಎಂದು ಕೆಡುಕೆನಿಸಿತು ಟೀಪು, ಹೈದರ, ಅವನ ಪತ್ನಿಯರ ಗೋರಿಗಳನ್ನು ನೋಡಿ ದರಿಯಾ ದೌಲತ್ತಿನ ಐಸಿರಿಗೆ ಮಾರುಹೋಗಿ, ಜುಮ್ಮಾ ಮಸೀದೆಯ ಅಸಂಖ್ಯಾತ ಪಾವಟಿಗೆ ಹತ್ತಿದೆವು ಮೊದಲು ತಲೆಗೆ ಚಕ್ರ ಬರುವಂತಾಗಿದ್ದರೂ, ಮುಂದೆ ತುದಿಮುಟ್ಟಿದಾಗ ಅಲ್ಲಿಯ ಅಂದವಾದ ವಿಸ್ತೃತ ನೋಟ— ಚಂದ್ರಾಪೀಡನ ಕಿನ್ನರ ಮಿಥುನದ ದರ್ಶನದ ಆನಂದ ನೆನಪಿಗೆ ತಂದುಕೊಟ್ಟಿತು. ಸರಿ.

ಮನಸ್ಸಿಲ್ಲದಿದ್ದರೂ ಹಲವರು ಉದಕಮಂಡಳದ ಮೋಟರ ಪ್ರವಾಸಕ್ಕೆ ಅಣಿಯಾದರು ಮರುದಿನ. ಹಲವರಿಗೆ ನೂರು ಮೈಲು ಪ್ರವಾಸ ತಡೆಯಲಿಲ್ಲ. ತಲೆ ತಿರುಗಿ ಬೀಳುವಂತೆನಿಸಿತು. ನಾಲ್ಕು hairpin bendsನಲ್ಲಿಯಂತೂ ಅವರನ್ನು ದೇವರೇ ಕಾಪಾಡುವಂತಾಗಿತ್ತು. ಅಂತಹ ಅಂಕುಡೊಂಕು ಮಾರ್ಗ! ಅಲ್ಲಲ್ಲಿ ಕೊಳ್ಳದಲ್ಲಿ, ಗುಡ್ಡದಡಿಯಲ್ಲಿ ನೀಲಗಿರಿ, ಸಿಂಕೋನಾ, ಚಹಾ ತೋಟಗಳು ಕಣ್ಣಿಗೆ ಬಿದ್ದುವು. ಚಹ ಬೆಳೆಸಲು ಸಾಲುಸಾಲಾಗಿ

ಹಚ್ಚಿ ಬೆಳೆಸಿದ ಉನ್ನತ ವೃಕ್ಷಗಳು ತಲೆಕೊಡಹುವ ದೃಶ್ಯವು ಮೋಹಕವೇ ಸೈ ಪರ್ವತ ಶ್ರೇಣಿಗಳಷ್ಟನ್ನಲ್ಲದೇ ನಮ್ಮನ್ನೂ ಮುತ್ತಿದ ಮೋಡಗಳನ್ನು ಕಣ್ಮುಟ್ಟಿ ಕಂಡ ನಮಗೆ ಸೋಜಿಗವೆನಿಸದಿರಲಿಲ್ಲ. ದೂರದ ಡಾಂಬರ ಬೀದಿಗುಂಟ, ಪರ್ವತಾವಳಿಯಲ್ಲಿ ಮೇಲೆ ಕ್ರಮಿಸುತ್ತಿದ್ದ ಬಸ್ಸು ಇಲಿಯ ಮರಿಯಂತೆ ತೋರುತ್ತಿತ್ತು. ಒರ್ (ಒಂದು) ಕಲ್‌ಮಂದಿರ ಎಂಬ ಶಬ್ದೋತ್ಪತ್ತಿಗೆ ನಮ್ಮ ಸಂಶೋಧಕರು ತಲೆಹಾಕುವಾಗ ಉದಕಮಂಡಲ ಬಂದೇ ಬಿಟ್ಟಿತು. ಅಲ್ಲಿಯ ಸಿಮ್ಸ್‌ಪಾರ್ಕ, ದೊಡ್ಡ ಬೆಟ್ಟ ಪೀಕ್ ಕಂಡು ಮನಸ್ಸು ಹರುಷ ಸಾಗರದಲ್ಲಿ ಲೋಲಾಡಿತು. ಹಲವಾರು ಸಂಸ್ಥಾನಿಕರು (ರಾಜ ಪ್ರಮುಖರೆನ್ನಿ ಬೇಕಾದರೆ!) ಬೇಸಗೆಯಲ್ಲಿ ಬೀಡು ಬಿಡುವುದಕ್ಕೆಂದು ಕಟ್ಟಿಸಿಕೊಂಡ ಕಟ್ಟಡಗಳೇ— ಊಟಿಯು ಆರೋಗ್ಯಧಾಮವೆಂಬುದಕ್ಕೆ— ಒಳ್ಳೇ ನಿದರ್ಶನಗಳು. ಅವನ್ನೂ ಸೂಕ್ಷ್ಮವಾಗಿ ಪರಿಕಿಸಿ ಕುನ್ನೂರಿಗೆ ಪ್ರಯಾಣ ಬೆಳೆಸಿದೆವು.

ಕಾಶಿಗೆ ಹೋಗಿ ವಿಶ್ವೇಶ್ವರನನ್ನು ಕಾಣದೆ ಬಂದ ಹೆಡ್ಡನ ಗತಿ ಕುನ್ನೂರ ಕಾಣದಿದ್ದರಾಗುವುದೆಂದು ಉಸಿರಿದರೆ, ಓದುಗರು ನನ್ನನ್ನು ಬಹಳ ಹಳಿಯಲಿಕ್ಕಿಲ್ಲ. ಅದರ ರೈಲು ಪ್ರವಾಸವು ಚಿಕ್ಕದಿದ್ದರೂ ಕಣ್ಣಿಗೆ ಚಿರಂತನ ಉನ್ಮಾದದ ಹಬ್ಬ. ಮಲೆಗಳ ಮಾಲೆಯಲ್ಲಿ ಸುತ್ತು ಸುತ್ತು ಹಾಕಿ ಒನಪು ಒಯ್ಯಾರದಿಂದ ಹೊರಡುವ ರೈಲು ಸೌಂದರ್ಯದ ಆಗರವೇ! ಆಳವಾದ ಕೊಳ್ಳದ ಐಸಿರಿಯನ್ನು ನೋಡಲು ಈಶ್ವರ ನಿರ್ಮಿತ ಕಣ್ಣು ಸಾಲವು ಎಂದೆನಿಸಿದರೆ ಪಾಪವಲ್ಲ! ಅಲ್ಲಿಯೇ ಕೊಳ್ಳದಲ್ಲಿ ಅಚ್ಚುಕಟ್ಟಾದ ಸಿರಿವಂತರ ಅಂದವಾದ ಕಟ್ಟಡಗಳು ಪಾರಿವಾಳದ ಮಾಟ ಮನೆಗಳನ್ನವು ಹೋಲುವಂತೆನಿಸಿತು. ಉಪಾಹಾರ ತೀರಿಸಿಯೇ, Pastures' Institute, Food Nutrition Research Department ಸಂದರ್ಶಿಸಿದೆವು. ಬಿಳಿ ಇಲಿ, ಮಂಗಗಳ ಮೇಲಿನ ಪ್ರಯೋಗಗಳು ನಿಜವಾಗಿಯೂ ಶಾಸ್ತ್ರೀಯ ದೃಷ್ಟಿಯಿಂದ ಕುತೂಹಲಕಾರಿಯೇ ಆದುವು. ಜಪಾನೀ ಪದ್ಧತಿಯಂತೆ ರೇಶಿಮೆ ಹುಳು ಬೆಳೆಸುವ ಸಂಸ್ಥೆಯ ಕಾರ್ಯವೂ ಮಹತ್ತರವಾಗಿ ತೋರಿತು.

ಊಟಿಯಿಂದ ಮರಳಿ ಮೈಸೂರಿಗೆ ಬಂದ ಮೇಲೆ, ನೇರವಾಗಿ ಶ್ರವಣ ಬೆಳ್ಗೊಳಕ್ಕೆ ನಮ್ಮ ಪಯಣ ಸಾಗಿತು. ಮೋಟರ್ ಡ್ರಾಯ್‌ವ್ಹರನ

ಅಜಾಗರೂಕತೆಯಿಂದಲೊ, ದಾರಿಯ ಅಂದಗೇಡಿತನದಿಂದಲೊ, ಪ್ರವಾಸ ವಷ್ಟು ರುಚಿಕರವಾಗಲಿಲ್ಲ. ಆ ಡ್ರಾಯ್‌ವ್ಹರನ ದೌಲತ್ತಿಗೇನೊ ಕೊರತೆ ಇರಲಿಲ್ಲ. ಇಂಗ್ಲಿಶ್ ಬಲ್ಲವ. ಮಕ್ಕಳಲ್ಲಿ ಒಬ್ಬನು ಎಂಜನಿಯರನಂತೆ! ಇನ್ನೊಬ್ಬ ಬಿ. ಎ. ವರ್ಗದಲ್ಲಿ ಇರುವನಂತೆ. ಮೇಲಾಗಿ ತಿಂಗಳಿಗೆ ೨೦೦ ರೂಪಾಯಿ ವರಮಾನದ ಸ್ವಂತ ಮನೆಗಳು. ಹೀಗಿದ್ದರೂ ಡ್ರಾಯ್‌ವ್ಹಿಂಗಿಗೆ ಅವನು ಮೊರೆ ಹೋದುದೇಕೆ— ಎಂದು ಸಂಶಯ ಪಟ್ಟು ಕ್ಷಣ ಕಾಲ ತರ್ಕದ ತಂತಿಯನ್ನಾಶ್ರಯಿಸಿ ಥಕಥಕ ಕುಣಿಯಲುನುವಾಗಿದ್ದೆ. ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದೆಂಬ ನಾಣ್ಣುಡಿ ಅವನನ್ನು ಮೋಹಿಸಿದ್ದೀತೆ? ಅಥವಾ ಅವನ ಅಸಂಖ್ಯ ಚಟಗಳಿಗೆ ಈ ವ್ಯವಸಾಯ ಹಣ ಪೂರೈಸದಿದ್ದರೆ ಏನಚ್ಚರಿ? ಇರಲಿ. ಪ್ರಸ್ತುತಮನುಸರಾಮಃ! ಇಂತಹ ಡ್ರಾಯ್‌ವ್ಹರನ ಕೌಶಾಲ(?) ದಿಂದಲೆ ಎಲ್ಲರೂ ಕೆಟ್ಟ ದಾರಿಯನ್ನು ದಾಟಿ ಊರು ಮುಟ್ಟಿದೆವು. ಮನದಲ್ಲಿ ದೈವವನ್ನು ಪ್ರಶಂಸಿಸಿದೆವು.

ಬೆಳುಕೊಳ್ಳದ ಊರನ್ನಷ್ಟು ಪರಿಕಿಸದಲೇ ನಾವು ಊಟ ವಿಶ್ರಾಂತಿಯ ನಂತರ ಗೊಮ್ಮಟೇಶ್ವರನ ಸಾನ್ನಿಧ್ಯಕ್ಕೆ ಬಂದೆವು. ಎಂತಹ ಆಜಾನುಬಾಹು ಮೂರ್ತಿ! ಹಸುಗೂಸಿನ ಪ್ರಸನ್ನ ಮುಖಮುದ್ರೆ. ಕೂಸಿನದೇ ೧೦೦ ಮಡಿ ತಿದ್ದಿ ಬೆಳಸಿದ ಆವೃತ್ತಿಯದು. ಯೋಗಾವಸ್ಥೆಯಿಂದ ಇನ್ನಷ್ಟು ಗಾಂಭೀರ್ಯ. ಸುಮಾರು ೫೭ ಅಡಿಯ ಆ ಮೂರ್ತಿಯನ್ನು ಎಷ್ಟು ಯಾರು ನೋಡಿದರೂ ಎಲ್ಲಿಯ ತೃಪ್ತಿ? ಸಮಗ್ರ ಭೂಮಂಡಲದಲ್ಲಿಯ ಒಣ ಹೆಮ್ಮೆಯ ಹುಚ್ಚು ಹಟದ ಹೋರಾಟ ನೋಡಿ, ರೋಸಿ ಸ್ಥಿತಪ್ರಜ್ಞಾವಸ್ಥೆಯಲ್ಲಿ ನಿಂತ ಆ ಮೂರ್ತಿಯ ಭಂಗಿ ನಿಜವಾಗಿಯೂ ಮನೋಹರವಾಗಿ ಗೋಚರಿಸಿತು. ಆಗ ಶೆಲ್ಲೆ ಮಹಾಕವಿಯ ಆಝಿಮ್ಯಾಂಡಿಯಸ್ ಸುನೀತ, ಇಜಿಪ್ತದ ಪಿರ್ಯಾಮಿಡ್ಡುಗಳು ಮನದಾಗಸದಲ್ಲಿ ಮಿಂಚಿ ಹೋದುವು. ಏನೇ ಆಗಲಿ, ೬೦೦ ಸೋಪಾನ ಏರಿ ಮೈ ನುಗ್ಗುನುಗ್ಗು ಮಾಡಿಕೊಂಡರೂ ಆನಂದಕ್ಕೇನೂ ಭಂಗಬರಲಿಲ್ಲ. ಇಂತಹ ಮಹಾಮೂರ್ತಿಯ— ೧೨ ವರ್ಷಕ್ಕೊಮ್ಮೆಯ ಮಹಾ ಮಸ್ತಕಾಭಿಷೇಕಕ್ಕೆ ಲಕ್ಷಾಂತರ ಜನರು ಕೂಡುವದು ಏನು ಹೆಚ್ಚಿನ ಮಾತು? ಶಿಲಾಶಾಸನದ ಕೆಳಗಿನ ಬರೆಹ ಓದಿದಾಗ ಚಾವುಂಡರಾಯ ಮಂತ್ರಿಯ ಕೈವಾಡ, ( ಶಿಲ್ಪಿ ಅರಿಷ್ಟನೇಮಿಯೆಂಬವ ಬೇರೆ ಇದ್ದರೂ )

ಗಂಗರಾಜರ ವೈಭವ, ಬಾಹುಬಲಿ ( ಗೊಮ್ಮಟೇಶ್ವರ ) ಭರತರ ದ್ವಂದ್ವ ಯುದ್ಧ, ತದನಂತರದ ತಮ್ಮನ ವೈರಾಗ್ಯಭಾವ— ಎಲ್ಲ ಐತಿಹಾಸಿಕ ಹಿನ್ನೆಲೆಯಲ್ಲಿ ಸುಳಿದುಹೋದವು. ಸಾವಿರ ವರುಷದ ಹಿಂದಿನ ಉಜ್ವಲ ಸಂಸ್ಕೃತಿ ಮನಸ್ಸಿನಲ್ಲಿ ಭವ್ಯತೆ ದಿವ್ಯತೆ ಹುಟ್ಟಿಸಿದುವು.

ಹಲವು ಗೆಳೆಯರ ಆಗ್ರಹದ ಮೇರೆಗೆ ಈ ವಿಂಧ್ಯಗಿರಿಯನ್ನು ಬಿಟ್ಟು ಮುಂದೆ ಚಂದ್ರಗಿರಿಯೆಂಬ ಎದುರಿಗಿನ ಕಲ್ಲಿನ ಗುಡ್ಡ ಹತ್ತಿದೆವು. ಇತಿಹಾಸ ಸ್ಥಳಪುರಾಣ, ಅರಿಷ್ಟನೇಮಿಯ ಕಲೆ, ಬೆರಳಿನಲ್ಲಿ ಇಜ್ಜೋಡು ಮಾಡಿದ ಅವನ (ದೃಷ್ಟಿ ತೆಗೆಯುವುದೇನೊ) ! ವೈಶಿಷ್ಟ್ಯ—ಚರ್ಚಿಸುತ್ತ ನಡೆದಾಗ ಒಬ್ಬಿಬ್ಬರು ಚಹಾ ಪ್ರೇಮಿಗಳು ಬೇಸತ್ತು— ಬಹುತರ ಉಳಿದವರ ಗೊಳ್ಳು ಹರಟೆಗೆ—'ಅಂಗಡಿ ಎಡೆಗೆ ಧಾವಿಸಿದರು. ಅತಿ ಉತ್ಸಾಹದ ಕೆಲವರು ಕತ್ತಲೆಯಾಗಿದ್ದರೂ ಬ್ಯಾಟರಿಯ ಸಹಾಯದಿಂದ ಅಕ್ಕನ ಬಸದಿ, ಶಾಂತಿನಾಥ ದೇವಾಲಯ, ೨೪ ತೀರ್ಥಂಕರರ ಪ್ರತಿಮೆ ನೋಡಿ ಅತೀವ ತೃಪ್ತಿಪಟ್ಟು ಇಳಿದ ಸ್ಥಳಕ್ಕೆ ಮರಳಿದರು.

ಶ್ರವಣಬೆಳುಕೊಳದ ನೆನಪು ಮಸಳಿಸುವಾಗಲೇ ನಮ್ಮ ಬಾಡಿಗೆಯ ವಾಹನವು ಎಲ್ಲರನ್ನೂ ಬೇಲೂರಿಗೆ ಚೆನ್ನಕೇಶವಸ್ವಾಮಿಯ ಪಾದದಡಿಗೆ— ತಂದಿತ್ತು. ಮುಂಜಾವು ಹತ್ತಕ್ಕೆ ಅಲ್ಲಿಗೆ ಮುಟ್ಟಿದಾಗ ಭಾವುಕರು ಮೊದಲು ದೇವಾಲಯ ಸಂದರ್ಶಿಸಿದರು. ಉಳಿದವರು ಯಥಾಪ್ರಕಾರ ಇಂಟರ್‌ವ್ಹಲ್ಲಿನ ಚಹಕ್ಕೆ ಸನ್ನದ್ಧರಾಗಿ ಆ ಕಾರ್ಯ ಮುಗಿಸಿದರು. ತಾಸಿನ ನಂತರ ಸಮಾಚೀನ ಊಟ. ಮಧ್ಯಾನ್ಹ ನಾಲ್ಕಕ್ಕೆ ಮಾರ್ಗದರ್ಶಕನ ಸಹಾಯ ದಿಂದ ಗುಡಿಯ ಅಂತರಂಗ ಬಹಿರಂಗ ಕಂಡು ಮೂಕ ವಿಸ್ಮಿತರಾದೆವು. ಶಿಲಾಬಾಲಿಕೆಯರಂತೂ ಎಂತಹ ಅರಸಿಕರನ್ನೂ ದಂಗುಬಡಿಸುವರು. ಕಲ್ಲಾಗದೆ ಮೇಣದ ಮೂರ್ತಿಗಳೇ ಅವು ಅನ್ನುವ ಆ ನಯ-ನಾಜೂಕು- ಕಲಾಪ್ರೌಢಿಮೆ ಕಂಡು ಹಸಿವೆ ನೀರಡಿಕೆ ಮರೆತರೇನು ತಪ್ಪು ? ಕನ್ನಡಿ ನೋಡುವ ಬಾಲೆ, ಮುಳ್ಳು ತೆಗೆಯಿಸಿಕೊಳ್ಳುವವಳು, ಉಟ್ಟ ವಸ್ತ್ರದಲ್ಲಿ ಚೇಳಿತ್ತೆಂದು ಝಾಡಿಸಿದಾಗಿನ ಭಾವಪೂರ್ಣ ಮುದ್ರೆಯುಳ್ಳವಳು, ಭರತ ನಾಟ್ಯದ ಭಂಗಿ ಪ್ರದರ್ಶಿಸುವ ಅನೇಕರನ್ನು— ಎಂದೂ ಯಾರೂ ಮರೆಯರು. ಕೆತ್ತನೆಯ ಕುಸುರಿನ ಕೆಲಸ ಇಲ್ಲಿ ಉಜ್ವಲ. ವಿವಿಧ ಗೋಪುರ

ರಾಮಾಯಣ—ಭಾಗವತ— ಮಹಾಭಾರತದ ಅಸಂಖ್ಯ ಸನ್ನಿವೇಶಗಳು ಚಿರಂತನ ಸ್ಫೂರ್ತಿಯ ಆಗರ. 'ಶಿಲೆಯಲ್ಲವಿದು ಕಲೆಯ ಬಲೆಯು' ಎಂಬ ಕೆ ವ್ಹಿ. ಪುಟ್ಟಪ್ಪನವರ ಮಾತೇ ನಿಜ – ಎಂದುಸುರದೆ ವಿಧಿ ಇಲ್ಲವೆನಿಸುವುದು. ಮುಂದೆ ಹಳೇಬೀಡು ಮರುದಿನ ಕಂಡರೂ ಇದರದೇ ಇನ್ನಿಷ್ಟು ಭವ್ಯ ದಿವ್ಯ ಅವತಾರವದು ಎಂದು ಮನವರಿಕೆಯಾಗದೆ ಹೋಗಲಿಲ್ಲ.

ಹಣದ ಕೊರತೆ, ಎಲೆ ಅಡಿಕೆ, ತಂಬಾಕು, ಸುಣ್ಣದ ಕೊರತೆ ಏನೂ ಆಗಲಿಲ್ಲವೆಂದು ಮೋಲ್ವಿಚಾರಕ ಗೆಳೆಯರು ಹರಟುತ್ತ ಸಾಗಿದಾಗ, ಎಲ್ಲ ಕಲೆಗಳ ಆವಾಸವನ್ನು ಹಿಂದೆ ಬಿಟ್ಟೆವೆಂಬ ಹಳಹಳಿಯೇ ಉಳಿದವರ ಮನವನ್ನು ಆವರಿಸಿ ಕ್ಷಣಕಾಲ ಉದ್ವಿಗ್ನತೆ ಉಂಟು ಮಾಡಿತು. "ಜೀವನವೇ ಪ್ರವಾಸ; ಪ್ರವಾಸವೇ ಜೀವನ" ಎಂಬ ಸಿದ್ಧಾಂತವನ್ನು ನಮ್ಮ ಮುಂದಾಳು ಶಿಕ್ಷಕರು ಮಂಡಿಸುವಾಗ ಮೋಟರು ಅರಸಿಕೆರೆ ತಲುಪಿತು. ವಾಯುವೇಗದಿಂದಲ್ಲ! ತನ್ನ ವೇಗದಿಂದಲೆ! ಅರಸಿಕೆರೆಯಿಂದ ಮುಂದೆ ಧಾರವಾಡದವರೆಗೆ ಹೆಚ್ಚಾಗಿ ಇಸ್ಪೇಟಿನ ಆಟವೆ ಹಲವರಿಗೆ ಆಧಾರವಾದರೂ ಒಬ್ಬಿಬ್ಬ ಭಾವಜೀವಿಗಳಿಗೆ ಮಾತ್ರ ಈ ಯಾತ್ರೆಯ ರಸನಿಮಿಷಗಳು ವರ್ಡ್ಸ್‌ವರ್ಥ್ ಮಹಾಕವಿಯ

"For oft, when on my couch I lie
In vacant or in pensive mood,
They flash upon that inward eye
which is the bliss of attitude."

ಎಂಬ ವಿಚಾರಸರಣಿಯನ್ನೇ ನೆನಪಿಗೆ ತಂದುಕೊಟ್ಟವು. ನಿಜವಾದ ಸುಂದರ ವಸ್ತುಗಳು ಮರಳಿ ಮರಳಿ ಮಿಂಚಿ ನಿರಂತರ ಹರುಷ ಹುಟ್ಟಿಸುವುದು ತೀರ ಸಹಜವಲ್ಲವೇ ?